

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 Issue-10 October 2023 ₹ 10/-

## ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಶುಭಾಶಯಗಳು



ಅಕ್ಟೋಬರ್ 02 ರಂದು ಬೆಂಗಳೂರು ಉತ್ತರ ಮತ್ತು ದಕ್ಷಿಣ ಹಾಗೂ ಬಿ.ಬಿ.ಎಂ.ಪಿ ಜಿಲ್ಲಾ ಸಂಸ್ಥೆಗಳ ಸಹಭಾಗಿತ್ವದಲ್ಲಿ **154ನೇ** ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯನ್ನು ವಿಧಾನಸೌಧದ ಬಳಿ ಇರುವ ಗಾಂಧೀಜಿಯವರ ಪ್ರತಿಮೆಯ ಮುಂದೆ **ಸರ್ವಧರ್ಮ ಪ್ರಾರ್ಥನೆಯೊಂದಿಗೆ** ಆಚರಿಸಲಾಯಿತು.
ಈ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.



ಸೆಪ್ಟೆಂಬರ್ 30ರಂದು ರಾಜ್ಯ ಸಂಸ್ಥೆಯಿಂದ ಶಾಂತಿಗೃಹದಲ್ಲಿ ಏರ್ಪಡಿಸಿದ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ–ಶಿಕ್ಷಕಿ ಪ್ರಶಸ್ತಿ ಪಡೆದ ಸ್ಕೌಟರ್ಸ್–ಗೈಡರ್ಸ್ ಶಿಕ್ಷಕರುಗಳಿಗೆ ಮತ್ತು ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದ ಉದ್ಘಾಟನೆಯನ್ನು ರಾಜ್ಯ ಪ್ರಕಟಣಾ ಸಮಿತಿ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾನ್ಯ ಉಪಾಧ್ಯಕ್ಷರಾದ ಕರ್ನಲ್ ಪ್ರೊ. ವೈ.ಎಸ್. ಸಿದ್ದೇಗೌಡ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ರಾಜ್ಯ ಗೈಡ್ ಆಯುಕ್ತೆಯಾದ ಶ್ರೀಮತಿ ಗೀತಾನಟರಾಜ್, ಜಂಟಿ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ಬಸವರಾಜ ಮತ್ತು ಶ್ರೀಮತಿ ಬಿ.ವಿ. ರಾಮಲತಾ ಇತರ ಪದಾಧಿಕಾರಿಗಳು ಭಾಗವಹಿಸಿದ್ದರು.



ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವರುಗಳ ಸಹಯೋಗದಲ್ಲಿ ಸೆಪ್ಟೆಂಬರ್ 2023ರಂದು 'ಸ್ಕೌಟ್–ಗೈಡ್ ಭವನ' ಮಂಗಳೂರು ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ನಡೆದ ಮಾಹಿತಿ ಕಾರ್ಯಾಗಾರವನ್ನು ಡಾ. ಕೆ. ಆನಂದ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ಇವರು ಉದ್ಘಾಟಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಕರೆ ನೀಡಿದರು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಸೆಪ್ಟೆಂಬರ್ 09ರಂದು ಶಿವಮೊಗ್ಗ ಜಿಲ್ಲಾ ಸಂಸ್ಥೆಯಿಂದ ಡಿ.ಡಿ.ಪಿ.ಯು ಕಛೇರಿಯಲ್ಲಿ ಏರ್ಪಡಿಸಿದ ಪದವಿಪೂರ್ವ ಉಪನ್ಯಾಸಕ/ಕಿಯರ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಿ. ಕೃಷ್ಣಪ್ಪ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಎನ್.ಇ.ಎಸ್ ಸಂಸ್ಥೆಯ ಅಕಡೆಮಿಕ್ ಅಡ್ವಾಯ್ಸರ್ ಆದ ಶ್ರೀ ಎ.ಎನ್. ರಾಮಚಂದ್ರ ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪೋಷಕರು
ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು
ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು
ಕೊಂಡಜ್ಜಿ ಬಿ. ಷಣ್ಮುಖಪ್ಪ

ಸಂಪಾದಕರು
ಕೆ. ಗಂಗಪ್ಪಗೌಡ

ಸಹಸಂಪಾದಕರು
ಎನ್. ಶ್ರೀನಿವಾಸನ್

ಸಂಚಾಲಕರು
ಬಿ.ಎಸ್. ರವೀಂದ್ರ

ಸದಸ್ಯರು
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 10 October 2023

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಕನ್ನಡ ರಾಜ್ಯೋತ್ಸವ ...05
Divisional Level Service Camp (C.D Camp) ...06
ರೋವರ್ಸ್, ರೇಂಜರ್ಸ್‌ಗಳ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ ...07
ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ / ಶಿಕ್ಷಕಿ ಪ್ರಶಸ್ತಿ ಪಡೆದ ಸ್ಕೌಟರ್ಸ್, ಗೈಡರ್ಸ್‌ಗಳ ಗೌರವ ಸಮರ್ಪಣಾ ಮತ್ತು ರಾಜ್ಯ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ ಮತ್ತು ಸನ್ಮಾನ ಸಮಾರಂಭ ...08
ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್-ಗೈಡ್) ರವರ ರಾಜ್ಯ ಮಟ್ಟದ ಸಮಾವೇಶ 2023-24 ...10
ನವೆಂಬರ್ 2023ರ ಕಾರ್ಯಕ್ರಮಗಳು ...11
ಜಿಲ್ಲಾ ವಾರ್ತೆಗಳು ...12
ಯುವಕರಲ್ಲಿ ಹೃದಯಾಘಾತ ...36
ಶ್ರದ್ಧಾಂಜಲಿ ...37

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

- ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್–ಗೈಡ್ ಬಂಧುಗಳಿಗೆ**

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ದಸರಾ, ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿಯ ಹಾರ್ದಿಕ ಶುಭಾಶಯಗಳು. ದುಷ್ಟ ಶಕ್ತಿಗಳನ್ನು ಸಂಹಾರಮಾಡಿ, ಶಿಷ್ಟ ಶಕ್ತಿಗಳ ವಿಜಯ ಸಾಧಿಸುವ ಸಂಕೇತವಾದ ವಿಜಯದಶಮಿ, ದೀಪದಿಂದ ದೀಪ ಬೆಳಗುವಂತೆ, ಪ್ರೀತಿಯಿಂದಲೇ ಪ್ರೀತಿಯನ್ನು ಹರಡುವ ಸಂಕೇತವಾದ ದೀಪಾವಳಿಯು ಎಲ್ಲರ ಜೀವನದಲ್ಲಿ ಸಕಾರಾತ್ಮತೆ, ಸಂತೋಷ ಮತ್ತು ಸಮೃದ್ಧಿಯನ್ನು ತರಲೆಂದು ಹಾರೈಸುತ್ತೇನೆ. ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಭಾಷೆಯ ಪ್ರತೀಕವಾದ ಕನ್ನಡ ರಾಜ್ಯೋತ್ಸವವು ನಮ್ಮೆಲ್ಲರಲ್ಲಿ ಭಾಷಾಭಿಮಾನ ಹಾಗೂ ಭಾವೈಕ್ಯತೆಯನ್ನು ಉಂಟುಮಾಡಲೆಂದು ಆಶಿಸುತ್ತೇನೆ.

ಅಕ್ಟೋಬರ್ ತಿಂಗಳು ಎಂದಾಕ್ಷಣ ಇಬ್ಬರು ರಾಷ್ಟ್ರದ ಮಹಾನ್ ವ್ಯಕ್ತಿಗಳ ನೆನಪು ಸಹಜವಾಗಿ ಬರುತ್ತದೆ. ಪೂಜ್ಯರುಗಳಾದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರೀಜಿಯವರುಗಳ ಸರಳತೆ ಮತ್ತು ದೇಶಾಭಿಮಾನ ನಮ್ಮೆಲ್ಲರಿಗೂ ಆದರ್ಶವಾಗಿದ್ದು, ನಾವೆಲ್ಲರೂ ಅವುಗಳನ್ನು ಮೈಗೂಡಿಸಿಕೊಳ್ಳಬೇಕಾಗಿರುವುದು ಅತ್ಯಂತ ಅವಶ್ಯವಾಗಿದೆ. ಮಹಾತ್ಮ ಗಾಂಧೀಜಿಯವರ ರಾಮ ರಾಜ್ಯದ ಕನಸನ್ನು ಹಾಗೂ ಶಾಸ್ತ್ರೀಜಿಯವರ ಜೈ ಜವಾನ್, ಜೈ ಕಿಸಾನ್ ಘೋಷವಾಕ್ಯವನ್ನು ನನಸು ಮಾಡುವಲ್ಲಿ ಯುವಜನತೆಯನ್ನು ಕೊಂಡೊಯ್ಯುವಂತಾಗಬೇಕು.

ಶಿಕ್ಷಕರ ದಿನಾಚರಣೆ ಅಂಗವಾಗಿ ಸೆಪ್ಟೆಂಬರ್ 30 ರಂದು ರಾಜ್ಯದ ಕೇಂದ್ರ ಕಚೇರಿಯಲ್ಲಿ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಅತ್ಯುತ್ತಮ ಶಿಕ್ಷಕ ಮತ್ತು ಶಿಕ್ಷಕಿಯರ ಪ್ರಶಸ್ತಿಗಳಿಗೆ ಪುರಸ್ಕೃತರಾದ ಸ್ಕೌಟರ್ ಗೈಡರ್‌ಗಳಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಹಾಗೂ ಶಿಕ್ಷಕರ ದೇಶಭಕ್ತಿ ಗೀತಗಾಯನ ಸ್ಪರ್ಧೆಯ ವಿಜೇತರ ಅಭಿನಂದನ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಜರುಗಿದವು. ರಾಜ್ಯದ ಎಲ್ಲಾ ಜಿಲ್ಲೆಗಳ ಮಟ್ಟದಲ್ಲಿ ದಳನಾಯಕರುಗಳಿಗೆ ಏರ್ಪಡಿಸಿದ್ದ ಈ ಸ್ಪರ್ಧೆ ನಮ್ಮ ನಾಡಿನ ಸಾಕ್ಷಿಪ್ರಜ್ಞೆಯಾಗಿರುವ ನಾಡೋಜ ಡಾ|| ಗೊ.ರು. ಚನ್ನಬಸಪ್ಪ ಅವರ ಹೆಸರಿನಲ್ಲಿ ಆಯೋಜಿಸಿದ್ದು ಔಚಿತ್ಯಪೂರ್ಣವಾಗಿದ್ದು, ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿತು.

ರಾಜ್ಯಾದ್ಯಂತ ಸ್ಕೌಟ್ಸ್ – ಗೈಡ್ಸ್ ತರಬೇತಿಗಳು ವ್ಯಾಪಕವಾಗಿ ನಡೆಯುತ್ತಿರುವುದು ಸಂತಸದ ಸಂಗತಿ. ಈ ತರಬೇತಿಗಳಿಗೆ ಉಪನ್ಯಾಸಕರುಗಳ ಮತ್ತು ಅಧಿಕಾರಿಗಳ ನಿಯೋಜನೆಯಲ್ಲಿ ಸಂಪೂರ್ಣ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಶಾಲಾ ಶಿಕ್ಷಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಹಾಗೂ ಎಲ್ಲ ವಿಶ್ವವಿದ್ಯಾಲಯಗಳ ಮುಖ್ಯಸ್ಥರಿಗೆ ಮತ್ತು ಅಧಿಕಾರಿಗಳಿಗೆ ರಾಜ್ಯ ಸಂಸ್ಥೆ ಆಭಾರಿಯಾಗಿದೆ.

ಬೆಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಮಂಗಳೂರಿನಲ್ಲಿ ನಡೆದ ವಿಶ್ವವಿದ್ಯಾಲಯಗಳ, ಸರಕಾರಿ, ಅನುದಾನ ಹಾಗೂ ಅನುದಾನರಹಿತ ಪದವಿ ಕಾಲೇಜುಗಳ ಉಪನ್ಯಾಸಕರುಗಳು ಮತ್ತು ಉಪನ್ಯಾಸಕಿಯರಿಗೆ ಒಂದು ದಿನದ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರಗಳು, ಚಿಕ್ಕಮಗಳೂರು, ಕಾರವಾರ, ಶಿರಸಿ, ಕೊಪ್ಪಳ ಮತ್ತು ಬೆಳಗಾವಿಗಳಲ್ಲಿ ನಡೆದ ಸಿಆರ್‌ಪಿ ಮತ್ತು ಬಿಆರ್‌ಪಿಗಳಿಗೆ ಒಂದು ದಿನದ ಮಾಹಿತಿ ಶಿಬಿರಗಳು ನಮ್ಮ ನಿರೀಕ್ಷೆಯಂತೆ ನಡೆದಿವೆ. ಒಂದು ದಿನದ ಶಿಬಿರಗಳಲ್ಲಿ ಭಾಗವಹಿಸಿ, ಮಾಹಿತಿಗಳನ್ನು ಪಡೆದುಕೊಂಡಿರುವ ಕಾಲೇಜುಗಳ ಉಪನ್ಯಾಸಕರುಗಳೆಲ್ಲರು ರೋವರ್–ರೇಂಜರ್ ದಳಗಳ ಬೆಳವಣಿಗೆಗೆ ಒತ್ತು ನೀಡುವ ನಿಟ್ಟಿನಲ್ಲಿ ಸಹಕರಿಸುತ್ತಾರೆಂಬ ವಿಶ್ವಾಸ ನನ್ನದು.

ಹಾಸನದಲ್ಲಿ ತೃತೀಯ ಸೋಪಾನ ಶಿಬಿರ, ಚಿತ್ರದುರ್ಗ, ದಾವಣಗೆರೆ ಮತ್ತು ಮೈಸೂರಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳ ನಿಪುಣ್ ಪರೀಕ್ಷಾ ಶಿಬಿರಗಳು ಯಶಸ್ವಿಯಾಗಿ ನಡೆದಿವೆ. ರಾಜ್ಯ ಮಟ್ಟದ ರೋವರ್ಸ್–ರೇಂಜರ್ಸ್ ಹಾಗೂ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಗಳು ಮಂಗಳೂರು, ಕೊಂಡಜ್ಜಿ, ದೊಡ್ಡಬಳ್ಳಾಪುರದಲ್ಲಿ ಯಶಸ್ವಿಯಾಗಿ ಜರುಗಿದೆ. ಶಿಬಿರದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಗದಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕಾರವಾರ ಜಿಲ್ಲಾ ಸಂಸ್ಥೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಶಿಕ್ಷಕರ ಪ್ರಾಥಮಿಕ ತರಬೇತಿಗಳನ್ನು ಯಶಸ್ವಿಯಾಗಿ ಸಂಘಟಿಸಿರುತ್ತಾರೆ. ರಾಜ್ಯ ಮಟ್ಟದ ಜಿಲ್ಲಾ ತರಬೇತಿ ಆಯುಕ್ತರ ಸಮಾವೇಶವನ್ನು ರಾಜ್ಯ ಸಂಸ್ಥೆ ಮತ್ತು ಬೆಂಗಳೂರು ಪೂರ್ವ ಜಿಲ್ಲೆಯ ಆಶ್ರಯದಲ್ಲಿ ಸಂಘಟಿಸಲಾಗಿದ್ದು, ಈ ಎಲ್ಲಾ ಜಿಲ್ಲಾ ಸಂಸ್ಥೆಗಳಿಗೆ ಅಭಿನಂದನೆಗಳು.

ಸೆಪ್ಟೆಂಬರ್ ತಿಂಗಳಿನಲ್ಲಿ, ಮಾಹಿತಿ ಶಿಬಿರಗಳು ನಡೆದ ಜಿಲ್ಲೆಗಳನ್ನೊಳಗೊಂಡಂತೆ, ಇನ್ನೂ ಹಲವಾರು ಜಿಲ್ಲೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ಹಲವು ಕಡೆ ನನ್ನ ಹುಟ್ಟುಹಬ್ಬದ ನಿಮಿತ್ತ ನನಗೆ ಅಭಿನಂದನೆಗಳನ್ನು ಸಲ್ಲಿಸಿ, ಪ್ರೀತ್ಯಾದಾರಗಳನ್ನು ತೋರಿದ್ದಾರೆ. ಎಲ್ಲರಿಗೂ ನಾನು ಚಿರಋಣಿ.

ನವೆಂಬರ್ ತಿಂಗಳಿನಲ್ಲಿಯೂ ಸಹ ಹಲವಾರು ಕಾರ್ಯಕ್ರಮಗಳಿವೆ. ನವೆಂಬರ್ 7 ಧ್ವಜ ದಿನಾಚರಣೆ. ನವೆಂಬರ್ 14 ಕೊಂಡಜ್ಜಿ ಬಸಪ್ಪನವರ ಸ್ಮರಣೆ ಹಾಗೂ ನವೆಂಬರ್ 19ಕ್ಕೆ ಚಿತ್ರದುರ್ಗದಲ್ಲಿ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳ ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆ. ಬಹುಮುಖ್ಯವಾಗಿ ನವೆಂಬರ್ 26ಕ್ಕೆ ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪುರಸ್ಕಾರ ರ್‍ಯಾಲಿ ನಡೆಯಲಿದೆ. ಈ ಎಲ್ಲ ಕಾರ್ಯಕ್ರಮಗಳಿಗೆ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರುಗಳು, ಸ್ಕೌಟ್ಸ್–ಗೈಡ್ಸ್‌ಗಳ ಹಾಗೂ ಪೋಷಕರ ಸಹಕಾರವನ್ನು ನಿರೀಕ್ಷಿಸುತ್ತೇನೆ.

ಇತ್ತೀಚೆಗೆ ಕೆಲವು ಕಡೆಗಳಲ್ಲಿ ಅಗ್ನಿ ಅವಘಡಗಳು ಸಂಭವಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು, ಈ ಬಾರಿ ನಾವೆಲ್ಲರೂ "ಹಸಿರು ದೀಪಾವಳಿಯ" ಆಚರಣೆಗೆ ಸಂಕಲ್ಪ ತೊಡೋಣ.

ಚೀನಾದ ಹಾಂಗ್‌ಝೌನಲ್ಲಿ ನಡೆದ ಹತ್ತೊಂಬತ್ತನೇ ಏಷ್ಯನ್ ಕ್ರೀಡಾಕೂಟದಲ್ಲಿ ಒಟ್ಟು 107 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸುವ ಮೂಲಕ ಭಾರತದ ಕ್ರೀಡಾಪಟುಗಳು ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆದು, ಕೀರ್ತಿಪತಾಕೆಯನ್ನು ಹಾರಿಸಿದ್ದಾರೆ. ಈ ವಿಶಿಷ್ಟ ಸಾಧನೆಗೆ ಕಾರಣರಾಗಿರುವ ರಾಷ್ಟ್ರದ ಹೆಮ್ಮೆಯ ಕ್ರೀಡಾಪಟುಗಳಿಗೆ ಹೃತ್ಪೂರ್ವಕವಾದ ಅಭಿನಂದನೆಗಳು..

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಇಂದು ನಾವು ವ್ಯರ್ಥ ಮಾಡುವ ಆಹಾರವೇ ನಾಳಿನ ಕೊರತೆಗೆ ನಾಂದಿಯಾಗುತ್ತದೆ.
ಆಹಾರ ವ್ಯರ್ಥ ಮಾಡುವುದನ್ನು ತಪ್ಪಿಸಿ.

ಕನ್ನಡ ಉಳಿಸಿ... ಕನ್ನಡ ಬೆಳೆಸಿ... ಕನ್ನಡವನ್ನೇ ಬಳಸಿ –ಪು.ತಿ. ನರಸಿಂಹಾಚಾರ್

# ಕನ್ನಡ ರಾಜ್ಯೋತ್ಸವ




**ನಾಡೋಜ ಡಾ. ಗೊ.ರು. ಚೆನ್ನಬಸಪ್ಪ**

ಗೌರವಾಧ್ಯಕ್ಷರು

ಪ್ರಕಟಣೆಗಳ ಸಮಿತಿ, ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ


ನಮ್ಮ ಕನ್ನಡ ನೆಲಕ್ಕೆ ಸುದೀರ್ಘವಾದ ಇತಿಹಾಸವಿದೆ, ಪರಂಪರೆಯಿದೆ, ಮಹಾಭಾರತದಂತಹ ಪ್ರಾಚೀನ ಗ್ರಂಥದಲ್ಲೇ 'ಕರ್ನಾಟಕ' ಹೆಸರಿನ ಪ್ರಸ್ತಾಪವಿದೆ.

ನಮಗೆಲ್ಲ ತಿಳಿದಿರುವಂತೆ ಬ್ರಿಟಿಷರ ಕಾಲದಲ್ಲಿ ಕನ್ನಡನಾಡು ಹಲವಾರು ಆಡಳಿತಗಳಲ್ಲಿ ಹಂಚಿಹೋಗಿತ್ತು. ಕನ್ನಡಿಗರ ಸುದೀರ್ಘ ಹೋರಾಟದ ಫಲವಾಗಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಆ ಹಂಚಿಹೋಗಿದ್ದ ಕನ್ನಡದ ಭಾಗಗಳೆಲ್ಲವನ್ನು ಒಂದುಗೂಡಿಸಿ ವಿಶಾಲ ರಾಜ್ಯವನ್ನು ರಚಿಸಲಾಯಿತು. ಹಾಗೆ ರೂಪುಗೊಂಡ ಸಂಭ್ರಮದ ಮೊದಲ ಕನ್ನಡ ರಾಜ್ಯೋತ್ಸವ ನಡೆದದ್ದು 1956ರ ನವೆಂಬರ್ ಒಂದರಂದು. ಆ ಉತ್ಸವವನ್ನು ನಾವು ಪ್ರತಿವರ್ಷ ಆಚರಿಸಿಕೊಂಡು ಬರುತ್ತಿದ್ದೇವೆ.

ಈ ಆಚರಣೆ ಕೇವಲ ಔಪಚಾರಿಕವಾಗಬಾರದು. ಇದು ನಮ್ಮ ನಾಡಿನ ಇತಿಹಾಸವನ್ನು ಸ್ಮರಿಸಿಕೊಂಡು, ಆ ಇತಿಹಾಸದ ವೈಭವವನ್ನು ಪುನರುತ್ಥಾನಗೊಳಿಸುವ ಒಂದು ಮಹತ್ವದ ಸಂದರ್ಭವಾಗಬೇಕು.

ಒಂದು ಕಾಲದಲ್ಲಿ ನಮ್ಮ ನೆಲವನ್ನು ಚರಿತ್ರ ಪ್ರಸಿದ್ಧ ಅಶೋಕಚಕ್ರವರ್ತಿ ಆಳಿದ್ದಾನೆ. ಶಾತವಾಹನರು, ಪಲ್ಲವರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿ-ಕಿತ್ತೂರು ವಂಶದವರು, ಮೈಸೂರು ರಾಜರು ಈ ನಾಡಿನ ರಾಜ್ಯಭಾರ ನಡೆಸಿದ್ದಾರೆ.

ಸಾವಿರ ವರ್ಷಗಳ ಹಿಂದೆ ಮಧ್ಯಭಾರತದವರೆಗೆ ರಾಷ್ಟ್ರಕೂಟರ ಪರವಾಗಿ ಹೋರಾಡಿದ ಮಾರಸಿಂಹ ಕನ್ನಡಿಗ , ಕಂಚಿಯ ಪಲ್ಲವ ಪರಮೇಶ್ವರನನ್ನು ಸೋಲಿಸಿ, ಅವನ ಕಂಠದ ಹಾರವನ್ನೇ ಕಿತ್ತ ಭೂವಿಕ್ರಮ ಕನ್ನಡಿಗ, ಲೋಕಪ್ರಸಿದ್ಧ ಗೋಮ್ಮಟೇಶ್ವರನ ಏಕಶಿಲಾಮೂರ್ತಿಯನ್ನು ಕೆತ್ತಿಸಿ ಸ್ಥಾಪಿಸಿದ ಚಾವುಂಡರಾಯ ನಮ್ಮವನು. ಉತ್ತರಭೂಪ ಹರ್ಷ ಚಕ್ರವರ್ತಿಯನ್ನು ಸೋಲಿಸಿ 'ದಕ್ಷಿಣ ಪಥೇಶ್ವರ' ಎಂಬ ಬಿರುದು ಪಡೆದ ಇಮ್ಮಡಿ ಪುಲಿಕೇಶಿ, ಸಿಂಹಳದಿಂದ ಹಿಮಾಲಯದವರೆಗೆ, ಗುಜರಾತಿನಿಂದ ಬಂಗಾಳದವರೆಗೆ ಅಖಂಡ ಭಾರತವನ್ನು ಗೆದ್ದ ರಾಷ್ಟ್ರಕೂಟರ ಗೋವಿಂದ, ರಾಜ್ಯಕ್ಕೆ ಕ್ಷಾಮ ಬಂದಾಗ ಮಹಾಲಕ್ಷ್ಮಿಗೆ ತನ್ನ ಬೆರಳನ್ನೇ ಒಪ್ಪಿಸಲು ಸಿದ್ಧನಾದ ರಾಜ ಅಮೋಘವರ್ಷ ನೃಪತುಂಗ, ತಮಿಳು ಪಲ್ಲವರು ನಮ್ಮ ಬಾದಾಮಿಯನ್ನು ಗೆಲ್ಲುವಾಗ ಅದಕ್ಕೆ ಬೆಂಕಿಯಿಟ್ಟು ಸುಟ್ಟರೂ, ಕಂಚಿಯನ್ನು ಗೆದ್ದಾಗ ಅದನ್ನು ಸುಡದೆ ಬಿಟ್ಟು ಔದಾರ್ಯವನ್ನು ತೋರಿದ ವಿಜಯಾದಿತ್ಯ, ಪ್ರಜೆಗಳ ಕ್ಷೇಮವೇ ಅಧಿಕಾರದಿಂದ ಪಡೆಯುವ ಫಲ ಎಂದು ಸಾರಿದ ಗಂಗರು, ಯುದ್ಧಭೂಮಿಯಲ್ಲಿ ಪುರುಷರಿಗಿಂತ ಮಿಗಿಲಾಗಿ ಹೋರಾಡಿ 'ರಣಭೈರವಿ' ಎನಿಸಿಕೊಂಡ ಅಕ್ಕಾದೇವಿ, ವಿಶ್ವದ ಇತಿಹಾಸದಲ್ಲೇ ಮೊಟ್ಟಮೊದಲ ಮಹಿಳಾ ಸೈನ್ಯವನ್ನು ಕಟ್ಟಿ ಬೆಳೆಸಿದ ಬೆಳವಡಿ ಮಲ್ಲಮ್ಮ, ಇಪ್ಪತ್ತಾರು ವರ್ಷಗಳ ಕಾಲ ಅದ್ವಿತೀಯ ಆಡಳಿತ ನಡೆಸಿದ ಕೆಳದಿ ಚೆನ್ನಮ್ಮ, ಬರ್ಬರ ಬ್ರಿಟಿಷರ ವಿರುದ್ಧ ಖಡ್ಗ ಹಿಡಿದು ಹೋರಾಡಿದ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಲೋಕಚರಿತ್ರೆಯಲ್ಲೇ ಅಪೂರ್ವವೆನಿಸುವ ಸಮಾಜೋ-ಧಾರ್ಮಿಕ ಕ್ರಾಂತಿಯ ನೇತಾರನಾಗಿದ್ದ ಬಸವಣ್ಣ, ವಿಶ್ವಸೋಜಿಗದ ಆತ್ಮಜ್ಞಾನಿ ಅಲ್ಲಮಪ್ರಭು, ಆರು ನೂರು ವರ್ಷಗಳ ಹಿಂದೆಯೇ ಚೈನಾ ದೇಶಕ್ಕೆ ಕನ್ನಡ ರಾಯಭಾರಿಯನ್ನು ನಿಯೋಜಿಸಿದ ಬುಕ್ಕರಾಯ, ಬೆಂಗಳೂರು ನಗರ ನಿರ್ಮಾಪಕ ಕೆಂಪೇಗೌಡ, ಕನ್ನಡದ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಪಂಪ, ರನ್ನ, ಪೊನ್ನ, ಜನ್ನ, ಹರಿಹರ, ರಾಘವಾಂಕ, ಚಾಮರಸ, ಲಕ್ಕಣದಂಡೇಶ, ಸರ್ವಜ್ಞ, ಷಡಕ್ಷರಿ, ಕನಕ-ಪುರಂಧರ ಇತ್ಯಾದಿ ಇವರೆಲ್ಲ ಕನ್ನಡಿಗರು.

ಮುಸಲ್ಮಾನರಿಗೆ ಮಸೀದಿ ಕಟ್ಟಿಸಿಕೊಟ್ಟ ವಿಜಯನಗರದ ಇಮ್ಮಡಿ ದೇವರಾಯ, ಹಿಂದೂ ಸಂಗೀತವನ್ನು ಮುಸಲ್ಮಾನ ಬಂಧುಗಳಿಗೆ ಪರಿಚಯಿಸಲು 'ಕಿತಾಬ್-ಎ-ನವರಸ್' ಎಂಬ ಕೃತಿಯನ್ನು ರಚಿಸಿದ ಇಬ್ರಾಹಿಂ, ವಿಶ್ವವಿಸ್ಮಯದ ಎಲ್ಲೋರದ ಕೈಲಾಸನಾಥ ದೇವಾಲಯವನ್ನು ರೂಪಿಸಿದ ರಾಷ್ಟ್ರಕೂಟರ ಒಂದನೆಯ ಕೃಷ್ಣ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಹಳೇಬೀಡು, ಬೇಲೂರು, ಇಟ್ಟಗಿ, ಅಮೃತಾಪುರ, ಸೋಮನಾಥಪುರ ದೇವಾಲಯಗಳ ಶಿಲ್ಪ ಸೌಂದರ್ಯ, ಜಗತ್ತಿನ ಇತಿಹಾಸದಲ್ಲೇ ಅತ್ಯಂತ ಸುಂದರ ನಗರವೆನಿಸಿದ್ದ ಹಂಪಿ, ಅಲ್ಲಮ-ಅಕ್ಕಮಹಾದೇವಿಯರಂತಹ ಅನುಭವಿಗಳಿಗೆ ಜನ್ಮನೀಡಿದ ಬನವಾಸಿ-ಉಡುತಡಿ, ಮಾನವ ಘನತೆ ಮತ್ತು ಸಮಾನತೆಗಳನ್ನು ಎತ್ತಿ ಹಿಡಿದು ಸಕಲ ಜೀವರಾಶಿಗಳಿಗೂ ಲೇಸನ್ನೇ ಬಯಸಿದ ಕ್ರಾಂತಿ ನಡೆದ ಕಲ್ಯಾಣ-ಇವೆಲ್ಲ ಕನ್ನಡ ನಾಡಿನ ಭಾವೈಕ್ಯತೆ ಮತ್ತು ಶಿಲ್ಪ ಸೌಂದರ್ಯದ ಹೆಮ್ಮೆಯ ತಾಣಗಳು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರು ತಮ್ಮದೇ ಆದ ಪಾತ್ರವಹಿಸಿದ್ದಾರೆ. ದೇಶದ ಪ್ರತಿಷ್ಠಿತ 'ಜ್ಞಾನಪೀಠ ಪ್ರಶಸ್ತಿ' ಪಡೆದ ಕುವೆಂಪು, ಬೇಂದ್ರೆ. ಮಾಸ್ತಿ, ಕಾರಂತ, ಗೋಕಾಕ್, ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಕಂಬಾರ ಇವರು ಇಡೀ ದೇಶಕ್ಕೆ ಪರಿಚಿತರಾದ ಕನ್ನಡದ ಮೇರು ಶಿಖರಗಳು.

ಇಂತಹ ಬೃಹತ್ ಪ್ರಮಾಣದ ಹಿನ್ನಲೆಯಿರುವ ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ಅಧಿಕೃತ ನಾಮಕರಣವಾದದ್ದು, ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ, 1972ರಲ್ಲಿ. ಈ ಹೆಮ್ಮೆಯ ನಾಮಕರಣದ ಸುವರ್ಣ ಮಹೋತ್ಸವದ ಆಚರಣೆ ಕಳೆದ ವರ್ಷ(2022) ನಡೆಯಬೇಕಾಗಿತ್ತು. ರಾಜ್ಯ ಸರ್ಕಾರ ಈ ವರ್ಷ ಸುವರ್ಣ ಮಹೋತ್ಸವವನ್ನು ಆಚರಿಸಲು ನಾಡಿನಾದ್ಯಂತ ವೈವಿಧ್ಯ ಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಹರ್ಷದ ಸಂಗತಿ. ಈ ಕಾರಣದಿಂದ ಇದೇ 2023ರ ನವೆಂಬರ್ ಒಂದರ ರಾಜ್ಯೋತ್ಸವ ಆಚರಣೆಗೆ ಒಂದು ವಿಶೇಷತೆ ಇದೆ ಎಂದು ಹೇಳಬೇಕು.

ಕನ್ನಡನಾಡು ತನ್ನ ನಿಸರ್ಗ ಸಂಪತ್ತಿನಲ್ಲಿ ಭಾರತದ ಬೇರಾವ ರಾಜ್ಯಗಳಿಗೂ ಕಡಿಮೆಯಿಲ್ಲ. ಹಾಗೆಯೇ ಕವಿಗಳು, ಸಾಹಿತಿಗಳು, ಧರ್ಮಗುರುಗಳು, ಪ್ರಬುದ್ಧ ರಾಜಕಾರಣಿಗಳು, ಪ್ರಗತಿಪರ ಕೃಷಿಕರು, ಸಾಹಸಿ ಉದ್ಯಮಿಗಳು, ವಿಜ್ಞಾನಿಗಳು, ಕಲಾವಿದರು ಮೊದಲಾದವರಲ್ಲೂ ಶ್ರೀಮಂತವಾಗಿದೆ.

ನಮ್ಮ ರಾಜ್ಯೋತ್ಸವ ಸಂದರ್ಭದಲ್ಲಿ ನಾಡಿನ ಭೂತಕಾಲದ ಚರಿತ್ರೆಯನ್ನು ಸ್ಮರಿಸಿ, ವರ್ತಮಾನದ ಸ್ಥಿತಿ-ಗತಿಗಳನ್ನು ಗಮನಿಸಿ, ಭವಿಷ್ಯದ ಗತಿಯನ್ನು ರೂಪಿಸುವ ಸಂಕಲ್ಪ ಮಾಡಬೇಕು. ಈ ಸಲದ ರಾಜ್ಯೋತ್ಸವ ಅಂತಹ ಸಂಕಲ್ಪದ ಸಂದರ್ಭವಾಗಲಿ ಎಂದು ಆಶಿಸುತ್ತೇನೆ.




# DIVISIONAL LEVEL SERVICE CAMP (C.D Camp)

The Divisional Level Service Camp was held from 25th to 28th September 2023 at Dr. Annie Besant Scouts and Guides State Training and Camping Centre, Doddaballapura, Bengaluru Rural District. 60 Rovers and 29 Rangers drawn from BBMP, Bengaluru North, Bengaluru South, Bengaluru Rural, Bengaluru East, Ramanagara, Tumakuru and Hassan Districts participated in the SERVICE CAMP.

Sri M.A. Chellaiah, Former Joint State Secretary, Bharat Scouts and Guides Inaugurated the Camp. In his Inaugural address he said that participation of Rovers and Rangers in the Service Camp will help them to strengthen their young minds to become a better Boy and Girl. He congratulated them for their active participation during the camp. Sri Nagaraj, District Chief Commissioner, Bengaluru Rural District and Sri L.T. Lokesh, Assistant State Secretary were present.

The Service Camp was Co-ordinated by Sri R.G. Girish, Rover Scout Leader, Hassan, assisted by Sri Kumarswamy, Rover Scout Leader and Smt. Kanchanamal Senior Guide Captain, Hassan District. 5 staff members of the camp also actively participated in the cleaning campaign.

The following areas were cleaned by the Rovers and Rangers. (1) Gandhi Bhavan Area (2) Main Gate to Ananth Raman Circle both the side (3) B.P. Bhavan Dormitory Area (4) Campfire Circle (5) Kanteerava Bhavan (6) Multipurpose Building (7) Swimming Pool and Camping Area

During the evening times Sri L.T. Lokesh, Assistant Secretary organized classes on (a) Fundamentals of Scouting - Guiding (b) History of the Movement (c) Different sections of the Movement Sri M.A. Chellaiah organized a Group Discussion on "Community, the Rover Crew and the Ranger Team".

The valedictory function was held on 28th September 2023.





# ರೋವರ್ಸ್, ರೇಂಜರ್ಸ್‌ಗಳ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ

ಅಕ್ಟೋಬರ್ 5 ರಿಂದ 7ರ ವರೆಗೆ ಶ್ರೀ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಗದಗ, ಹಾಸನ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಒಟ್ಟು 125 ರೋವರ್ಸ್, 121 ರೇಂಜರ್ಸ್ ಮತ್ತು 2 ಸ್ಕೌಟ್ಸ್ ಒಟ್ಟು 248 ರೋವರ್ಸ್, ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀ ಕೊಟ್ರೇಶ್, ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದಾವಣಗೆರೆ ಇವರು ಶಿಬಿರಕ್ಕೆ ಭೇಟಿ ನೀಡಿ ರೋವರ್ಸ್, ರೇಂಜರ್ಸ್‌ಗಳೊಂದಿಗೆ ಸಂವಾದವನ್ನು ನಡೆಸಿದರು. ಯುವಕ–ಯುವತಿಯರಿಗೆ ಅಗತ್ಯವಾಗಿ ಈ ಸ್ಕೌಟಿಂಗ್ ಶಿಕ್ಷಣದ ಅಗತ್ಯತೆ ಇದೆ, ಎಲ್ಲಾ ಮಕ್ಕಳು ಇಂತಹ ಮಾನವೀಯ ಮತ್ತು ಕೌಶಲ್ಯಾತ್ಮಕ ಶಿಕ್ಷಣದ ತರಬೇತಿ ಪಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.




## State Level Rajyapuraskar Award Testing Camp

### for Rovers & Rangers from 5th to 7th October 2023

| Sl.No. | Camp Centre | Rovers | Rangers | Scout/Guide | LOC's | Observers |
|---|---|---|---|---|---|---|
| 1 | STC, Kondajji | 125 | 121 | 2 | Sri. Rajesh Avalakki<br>Dr. Shakunthala<br>Shivashankare LT(S)<br>Rathna LT(G) | Smt. Manjula.C,<br>SOC(G) |
| 2 | STC,<br>Doddaballapura | 66 | 72 | 1 | Sri. Ganapathi<br>Smt. Arunamala<br>ASOC(G)<br>Smt. B.D. Shantha,<br>LT(G)<br>Sri. TK Narayanaswamy,<br>LT(S) | Smt. Kumari<br>Honnamma, |
| 3 | Pilikula,<br>Dakshina<br>Kannada<br>TOTAL219<br>GRAND TOTAL | 28<br>270 | 77<br>3<br>492 | - | Dr. Ravi<br>Smt. Prabhashree | Sri. Prabhakar Bhat,<br>SOC(S) |

ರಾಜ್ಯ ಸಂಸ್ಥೆ ವತಿಯಿಂದ ಅಕ್ಟೋಬರ್ 05 ರಿಂದ 07ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿರಸಿ ಜಿಲ್ಲೆಯ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳಿಗೆ 2022–23ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ರೋವರ್ಸ್ ಮತ್ತು ರೇಂಜರ್ಸ್ ಪರೀಕ್ಷಾ ಶಿಬಿರವು ನಡೆಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಹಾಗೂ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್‌ರವರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಶುಭ ಹಾರೈಸಿದರು. ರೋವರ್ ವಿಭಾಗ ನಾಯಕರಾಗಿ ಡಾ. ರವಿ ಎಂ.ಎನ್. (ಆರ್‌ಎಸ್‌ಎಲ್), ರೇಂಜರ್ ವಿಭಾಗದ ನಾಯಕಿಯಾಗಿ ಶ್ರೀಮತಿ ಪ್ರಭಾ, ಪ್ರಿ.ಎ.ಎಲ್.ಟಿ (ಆರ್‌ಎಲ್) ಸಹಕರಿಸಿದರು. ರೋವರ್ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ 05, ಉಡುಪಿ ಜಿಲ್ಲೆಯಿಂದ 19, ಶಿರಸಿ ಜಿಲ್ಲೆಯಿಂದ 4 ಒಟ್ಟು 28 ವಿದ್ಯಾರ್ಥಿಗಳು,

ರೇಂಜರ್ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ 6 ಉಡುಪಿ ಜಿಲ್ಲೆಯಿಂದ 57, ಶಿರಸಿ ಜಿಲ್ಲೆಯಿಂದ 14 ಒಟ್ಟು 77 ವಿದ್ಯಾರ್ಥಿಗಳು, ಎರಡೂ ವಿಭಾಗದಿಂದ ಒಟ್ಟು 105 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಪರೀಕ್ಷಾ ಶಿಬಿರವನ್ನು ಸಂಘಟಿಸಿದರು. ಸ್ವಯಂ ಸೇವಕರಾಗಿ ಸರಕಾರಿ ಪ್ರಥಮ ದರ್ಜೆ ಕಾಲೇಜು ವಾಮದಪದವಿನ ರೇಂಜರ್ ಕು. ದೀಪಾ ಹಾಗೂ ಕು. ರಶ್ಮಿತಾರವರು ಸಹಕರಿಸಿದರು.





## ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ / ಶಿಕ್ಷಕಿ ಪ್ರಶಸ್ತಿ ಪಡೆದ ಸ್ಕೌಟರ್ಸ್, ಗೈಡರ್ಸ್‌ಗಳ ಗೌರವ ಸಮರ್ಪಣಾ ಮತ್ತು ರಾಜ್ಯ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ ಮತ್ತು ಸನ್ಮಾನ ಸಮಾರಂಭ

ರಾಜ್ಯ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 30ರಂದು ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ಭಾರತ ರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮ ದಿನಾಚರಣೆ ಪ್ರಯುಕ್ತ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ/ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ಸ್ಕೌಟರ್ಸ್/ ಗೈಡರ್ಸ್‌ರವರಿಗೆ ಸನ್ಮಾನ ಸಮಾರಂಭ ಮತ್ತು ನಾಡೋಜ ಡಾ|| ಗೊ.ರು. ಚನ್ನಬಸಪ್ಪನವರ ಹೆಸರಿನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದಲ್ಲಿ ದಳನಾಯಕರುಗಳಿಗೆ ಏರ್ಪಡಿಸಿದ್ದ ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ ಆಯಾಯ ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ವಿಜೇತರಾದವರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸೆಪ್ಟೆಂಬರ್ 30 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮವನ್ನು ಉದ್ಘಾಟಿಸಿ, ಕರ್ನಾಟಕ ರಾಜ್ಯದಲ್ಲೆ ಪ್ರಥಮ ಬಾರಿಗೆ ವಯಸ್ಕ ನಾಯಕರುಗಳಿಗೆ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಿರುವುದಾಗಿ ಹೇಳಿ, ತಾವುಗಳು ಉತ್ತಮ ಗಾಯಕರುಗಳಾಗಿ ಹೊರಹೊಮ್ಮುವಂತೆ ಉತ್ತೇಜಿಸಿ, ಶುಭ ಕೋರಿದರು. ಒಟ್ಟು 55 ಜನ ಸ್ಕೌಟರ್ಸ್/ ಗೈಡರ್ಸ್ ವಿವಿಧ ಜಿಲ್ಲೆಗಳಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ರವರು ಎಲ್ಲರನ್ನು ಸ್ವಾಗತಿಸಿದರು, ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌ), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀ ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಹಾಗೂ ರಾಜ್ಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಈ ಸ್ಪರ್ಧೆಗೆ ತೀರ್ಪುಗಾರರಾಗಿ ಶ್ರೀಮತಿ ಪಂಕಜೇಶ್ವರಿ, ಶ್ರೀಮತಿ ನಿತ್ಯಾ ಬಸವರಾಜ್, ಶ್ರೀಮತಿ ಸ್ಮಿತಾಗಣೇಶ ಮತ್ತು ಕುಮಾರಿ ದೀಕ್ಷಾ ರಾಮಕೃಷ್ಣ ರವರುಗಳು ಆಗಮಿಸಿದ್ದರು. ಸ್ಪರ್ಧೆಯಲ್ಲಿ ವಿಜೇತರಾದವರ ಹೆಸರು ಈ ಕೆಳಕಂಡಂತಿದೆ.

| ಕ್ರ.ಸಂ | ಸ್ಥಾನಗಳು | ಸ್ಕೌಟರ್ | ಗೈಡರ್ |
|---|---|---|---|
| 1 | ಪ್ರಥಮ ಸ್ಥಾನ | ಶ್ರೀ ಪದ್ಮರಾಜ್ ಅಳಪ್ಪನವರ್, ಬೆಳಗಾವಿ ಜಿಲ್ಲೆ. | ಶ್ರೀಮತಿ ವಿದ್ಯಾ ಎಸ್, ಶಿವಮೊಗ್ಗ ಜಿಲ್ಲೆ. |
| 2 | ದ್ವಿತೀಯ ಸ್ಥಾನ | ಶ್ರೀ ಶರಣಬಸಪ್ಪ ಬಿ, ಬಳ್ಳಾರಿ. | ಶ್ರೀಮತಿ ಸುಧಾರಾಣಿ, ದಕ್ಷಿಣ ಕನ್ನಡ ಜಿಲ್ಲೆ. |
| 3 | ತೃತೀಯ ಸ್ಥಾನ | ಶ್ರೀಮತಿ ಸುಜಾತ ಶಾಂತರಾಮ ಶೆಟ್ಟಿ, ಉಡುಪಿ ಜಿಲ್ಲೆ. | ಶ್ರೀಮತಿ ಶ್ರೀಲಕ್ಷ್ಮೀ, ಮೈಸೂರು ಜಿಲ್ಲೆ. |



**2023–24**ನೇ ಸಾಲಿನಲ್ಲಿ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ/ ಶಿಕ್ಷಕಿ ಪ್ರಶಸ್ತಿ ಪಡೆದಿರುವ 25 ಸ್ಕೌಟರ್ಸ್, ಗೈಡರ್ಸ್ ಶಿಕ್ಷಕರುಗಳಿಗೆ ಮತ್ತು ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ ವಿಜೇತರಾದ ಹಾಗೂ ಭಾಗವಹಿಸಿದವರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದ್ದು ಸದರಿ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪಿ.ಜಿ.ಆರ್ ಸಿಂಧ್ಯರವರು, ರಾಜ್ಯ ಮುಖ್ಯ ಆಯುಕ್ತರವರು ವಹಿಸಿದ್ದರು. ಕರ್ನಲ್ (ಪ್ರೊ) ವೈ.ಎಸ್. ಸಿದ್ದೇಗೌಡ ಎಂಎಸ್‌ಡಬ್ಲ್ಯೂ, ಪಿಎಚ್‌ಡಿ., ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗಿಸುವುದರ ಮೂಲಕ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಸಾಹಿತಿಗಳು ಮತ್ತು ಅಧ್ಯಕ್ಷರು ಪ್ರಕಟಣಾ ಸಮಿತಿ ಭಾ.ಸ್ಕೌ ಮತ್ತು ಗೈ, ಕರ್ನಾಟಕ ಮತ್ತು ಶ್ರೀ ಗುಬ್ಬಿಗೂಡು ರಮೇಶ್ ಸಹ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಉಪಸ್ಥಿತರಿದ್ದರು.

ಶ್ರೀಮತಿ ಪಲ್ಲವಿ ನಾಡಕರ್ಣಿ, ಲೇಡಿ ಕಬ್ ಮಾಸ್ಟರ್, ಬೆಳಗಾವಿ ಜಿಲ್ಲೆ. ಗೌರವಾನ್ವಿತ ರಾಷ್ಟ್ರಪತಿಗಳಾಗಿರುವ ಶ್ರೀಮತಿ ದ್ರೌಪದಿ ಮುರ್ಮುರವರನ್ನು ಆಗಸ್ಟ್ 30 ರಂದು ಸ್ವತಃ ಭೇಟಿಮಾಡಿ, ರಾಖಿ ಕಟ್ಟುವ ಮೂಲಕ ಹೃದಯಪೂರ್ವಕ ವಂದನೆಗೈಯುವ ಅವಕಾಶವನ್ನು ಪಡೆದವರಾಗಿದ್ದರು. ದೇಶದ ರಕ್ಷಣಾ ಕಾರ್ಯದಲ್ಲಿ ಮುಂಚೂಣಿಯಾಗಿ ನಿರಂತರ, ನಿಸ್ವಾರ್ಥಸೇವೆಗೈಯುತ್ತಿರುವ, ಜೋದ್‌ಪುರ್ ಗಡಿ ಪ್ರದೇಶದ ಸೈನಿಕರಿಗೆ ಸೋದರಿಯಾಗಿ, ರಕ್ಷಣಾ ಪ್ರತೀಕವಾಗಿ ಸ್ಕೌಟ್, ಗೈಡ್ ವಿದ್ಯಾರ್ಥಿಗಳಿಂದ ರಾಖಿಯನ್ನು ಕಟ್ಟಿಸುವ ಮೂಲಕ ಹೊಸ ಸಂದೇಶ ಸಾರಿದ್ದರು. ಶ್ರೀಮತಿ ವಂದನಾ ರೈ ಫ್ಲಾಕ್ ಲೀಡರ್ ಉಡುಪಿ ಜಿಲ್ಲೆ. ಇವರು ಸಂಗೀತ, ನೃತ್ಯ ಕಲೆಯಲ್ಲಿ ನೈಪುಣ್ಯ ಹೊಂದಿದ್ದು, ಮಕ್ಕಳೊಂದಿಗೆ ಹಾಡುತ್ತಾ, ಆದರ್ಶ ಶಿಕ್ಷಕಿಯಾಗಿ, ಫ್ಲಾಕ್ ಲೀಡರ್ ಆಗಿ ಸೇವೆಸಲ್ಲಿಸುತ್ತಿದ್ದಾರೆ. ಶ್ರೀಮತಿ ರಿಜ್ವಾನ ಗೈಡ್ ಕ್ಯಾಪ್ಟನ್, ಬೆಂಗಳೂರು ಪೂರ್ವ ಜಿಲ್ಲೆ ಇವರು ದಾಸಶ್ರೇಷ್ಠರ ಅರಿವಿನ ಅನುಭವದ ನುಡಿ–ಮುತ್ತುಗಳನ್ನು ಮಕ್ಕಳಿಗೆ ಕಲಿಸುವ ಮೂಲಕ ಮೌಲ್ಯಗಳನ್ನು ನೀಡಿದ್ದಾರೆ. ಅಂತಹ ದಾಸರ ಪದಗಳನ್ನು, ತಮ್ಮ ಸುಶ್ರಾವ್ಯ ಕಂಠದೊಂದಿಗೆ ಮಧುರವಾಗಿ ಹಾಡಿ ಜನಸಾಗರಕ್ಕೆ ಹರ್ಷಾಮೃತವನ್ನು ನೀಡುತ್ತಿದ್ದಾರೆ. ಇವರುಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ವಿಶೇಷವಾಗಿ ಗುರುತಿಸಿ, ಆಹ್ವಾನಿಸಿ ಗೌರವಿಸಲಾಯಿತು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, "ಇವರುಗಳು ಶಿಕ್ಷಕ ವೃತ್ತಿಯ ಜೊತೆ ವಿಶೇಷ ಸೇವೆಯನ್ನು ಮಕ್ಕಳಿಗಾಗಿ ಸಲ್ಲಿಸುತ್ತಿರುವುದು ಬಹಳ ಸಂತೋಷದ ವಿಷಯ" ಎಂದು ನುಡಿದರು. ಸನ್ಮಾನಿತರ ಪರವಾಗಿ ಮಾತನಾಡಿದ ಶ್ರೀಮತಿ ಸಪ್ನ ಎಸ್. ಅನಿಗೋಳ, ಗೈಡ್ ಕ್ಯಾಪ್ಟನ್, ಬಾಗಲಕೋಟೆ ಹಾಗೂ ಶ್ರೀ ಎಮ್.ಡಿ. ಹರಿಕಾಂತಾರ, ಸ್ಕೌಟ್ ಮಾಸ್ಟರ್, ಹೊನ್ನಾವರ ಇವರು ಇನ್ನು ಹೆಚ್ಚಿನ ಸೇವೆಯನ್ನು ಮಕ್ಕಳಿಗೆ ಮತ್ತು ಸಮುದಾಯಕ್ಕೆ ಸಲ್ಲಿಸಲು ಸಿದ್ದರಾಗಿದ್ದೇವೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಕಾರ್ಯದರ್ಶಿಗಳು ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ಗೀತಾ ನಟರಾಜ್ ರಾಜ್ಯ ಆಯುಕ್ತರು (ಗೈ) ಪ್ರಾಸ್ತಾವಿಕ ನುಡಿಯನ್ನು ತಿಳಿಸಿ, ಶಿಕ್ಷಕರುಗಳಿಗೆ ನಮನಗಳನ್ನು ಸಲ್ಲಿಸಿದರು. ಶ್ರೀ ಬಿ.ಕೆ. ಬಸವರಾಜ, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌ), ಶ್ರೀ ಎಲ್.ಟಿ. ಲೋಕೇಶ್ ಸಹಾಯಕ ರಾಜ್ಯ ಕಾರ್ಯದರ್ಶಿ, ಶ್ರೀ ಪ್ರಭಾಕರ, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ), ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ಶ್ರೀ ನಾಗೇಶ್ ಆರ್ ಶಿವಪೂರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌ) ಉಪಸ್ಥಿತರಿದ್ದರು. ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ (ಗೈ) ಇವರು ಎಲ್ಲರನ್ನು ವಂದಿಸಿದರು. ಸಮಾರಂಭದಲ್ಲಿ ರಾಜ್ಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.





# ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್-ಗೈಡ್) ರವರ
# ರಾಜ್ಯ ಮಟ್ಟದ ಸಮಾವೇಶ 2023-24



ಅಕ್ಟೋಬರ್ 16 ರಿಂದ 18ರ ವರೆಗೆ ಜಿಲ್ಲಾ ತರಬೇತಿ ಆಯುಕ್ತರ ರಾಜ್ಯ ಮಟ್ಟದ ಸಮಾವೇಶವನ್ನು ರಾಜ್ಯ ಸಂಸ್ಥೆ ಹಾಗೂ ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ, ನ್ಯೂ ಬಾಲ್ಡ್‌ವಿನ್ ಅಂತರರಾಷ್ಟ್ರೀಯ ಶಾಲೆ, ಕೆಂಪಮ್ಮ ಸಂದ್ರ, ಆನೇಕಲ್‌ನಲ್ಲಿ ನಡೆಯಿತು. ಜಿಲ್ಲೆಗಳಿಂದ 38 ಜಿಲ್ಲಾ ತರಬೇತಿ ಆಯುಕ್ತರು ಭಾಗವಹಿಸಿದ್ದರು. ಜಿಲ್ಲಾ ತರಬೇತಿ ಆಯುಕ್ತರಗಳ ಕರ್ತವ್ಯಗಳ ಬಗ್ಗೆ, ತರಬೇತಿದಾರರ ಪಾತ್ರ & ಕೌಶಲ್ಯಗಳ ಬಗ್ಗೆ, ನಾಯಕತ್ವಗಳ ಬಗ್ಗೆ, ತರಬೇತಿ ವಿಷಯ, ಸಮುದಾಯ ಅಭಿವೃದ್ಧಿ, ಪ್ರಧಾನಮಂತ್ರಿ ಪಾರಿತೋಷಕ, ಉಪರಾಷ್ಟ್ರಪತಿ ಆವಾರ್ಡ್, ಸಾರ್ವಜನಿಕ ಸಂಪರ್ಕ, ಮೂಲಭೂತ ತತ್ವಗಳು ತರಬೇತಿ ಅಧ್ಯಯನ ಮತ್ತು ಅಭ್ಯಾಸ ಹಾಗೂ ತರಬೇತಿ ಆಯುಕ್ತರುಗಳಿಗೆ ಕರ್ತವ್ಯ ಪ್ರಾಯೋಗಿಕವಾಗಿ ಬಿ.ಪಿ.ಸಿಕ್ಸ್, ಕರ್ತವ್ಯ ಬದಲಾವಣೆ, ಧ್ವಜಾರೋಹಣ ಆಟಗಳ ಸೃಷ್ಟಿ ಮುಂತಾದ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅಕ್ಟೋಬರ್ 16 ರಂದು ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ಜಿಲ್ಲಾ ತರಬೇತಿ ಆಯುಕ್ತರನ್ನು ಪ್ರೋತ್ಸಾಹಿಸಿ ಜಿಲ್ಲೆಯಲ್ಲಿ ತರಬೇತಿ ತಂಡವನ್ನು ಅಭಿವೃದ್ಧಿ ಪಡಿಸುವಂತೆ ಕೋರಿದರು. ಅಕ್ಟೋಬರ್ 17 ರಂದು ಶ್ರೀಮತಿ ಜಯಲಕ್ಷ್ಮೀ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಭಾಗವಹಿಸಿದ್ದರು.

ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಇವರು ನಾಯಕರಾಗಿ, ಶ್ರೀ ಎನ್. ಶ್ರೀನಿವಾಸನ್, ಎ.ಎಸ್.ಸಿ (ಸ್ಕೌ), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಜಂಟಿ ಆಯುಕ್ತರು (ಗೈ), ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್), ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ). ಶ್ರೀಮತಿ ಕೆ.ವಿ ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀ ನಾಗೇಶ್ ಆರ್. ಶಿವಪೂರ್, ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀ ನರೇಂದ್ರ ಕುಮಾರ್, ಜಿಲ್ಲಾ ಕಾರ್ಯದರ್ಶಿ ಬೆಂಗಳೂರು ಪೂರ್ವ ಸದರಿ ಸಮಾವೇಶಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶ್ರೀ ನರೇಂದ್ರ ಕುಮಾರ್, ಎಲ್.ಟಿ(ಆರ್) ಇವರು ಸಮಾವೇಶದ ಸಂಪೂರ್ಣ ವ್ಯವಸ್ಥೆಯನ್ನು ನಿರ್ವಹಿಸಿದರು. ಅಕ್ಟೋಬರ್ 18ರಂದು ಶಿಬಿರಾರ್ಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಮುತ್ಯಾಲಮಡವು ಹಾಗೂ ತಿಮ್ಮರಾಮಸ್ವಾಮಿ ದೇವರದೇಗುಲಗಳ ವೀಕ್ಷಣೆ ಮಾಡಿದರು. ಜಿಲ್ಲಾ ತರಬೇತಿ ಆಯುಕ್ತರುಗಳ ಸಮಾವೇಶ ಯಶಸ್ವಿಯಾಗಿ ಜರುಗಿತು.





# ನವೆಂಬರ್ 2023ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಕನ್ನಡ ರಾಜ್ಯೋತ್ಸವ | 01.11.2023 | ಎಲ್ಲಾ ಹಂತಗಳಲ್ಲಿ ಸಂಜೆ 4 ಗಂಟೆ |
| 2 | ಕರುನಾಡ ಸಾಂಸ್ಕೃತಿಕ ವೈಭವ (ಆನ್‌ಲೈನ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ) | 01.11.2023 ಸಂಜೆ 4 ಗಂಟೆ | ರಾಜ್ಯ ಹಂತದಲ್ಲಿ |
| 3 | ಬೆಳಗಾವಿ, ಧಾರವಾಡ, ಕಾರವಾರ, ಶಿರಸಿ, ಹಾವೇರಿ, ಗದಗ ಜಿಲ್ಲೆಗಳ ಪದವಿ ಕಾಲೇಜುಗಳ ಉಪನ್ಯಾಸಕರುಗಳ ಪ್ರಾರಂಭಿಕ ಶಿಬಿರ | 03.11.2023 | ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ, ವಿದ್ಯಾನಗರ ಹುಬ್ಬಳ್ಳಿ, ಧಾರವಾಡ ಜಿಲ್ಲೆ |
| 4 | ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಪದವಿ ಕಾಲೇಜಿನ ಉಪನ್ಯಾಸಕರುಗಳಿಗೆ ಪ್ರಾರಂಭಿಕ ಶಿಬಿರ | 04.11.2023 | ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ ಕನ್ನಡ ಸಭಾಭವನ, ವಿಜಯಪುರ |
| 5 | ರೋವರ್ಸ್–ರೇಂಜರ್ಸ್ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ | 04.11.2023 ರಿಂದ 06.11.2023 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ, ಬೆಳಗಾವಿ ಜಿಲ್ಲೆ |
| 6 | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನಾಚರಣೆ ಮತ್ತು ಧ್ವಜ ದಿನಾಚರಣೆ | 07.11.2023 | ಎಲ್ಲಾ ಹಂತಗಳಲ್ಲಿ |
| 7 | ಸ್ಕೌಟ್–ಗೈಡ್ ಸಪ್ತಾಹ ಮತ್ತು ಹಸಿರು ದೀಪಾವಳಿ | 07.11.2023 ರಿಂದ 14.11.2023 | ಎಲ್ಲಾ ಹಂತಗಳಲ್ಲಿ |
| 8 | ಕೊಂಡಜ್ಜಿ ಬಸಪ್ಪರವರ ಸ್ಮರಣೆ | 14.11.2023 | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ |
| 9 | ರಾಜ್ಯ ಮಟ್ಟದ ರೋವರ್ಸ್–ರೇಂಜರ್ಸ್, ಸ್ಕೌಟ್ಸ್–ಗೈಡ್ಸ್ ಪದಕ ತರಬೇತಿ ಶಿಬಿರ ಮತ್ತು ಕೊಂಡಜ್ಜಿ ಬಸಪ್ಪರವರ ಸ್ಮರಣೆ | 16.11.2023 ರಿಂದ 18.11.2023 | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ |
| 10 | ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ | 19.11.2023 | ಎಸ್.ಆರ್.ಎಸ್ ಸಮೂಹ ಶಾಲೆಗಳು, ವಿಳ್ಳೆಕಾರನಹಳ್ಳಿ, ಹೊಸಪೇಟೆ ರಸ್ತೆ, ಚಿತ್ರದುರ್ಗ |
| 11 | ರಾಜ್ಯ ಪುರಸ್ಕಾರ ರ್‍ಯಾಲಿ– ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್, ನಿಪುಣ್ ರೋವರ್ಸ್–ರೇಂಜರ್ಸ್, ಚತುರ್ಥ ಚರಣ್ ಕಬ್ಸ್, ಹೀರಕ್ ಪಂಕ್ ಬುಲ್‌ಬುಲ್ಸ್ ಪ್ರಶಸ್ತಿ ಪ್ರಧಾನ ಸಮಾರಂಭ | 26.11.2023 | ರಾಜಭವನ, ಬೆಂಗಳೂರು |
| 12 | ರಾಷ್ಟ್ರೀಯ ಮಟ್ಟದ ಏರ್ ಸ್ಕೌಟರ್ಸ್–ಗೈಡರ್ಸ್ ಮೂಲ ತರಬೇತಿ ಶಿಬಿರ | 19.11.2023 ರಿಂದ 25.11.2023 | ಹೆಚ್.ಎ.ಎಲ್, ಬೆಂಗಳೂರು |
| 13 | ಜಿಲ್ಲಾ ಮಟ್ಟದ ಬಿ.ಇ.ಒ, ಡಿ.ಪಿ.ಇ.ಒ, ಟಿ.ಪಿ.ಇ.ಒ, ಬಿ.ಆರ್.ಪಿ ಹಾಗೂ ಸಿ.ಆರ್.ಪಿ ಗಳ ಸಭೆ | – | ಎಲ್ಲಾ ಜಿಲ್ಲಾ ಹಂತದಲ್ಲಿ |
| 14 | ಮಕ್ಕಳ ದಿನಾಚರಣೆ | 14.11.2023 | ಎಲ್ಲಾ ಹಂತಗಳಲ್ಲಿ |

– ರಾಜ್ಯ ಕಾರ್ಯದರ್ಶಿ



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

ಸೆಪ್ಟೆಂಬರ್ 22 ರಂದು ಬಾಗಲಕೋಟೆ ಜಿಲ್ಲಾ ಸಂಸ್ಥೆ ಹಾಗೂ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಜಿಲ್ಲೆಯ ಎಲ್ಲಾ ಹಂತದ ಶಿಕ್ಷಣ ಇಲಾಖೆಯ ಅಧಿಕಾರಿಗಳ ಜಿಲ್ಲಾ ಮಟ್ಟದ ಒಂದು ದಿನದ ಮಾಹಿತಿ ಶಿಬಿರವನ್ನು ವಿಶ್ರಾಂತ ನಿರ್ದೇಶಕರಾದ ಶ್ರೀ ಎಸ್.ಆರ್. ಮನಹಳ್ಳಿ ಹಾಗೂ ಉಪನಿರ್ದೇಶಕರಾದ ಶ್ರೀ ಬಿ.ಕೆ. ನಂದನೂರ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟನೆಯನ್ನು ಮಾಡಿದರು. ಶ್ರೀ ಎಸ್.ಆರ್. ಮನಹಳ್ಳಿರವರು ಸ್ಕೌಟಿಂಗ್–ಗೈಡಿಂಗ್ ಮಹತ್ವವನ್ನು ಮತ್ತು ಅಗತ್ಯಗಳನ್ನು ಅಧಿಕಾರಿಗಳಿಗೆ ತಿಳಿಸಿದರು, ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು(ಗೈ) ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಶ್ರೀ ಆರ್.ಓ. ಗಲಗಲಿ, ಶ್ರೀಮತಿ ಸಪ್ನ ಅನಿಗೋಳ, ಶ್ರೀ ಪ್ರಮೋದ ಚೌಗುಲೆರವರು ಮಾಹಿತಿಯನ್ನು ನೀಡಿದರು. ನಂತರ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಪಡೆದ ಶ್ರೀಮತಿ ಸಪ್ನ ಅನಿಗೋಳರವರಿಗೆ ಸನ್ಮಾನವನ್ನು ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಜಿ.ಎನ್. ಪಾಟೀಲ, ಉಪಾಧ್ಯಕ್ಷರು, ಎಲ್ಲರಿಗೂ ಸ್ಕೌಟ್–ಗೈಡ್ ತಂಡದ ಮಹತ್ವ ಶಾಲೆಯ ವಿದ್ಯಾರ್ಥಿಗಳು ಕಲಿತು ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗುವಂತೆ ಕರೆ ನೀಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಬಿ.ಕೆ. ನಂದನೂರ ಉಪನಿರ್ದೇಶಕರು ಅವರು ಮಾತನಾಡಿ ಸ್ಕೌಟ್–ಗೈಡ್ಸ್ ಪ್ರತಿ ಶಾಲೆಯಲ್ಲಿ ಪ್ರಾರಂಭಿಸುವಂತೆ ಕ್ರಮಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು. ಕಾರ್ಯಕ್ರಮವನ್ನು ಶ್ರೀ ಪ್ರಮೋದ ಚೌಗುಲೆರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಶ್ರೀ ಸಿ.ಎ. ಸಾವಳಗಿ ಹಿರಿಯ ಸ್ಕೌಟ್ ಮಾಸ್ಟರ್, ಉಪನಿರ್ದೇಶಕರು ಕಾರ್ಯಾಲಯದ ಶಿಕ್ಷಣಾಧಿಕಾರಿಗಳಾದ ಶ್ರೀ ಹೆಚ್.ಜಿ. ಮಿರ್ಜಿರವರು ಹಾಗೂ ಜಿಲ್ಲೆಯ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.



## ಬಿ.ಬಿ.ಎಂ.ಪಿ. (ಬೃ.ಬೆಂ.ಮ.ನ. ಪಾಲಿಕೆ)

ಮಹಾತ್ಮಾ ಗಾಂಧೀಜಿಯವರ 154ನೇ ಜನ್ಮ ದಿನಾಚರಣೆ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರೀರವರ ಹುಟ್ಟು ಹಬ್ಬದ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮ ಮತ್ತು ಸರ್ವಧರ್ಮ ಪ್ರಾರ್ಥನೆಯನ್ನು ಬೆಂಗಳೂರಿನ ವಿಧಾನ ಸೌಧದ ಆವರಣದಲ್ಲಿ ಮಹಾತ್ಮ ಗಾಂಧೀಜಿರವರ ಪ್ರತಿಮೆ ಮುಂಭಾಗದಲ್ಲಿ ರಾಜ್ಯ ಸಂಸ್ಥೆಯು ಆಯೋಜಿಸಿತ್ತು, ಸದರಿ ಕಾರ್ಯಕ್ರಮದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಟ್ಟ ಬಿಬಿಎಂಪಿ ಜಿಲ್ಲಾ ಸಂಸ್ಥೆ ವತಿಯಿಂದ ಬಸವನಗುಡಿ ಪ್ರೌಢಶಾಲೆ ಶಾಲೆಯಿಂದ 30 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ದಳನಾಯಕ ಶ್ರೀ ನಿಂಗರಾಜು, ದಳನಾಯಕಿ ಶ್ರೀಮತಿ ದಿವ್ಯಶ್ರೀ, ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ. ಮುನಿಶಾಮಪ್ಪರವರು ಭಾಗವಹಿಸಿದ್ದರು.



* ಬಿ.ಬಿ.ಎಂ.ಪಿ, ಜಿಲ್ಲಾ ಸಂಸ್ಥೆಯ ಶಾಲಾ–ಕಾಲೇಜುಗಳಲ್ಲಿ ಮಹಾತ್ಮಾ ಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರೀರವರ ಜನ್ಮ ದಿನಾಚರಣೆಯ ಅಂಗವಾಗಿ ಅಕ್ಟೋಬರ್ 02 ರಿಂದ 10ರ ವರೆಗೆ ಸೇವೆಯನ್ನು ಜಾಗೃತಿ ಮೂಡಿಸುವ ಸಲುವಾಗಿ ಶಾಲಾ–ಕಾಲೇಜುಗಳ ಅಸುಪಾಸಿನ



ಮಹನೀಯರ ಪ್ರತಿಮೆಗಳನ್ನು ಸ್ವಚ್ಛಗೊಳಿಸುವುದು, ಶಾಲಾ–ಕಾಲೇಜುಗಳ ಸುತ್ತಲಿನ ಆವರಣವನ್ನು ಸ್ವಚ್ಛಗೊಳಿಸುವುದು, ಹಾಗೂ ಸ್ವಚ್ಛತೆ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಜಾಗೃತಿ ಜಾಥಗಳನ್ನು ಘೋಷಣೆ ಪತ್ರಗಳೊಂದಿಗೆ ಏರ್ಪಡಿಸಲಾಗಿತ್ತು.

## ಬೆಳಗಾವಿ

ಅಕ್ಟೋಬರ್ 02 ರಂದು ಬೆಳಗಾವಿ ಜಿಲ್ಲಾ ಸಂಸ್ಥೆ ಇಲ್ಲಿ ಸ್ವಾತಂತ್ರ್ಯದ ನೇತಾರ, ಬಾಪೂಜಿ, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ 154ನೇ ಜನ್ಮ ದಿನಾಚರಣೆ ಅಂಗವಾಗಿ ಗಾಂಧೀಜಿಯವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಲಾಯಿತು. ನಂತರ ಸ್ಕೌಟ್ ಭವನದ ಮುಂಭಾಗದಲ್ಲಿ ಸ್ವಚ್ಛತಾಕಾರ್ಯ ಮಾಡಲಾಯಿತು. ಸದರಿ ಸ್ವಚ್ಚತಾ ಕಾರ್ಯದಲ್ಲಿ ನಗರದ ಆರ್.ಪಿ.ಡಿ. ಮಹಾವಿದ್ಯಾಲಯದ ರೋವರ್‌ಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 05 ರಂದು ಶಾಲಾ ಶಿಕ್ಷಣ ಇಲಾಖೆ, ಉಪ ನಿರ್ದೇಶಕರ ಕಾರ್ಯಾಲಯ, ಬೆಳಗಾವಿ ಮತ್ತು ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಜೈನ್ ಹೆರಿಟೇಜ್ ಶಾಲೆ ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಗಾಯನ ಸ್ಪರ್ಧೆಯನ್ನು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಉದ್ಘಾಟಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಧಾರವಾಡ ಅಪರ ಆಯುಕ್ತರ ಕಾರ್ಯಾಲಯದ ಸಹ ನಿರ್ದೇಶಕ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಉಪಾಧ್ಯಕ್ಷ ಶ್ರೀ ಗಜಾನನ ಮನ್ನಿಕೇರಿ "ಭಾರತ್ ಮತ್ತು ಗೈಡ್ಸ್ ಚಳುವಳಿಯಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಯುತ್ತಾರೆ. ಇದರಿಂದ ದೇಶದಲ್ಲಿ ಭಾವೈಕ್ಯತೆ ಬೆಳೆಯಲು ಸಹಾಯವಾಗುತ್ತದೆ" ಎಂದರು. ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರಿಗೆ 75ನೆಯ ವಸಂತ ಪೂರೈಸಿದ ಹಿನ್ನೆಲೆಯಲ್ಲಿ ಜೈನ್ ಹೆರಿಟೇಜ್ ಶಾಲೆಯ ನಿರ್ದೇಶಕಿ ಶ್ರೀಮತಿ ಶ್ರದ್ಧಾ ಕೆ. ಹಾಗೂ ಬೆಳಗಾವಿ ಜಿಲ್ಲಾ ಸಂಸ್ಥೆಯ ವತಿಯಿಂದ ಜಂಟಿ ನಿರ್ದೇಶಕರಾದ ಶ್ರೀ ಗಜಾನನ ಮನ್ನಿಕೇರಿ ಹಾಗೂ ಜಿಲ್ಲಾ ಪದಾಧಿಕಾರಿಗಳು ಮತ್ತು ಜೈನ್ ಹೆರಿಟೇಜ್ ಶಾಲೆಯ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಬಸವರಾಜ ನಾಲತವಾಡ ಮಾತನಾಡಿದರು. ಬೆಳಗಾವಿ ಜೈನ್ ಹೆರಿಟೇಜ್ ಶಾಲೆಯ ನಿರ್ದೇಶಕಿ ಶ್ರೀಮತಿ ಶ್ರದ್ಧಾ ಕೆ., ಬೆಳಗಾವಿ ನಗರ ಬಿಇಓ ಶ್ರೀಮತಿ ಲೀಲಾವತಿ ಹಿರೇಮಠ ಮಾತನಾಡಿದರು. ಜಿಲ್ಲಾ ಮಟ್ಟದ ಗೀತ ಗಾಯನ ಸ್ಪರ್ಧೆಗೆ ನಿರ್ಣಾಯಕರಾಗಿ ಶ್ರೀ ಅಮಿತ್ ಕುಲಕರ್ಣಿ, ಶ್ರೀ ವಿಶಾಖಾ ದೇಶಪಾಂಡೆ, ಶ್ರೀ ಶ್ರೇಯಾ ದೇಶಪಾಂಡೆ, ಶ್ರೀಮತಿ ಮಂಜುಳಾ





ಮೂಡರವರ, ಶ್ರೀಮತಿ ಅನ್ನಪೂರ್ಣ ಕುರಬೆಟ, ಶ್ರೀಮತಿ ಪಲ್ಲವಿ ನಾಡಕರ್ಣಿ ಕಾರ್ಯನಿರ್ವಹಿಸಿದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಪ್ರಭಾವತಿ ಪಾಟೀಲ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ರಾಜಕುಮಾರ ಕುಂಬಾರ ನಿರೂಪಿಸಿದರು. ಶ್ರೀ ವಿಠಲ ಎಸ್.ಬಿ. ವಂದಿಸಿದರು.

* ಸೆಪ್ಟೆಂಬರ್ 22 ರಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಹಾಗೂ ಬೆಳಗಾವಿ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಉಪ ನಿರ್ದೇಶಕರ ಸಭಾ ಭವನದಲ್ಲಿ ಜಿಲ್ಲಾ ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಮತ್ತು ತಾಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಸಿ.ಆರ್.ಪಿ., ಬಿ.ಆರ್.ಪಿ.ಗಳಿಗೆ ಒಂದು ದಿನದ ಸ್ಕೌಟಿಂಗ್ ಮಾಹಿತಿ ಶಿಬಿರವು ಜರುಗಿತು. ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಸಹ ನಿರ್ದೇಶಕರು, ಅಪರ ಆಯುಕ್ತರ ಕಾರ್ಯಾಲಯ ಧಾರವಾಡ ಶ್ರೀ ಗಜಾನನ ಮನ್ನಿಕೇರಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಪ್ರಭಾವತಿ ಪಾಟೀಲ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸದರಿ ಸಭೆಯಲ್ಲಿ ಕ.ರಾ.ಪ್ರಾ.ಶಾ. ಶಿಕ್ಷಕರ ಸಂಘದ ಪದಾಧಿಕಾರಿಗಳು, ಜಿಲ್ಲಾ ಉಪ ಯೋಜನಾಧಿಕಾರಿಗಳು, ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ ಬಿ.ಇ.ಓ.ಪಿ.ಇ.ಓ. ಶಿಕ್ಷಣ ಸಂಯೋಜಕರು ವಿಷಯ ಪರಿವೀಕ್ಷಕರು ಬಿ.ಆರ್.ಸಿ ಬಿ.ಆರ್.ಪಿ ಸಿ.ಆರ್.ಪಿ. ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಪಿ.ವೈ. ಪಾಟೀಲ ಎ.ಎಲ್.ಟಿ. (ಸ್ಕೌ) ಕಾರ್ಯ ನಿರ್ವಹಿಸಿದರು. ಒಟ್ಟು 185 ಜನ ಭಾಗವಹಿಸಿದ್ದರು. ಶ್ರೀ ಎಸ್.ಎನ್. ತೆಗ್ಗೆಳ್ಳಿ ನಿರೂಪಿಸಿದರು, ಶ್ರೀ ಎನ್.ಜಿ. ಪಾಟೀಲ ಸ್ವಾಗತಿಸಿದರು. ಶ್ರೀ ಡಿ.ಬಿ. ಅತ್ತಾರ ವಂದಿಸಿದರು.



* ಸೆಪ್ಟೆಂಬರ್ 25 ರಂದು ಬೆಳಗಾವಿ ಜಿಲ್ಲಾ ಸಂಸ್ಥೆ ಹಾಗೂ ಉಪ ನಿರ್ದೇಶಕರು ಬೆಳಗಾವಿ (ದಕ್ಷಿಣ) ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ದೈಹಿಕ

ಶಿಕ್ಷಣಾಧಿಕಾರಿಗಳು, ಸಿ.ಆರ್.ಪಿ.ಬಿ.ಆರ್.ಪಿ.ಗಳ ಒಂದು ದಿನದ ಸ್ಕೌಟಿಂಗ್ ಮತ್ತು ಗೈಡಿಂಗ್ ಮಾಹಿತಿ ಕಾರ್ಯಾಗಾರವು ಜಿಲ್ಲಾ ಸ್ಕೌಟ್ ಭವನ ಬೆಳಗಾವಿ ಇಲ್ಲಿ ಜರುಗಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಇಲಾಖಾ ಅಧಿಕಾರಿಗಳ ಕುರಿತು ಮಾತನಾಡುತ್ತಾ ಎಲ್ಲರೂ ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಬನ್ನಿ, ಕಬ್-ಬುಲ್‌ಬುಲ್, ಸ್ಕೌಟ್ ಮತ್ತು ಗೈಡ್ ಘಟಕಗಳ ಪ್ರಾರಂಭಿಸಲು ಸಹಕರಿಸಬೇಕೆಂದು ಹೇಳಿದರು. ಇದೇ ವೇಳೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರನ್ನು ಜಿಲ್ಲಾ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡಿ ನಮ್ಮ ಜಿಲ್ಲೆ ಪ್ರತಿ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಯಾವಾಗಲೂ ಮುಂಚೂಣಿಯಲ್ಲಿ ಇದೆ. ಇದೇ ರೀತಿ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮನ್ವಯಾಧಿಕಾರಿಗಳು, ಸಿ.ಆರ್.ಪಿ.ಬಿ.ಆರ್.ಪಿ.ಗಳು ಸಹಕರಿಸಲು ಹೇಳಿದರು. ಉಪನಿರ್ದೇಶಕರು ಆಡಳಿತ ಬೆಳಗಾವಿ, ಡಯಟ್ ಪ್ರಾಂಶುಪಾಲರಾದ ಶ್ರೀ ಎಸ್.ಡಿ. ಗಾಂಜಿ, ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಮೋಹನ ದಂಡಿನ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಪ್ರಭಾವತಿ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಸ್. ಬೀಳಗಿ ಉಪಸ್ಥಿತರಿದ್ದರು. ಸಿ.ಆರ್.ಪಿ.ಬಿ.ಆರ್.ಪಿ.ಗಳು ಸೇರಿದಂತೆ ಒಟ್ಟು 150 ಜನರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಪ್ರಭಾವತಿ ಪಾಟೀಲ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಡಿ.ಬಿ. ಅತ್ತಾರ ವಂದಿಸಿದರು.



## ಬೆಂಗಳೂರು ದಕ್ಷಿಣ

ಸೆಪ್ಟೆಂಬರ್ 23 ಮತ್ತು 24 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಶಾಂತಿಗೃಹ, ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಜಿಲ್ಲಾ ಮಟ್ಟದ ತೃತೀಯ ಚರಣ್ ಕಬ್ ಮತ್ತು ಸುವರ್ಣ ಪಂಕ್ ಬುಲ್ ಬುಲ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಯಿತು. ಕಬ್ ವಿಭಾಗಕ್ಕೆ ಶ್ರೀಮತಿ ಗೀತಾ ಕೆ.ಎನ್., ಹೆಚ್.ಡಬ್ಲ್ಯೂ.ಬಿ(ಕ) ನಾಯಕರಾಗಿದ್ದರು. ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಏಸಲ್ ಬೆನಟಿಕ್, ಹೆಚ್.ಡಬ್ಲ್ಯೂ.ಬಿ(ಫ್ಲಾಕ್) ನಾಯಕಿಯಾಗಿದ್ದರು. 3 ಶಾಲೆಗಳಿಂದ 59 ಶಿಬಿರಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು.



* ಸೆಪ್ಟೆಂಬರ್ 24 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ದಳ ನಾಯಕರುಗಳ ಗೀತಗಾಯನ ಸ್ಪರ್ಧೆಯನ್ನು ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಆಯೋಜನೆಯನ್ನು ಮಾಡಲಾಯಿತು. ಸ್ಪರ್ಧೆಯ ವಿಜೇತ ತಂಡಗಳಿಗೆ ಪ್ರಶಸ್ತಿ ಮತ್ತು ಪ್ರಮಾಣ ಪತ್ರವನ್ನು ನೀಡಿ ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ತೀರ್ಪುದಾರರು, ಶ್ರೀ ಚಂದ್ರು ಪಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌ), ದಳ ನಾಯಕರುಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 24 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ಚಾಮರಾಜ ಸ್ಥಳಿಯ ಸಂಸ್ಥೆಯ ಕಂಠೀರವ ಮುಕ್ತದಳದ ಗುಂಪಿನ ನಾಯಕರಾದ ಶ್ರೀ ಎಂ. ಶ್ರೀನಿವಾಸ್‌ರವರು ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆಗೆ ಸಲ್ಲಿಸಿದ 70 ವರ್ಷದ ದೀರ್ಘಕಾಲದ ಸೇವೆಯನ್ನು ಗುರುತಿಸಿ ಜಿಲ್ಲಾ ಸಂಸ್ಥೆಯಿಂದ ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಎಂ. ಶ್ರೀನಿವಾಸ್‌ರವರ ಕುಟುಂಬ ವರ್ಗದವರು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಎಂ.ಎ. ಚಲ್ಲಯ್ಯ, ಹಿರಿಯರು, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ), ಕಂಠೀರವ ಮುಕ್ತದಳದ ಸದಸ್ಯರುಗಳು, ದಳ ನಾಯಕರುಗಳು, ಕಬ್-ಬುಲ್‌ಬುಲ್‌ಗಳು ಜಿಲ್ಲೆಯ ರೋವರ್ಸ್-ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



* ಅಕ್ಟೋಬರ್ 02 ರಂದು ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಂಸ್ಥೆಯ ಸಹಭಾಗಿತ್ವದಲ್ಲಿ 154ನೇ ಮಹಾತ್ಮಾ ಗಾಂಧೀಜಿಯವರ ಜನ್ಮ ದಿನಾಚರಣೆಯನ್ನು ವಿಧಾನಸೌಧ ಆವರಣದಲ್ಲಿರುವ ಗಾಂಧೀಜಿಯವರ



ಪ್ರತಿಮೆಯ ಮುಂದೆ ಸರ್ವಧರ್ಮ ಪ್ರಾರ್ಥನೆಯೊಂದಿಗೆ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಿಂದ 65 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದರು.

* ಅಕ್ಟೋಬರ್ 10 ರಂದು ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ ಶಾಲಾ ಶಿಕ್ಷಣ ಇಲಾಖೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಜಿಲ್ಲಾ ಸಂಸ್ಥೆ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಪೂರ್ವ ಜಿಲ್ಲೆ ಸಂಯುಕ್ತಾಶ್ರಯದಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಜಿಲ್ಲೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಶ್ರೀ ಕೊಂಡಜ್ಜಿ ಬಸಪ್ಪ ಸಂಭಾಗಣದಲ್ಲಿ ಆಯೋಜನೆ ಮಾಡಲಾಯಿತ್ತು. ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಕಾರ್ಯಕ್ರಮವನು ಉದ್ಘಾಟಿಸಿ ಸ್ಕೌಟಿಂಗ್‌ನ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಯಲ್ಲಿ ಅತ್ಯುತ್ತಮವಾಗಿ ಅಳವಡಿಸಿಕೊಂಡು ಮಕ್ಕಳನ್ನು ಸತ್ಪ್ರಜೆಯಾಗಿ ಮೂಡಿಸಲು ತಾವೆಲ್ಲರೂ ಸಹಕರಿಸುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಚಿನ್ನಸ್ವಾಮಿ ರೆಡ್ಡಿ, ವಯಸ್ಕ ಸಂಪನ್ಮೂಲ ಆಯುಕ್ತರು, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಪ್ರಸನ್ನಕುಮಾರ್, ಜಿಲ್ಲಾ ಮುಖ್ಯ ಆಯುಕ್ತರು ಬೆಂಗಳೂರು ಉತ್ತರ ಜಿಲ್ಲೆ, ಶ್ರೀ ಬಿ.ಕೆ. ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿಗಳು ಬೆಂಗಳೂರು ಉತ್ತರ ಜಿಲ್ಲೆ, ಶ್ರೀ ನರೇಂದ್ರ, ಬೆಂಗಳೂರು ಪೂರ್ವ ಜಿಲ್ಲೆಯ ಕಾರ್ಯದರ್ಶಿಗಳು. ರಾಜ್ಯ ಸಂಸ್ಥೆಯ ಪಧಾದಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಶಿಕ್ಷಣ ಸಂಸ್ಥೆಯ ಅಧಿಕಾರಿಗಳು, ಸೇವಾ ರೋವರ್ಸ್–ರೇಂಜರ್ಸ್‌ಗಳು ಮಾಹಿತಿ ಶಿಬಿರದಲ್ಲಿ ಭಾಗವಹಿಸಿದರು.



## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಸೆಪ್ಟೆಂಬರ್ 15 ರಂದು ಸಂವಿದಾನ ಪೀಠಿಕೆಯನ್ನು ಓದಲಾಯಿತು.

* ಬೆಂಗಳೂರು ಉತ್ತರ ಜಿಲ್ಲೆಯ ರಾಜಾಜಿನಗರ ಸ್ಥಳೀಯ ಸಂಸ್ಥೆಯ ಎಸ್. ಕಡಂಬಿ ವಿದ್ಯಾ ಕೇಂದ್ರ ಇಲ್ಲಿನ ಕಬ್ ಮಕ್ಕಳಿಂದ ಚಂದ್ರಯಾನ–3



ಯಶಸ್ವಿಯಾದ ಹಿನ್ನಲೆಯಲ್ಲಿ ಇದರ ಮಾದರಿಯನ್ನು ತಯಾರು ಮಾಡಿ ವಿಜ್ಞಾನಿಗಳಿಗೆ ಗೌರವಸಲ್ಲಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ರೋಹಿಣಿ ಇವರು ಕಬ್ಸ್ ಮಕ್ಕಳ ಕಾರ್ಯವನ್ನು ಶ್ಲಾಘಿಸಿದರು. ಲೇಡಿ ಕಬ್ ಮಾಸ್ಟರ್ ಶ್ರೀಮತಿ ಮಮತಾ ಇವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಸಂಘಟಿಸಿದರು.

* ಯಲಹಂಕ ಸ್ಥಳೀಯ ಸಂಸ್ಥೆಯ ಗೀತಗಾಯನ ಕಾರ್ಯಕ್ರಮವು ಸೆಪ್ಟೆಂಬರ್ 02 ರಂದು ಎಮ್.ಇ.ಸಿ. ಹೈಸ್ಕೂಲ್ ಗಾಂಧಿನಗರ ಯಲಹಂಕ ಇಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಎಮ್.ಇ.ಸಿ. ಶಾಲಾ ವ್ಯವಸ್ಥಾಪಕರಾದ ಶ್ರೀ ವಿನಯ ಇವರು ನೆರವೇರಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಶುಭ ಕೋರಿದರು. ಹಿರಿಯರಾದ ಶ್ರೀ ಅನಂತ್ ಆಚಾರ್, ಶ್ರೀ ರಾಮ್ ಸಿಂಗ್ ಠಾಕೂರ್ ಹಾಗೂ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವನೀತ ನಾರಾಯಣ್ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ರಾಣಿ ಸುಸಾಯಿ ಎಲ್ಲಾ ವಿಜೇತರಿಗೆ ಬಹುಮಾನ ಹಂಚಿದರು.



* ಮಲ್ಲೇಶ್ವರ ಸ್ಥಳೀಯ ಸಂಸ್ಥೆಯ ಗೀತಗಾಯನ ಕಾರ್ಯಕ್ರಮವು ಸೆಪ್ಟೆಂಬರ್ 01 ರಂದು ಚಾಮುಂಡಿ ಮುಕ್ತದಳದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ ಸಂಘಟಿಸಿದರು.

* ಜಿಲ್ಲಾ ಮಟ್ಟದ ಗೀತಗಾಯನ ಕಾರ್ಯಕ್ರಮವು ಸೆಪ್ಟೆಂಬರ್ 15 ರಂದು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಜ್ಯೋತಿ ರಂಗನಾಥ್ ಇವರು ಕಾರ್ಯಕ್ರಮವನ್ನು ನಿರೂಪಿದರು. ಸ್ಕೌಟರ್–ಗೈಡರ್ ಇವರ ಸ್ಪರ್ಧೆಯನ್ನು ಮಾಡಲಾಯಿತು. ಜಿಲ್ಲಾ ಮುಖ್ಯ ಅಯುಕ್ತರಾದ ಶ್ರೀ ಪ್ರಸನ್ನಕುಮಾರ್ ಇವರು ವಿಜೇತರಿಗೆ ಬಹುಮಾನ ವಿತರಿಸಿದರು ಹಾಗೂ ರಾಜ್ಯ ಮಟ್ಟದಲ್ಲಿ ವಿಜೇತರಾಗಿ ಎಂದು ಹಾರೈಸಿದರು.



* ಬೆಂಗಳೂರು ಉತ್ತರ ಜಿಲ್ಲೆಯ ರಾಜಾಜಿನಗರ ಸ್ಥಳೀಯ ಸಂಸ್ಥೆಯ ಎಸ್.ಜೆ.ಆರ್. ಪಬ್ಲಿಕ್ ಶಾಲೆಯ ಬುಲ್‌ಬುಲ್ ವತಿಯಿಂದ ವಿಶ್ವ ಶಾಂತಿ ದಿನಾಚರಣೆಯನ್ನು ಸೆಪ್ಟೆಂಬರ್ 21 ರಂದು ಆಚರಿಸಲಾಯಿತು. ಫ್ಲಾಕ್ ಶಿಕ್ಷಕಿ ಶ್ರೀಮತಿ ಪುಷ್ಪ ಇವರ ಕಾರ್ಯಕ್ರಮ ಸಂಘಟಿಸಿದರು.

* ಅಕ್ಟೋಬರ್ 01 ರಂದು ಶ್ರೀ ವಿದ್ಯಾಮಾನ್ಯ ವಿದ್ಯಾ ಕೇಂದ್ರ ಶಾಲೆಯಲ್ಲಿನ ಸ್ಕೌಟ್ಸ್ ಗೈಡ್ಸ್‌ಗಳು ತಮ್ಮ ಶಾಲೆಯಿಂದ ನಡಿಗೆಯ ಮೂಲಕ ರಾಘವೇಂದ್ರ ನಗರ ಅಂಧ್ರಹಳ್ಳಿ ಸಾರ್ವಜನಿಕ ಪಾರ್ಕ್ ಭೇಟಿ ನೀಡಿ ಪ್ಲಾಸ್ಟಿಕ್ ಕವರ್, ಪ್ಲಾಸ್ಟಿರ್ ಬಾಟಲ್‌ಗಳನ್ನು ಸಂಗ್ರಹಿಸಿದರು. ಲೇಡಿ ಸ್ಕೌಟ್ಸ್ ಮಾಸ್ಟರ್ ಶ್ರೀಮತಿ ಜ್ಯೋತಿ ಇ.ಜಿ. ಹಾಗೂ ಸ್ಕೌಟ್ಸ್ ಮಾಸ್ಟರ್ ಶ್ರೀ ಸುಲಾಕ್ಷನ್ ಮತ್ತು ಗೈಡ್ಸ್ ಶಿಕ್ಷಕಿ ಶ್ರೀಮತಿ ಮಂಜುಳಾ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.




## ಬೆಂಗಳೂರು ಪೂರ್ವ

ಅಕ್ಟೋಬರ್ 02 ರಂದು ಆನೇಕಲ್‌ನ ಸ್ಕೌಟ್ ಕಛೇರಿ ಆವರಣದಲ್ಲಿ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ದ್ವಿತೀಯ ಚರಣ್ ಕಬ್ಸ್ ಮತ್ತು ರಜತ್ ಪಂಕ್ ಬುಲ್‌ಬುಲ್ಸ್ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 10 ಶಾಲೆಗಳ 82 ಕಬ್ಸ್ ಹಾಗೂ 58 ಬುಲ್‌ಬುಲ್ಸ್ ಒಟ್ಟು 140 ಮಕ್ಕಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ರವರ 154ನೇ ಜನ್ಮದಿನ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ರವರ 119ನೇ ಜನ್ಮ ದಿನಾಚರಣೆಯನ್ನೂ ಸಹ ಆಚರಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಜಿಲ್ಲಾ ತರಬೇತಿ ಆಯುಕ್ತ (ಸ್ಕೌಟ್) ಶ್ರೀ ಆರ್. ಮುನಿರಾಜು, ಬ್ಯಾಡ್ಜ್ ಕಾರ್ಯದರ್ಶಿ ಶ್ರೀ ಮುನಿಕೃಷ್ಣಪ್ಪ, ಶ್ರೀ ಆರ್.ಎಲ್. ನಾರಾಯಣಸ್ವಾಮಿ ಸೇರಿದಂತೆ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಹೆಬ್ಬಗೋಡಿಯ ಎಸ್.ಎಫ್.ಎಸ್ ಕಾಲೇಜು ಹಾಗೂ ಆನೇಕಲ್‌ನ ಅಕ್ಷರ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಪರೀಕ್ಷಕರಾಗಿ ಕಾರ್ಯ ನಿರ್ವಹಿಸಿದರು.




* ಅಕ್ಟೋಬರ್ 02 ರಂದು ಆನೇಕಲ್‌ನ ಗುರುಭವನದಲ್ಲಿ ಮುಂದುವರೆದ ತರಬೇತಿಯನ್ನು ಪೂರೈಸಿರುವ ಸ್ಕೌಟರ್, ಗೈಡರ್‌ಗಳಿಗಾಗಿ ಒಂದು ದಿನದ ಸ್ಟಡಿ ಸರ್ಕಲ್ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

## ಬಳ್ಳಾರಿ

ಸೆಪ್ಟೆಂಬರ್ 22 ರಂದು ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ತಾಲ್ಲೂಕು ಮಟ್ಟದ ಸಿರುಗುಪ್ಪ ತಾಲ್ಲೂಕಿನ ಸಂಯುಕ್ತ ಪದವಿಪೂರ್ವ ಕಾಲೇಜು ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಸಿರುಗುಪ್ಪದಲ್ಲಿ ಸುಮಾರು 250ಕ್ಕೂ ಹೆಚ್ಚು ಮಕ್ಕಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು. ಇದರಲ್ಲಿ ಭಾಗವಹಿಸಿದ ಮಕ್ಕಳಿಗೆ ಶಾಂತಿನಿಕೇತನ ವಿದ್ಯಾಮಂದಿರ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಶಿಕ್ಷಕರು ಸುಧೀಂದ್ರ ಕೆ. ಹಾಗೂ ಸ್ಕೌಟ್ಸ್ ಮಕ್ಕಳು ಊಟ ಬಡಿಸುವ ಸೇವೆಯನ್ನು ಮಾಡಿದರು.



* ಸೆಪ್ಟೆಂಬರ್ 02 ರಂದು ಸರಕಾರಿ ಪ್ರೌಢಶಾಲೆ ಕೆ. ಬೆಳಗಲ್ ತಾಲ್ಲೂಕು ಸಿರುಗುಪ್ಪ ಜಿಲ್ಲಾ ಬಳ್ಳಾರಿಯಲ್ಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀ ರಸೂಲ್‌ಸಾಬ್ ಸಾಂಗ್ಲಿ ಹಾಗೂ ಸಹ ಶಿಕ್ಷಕರು, ಶ್ರೀ ನಟರಾಜ್ ಸ್ವಾಮಿ, ಸ್ಕೌಟ್ಸ್ ಮಾಸ್ಟರ್ ಹಾಗೂ ಕಾರ್ಯದರ್ಶಿಗಳು ಇವರ ನೇತೃತ್ವದಲ್ಲಿ ಸ್ಕೌಟ್ಸ್ ದಳ ಬಿ.ಪಿ.ಟ್ರೂಪ್ ಮಕ್ಕಳು ಮತ್ತು ಶಾಲಾ ಮಕ್ಕಳು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಜೀಯವರ ಜಯಂತಿಯನ್ನು ಆಚರಿಸಿದರು. ಸಿರುಗುಪ್ಪ ತಾಲ್ಲೂಕಿನ ಎಲ್ಲಾ ಶಾಲೆ ಕಾಲೇಜುಗಳಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಜೀಯವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಜಯಂತಿಯನ್ನು ಆಚರಿಸಿದರು.



## ಚಾಮರಾಜನಗರ



ಅಕ್ಟೋಬರ್ 02 ರಂದು ಜೆ.ಎಸ್.ಎಸ್. ಮಹಿಳಾ ಕಾಲೇಜಿನಲ್ಲಿ ರಾಷ್ಟ್ರಪಿತ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀರವರ ಜನ್ಮ ದಿನಾಚರಣೆಯ ಅಂಗವಾಗಿ ಉಚಿತ ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣಾ ಶಿಬಿರದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

* ಸರ್ಕಾರಿ ಪ್ರೌಢಶಾಲೆ, ಕೆಸ್ತೂರು, ಯಳಂದೂರು ತಾಲ್ಲೂಕು ಇಲ್ಲಿನ ಸ್ವಾಮಿ ವಿವೇಕಾನಂದ ಸ್ಕೌಟ್ ಟ್ರೂಪ್ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಜೀ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸರ್ವಧರ್ಮ ಪ್ರಾರ್ಥನೆ ಮತ್ತು ಶ್ರಮದಾನ ಕಾರ್ಯಕ್ರಮ ಮಾಡಲಾಯಿತು.

* ಜಿಲ್ಲಾ ಸಂಸ್ಥೆ ವತಿಯಿಂದ ಚಾಮರಾಜನಗರ ಜಿಲ್ಲೆಯ ಜಿಲ್ಲಾಡಳಿತ ಭವನದಲ್ಲಿ ರಾಷ್ಟ್ರಪಿತ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀರವರ ಜನ್ಮ ದಿನಾಚರಣೆಯ ಅಂಗವಾಗಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪುತ್ತಳಿಯನ್ನು ಸ್ವಚ್ಛಗೊಳಿಸಿ ಶ್ರಮದಾನ ಕಾರ್ಯಕ್ರಮದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿರುತ್ತಾರೆ.

* ಅಕ್ಟೋಬರ್ 18 ರಂದು ಚಾಮರಾಜನಗರ ಜಿಲ್ಲೆಯ ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಚಾಮರಾಜನಗರ ವತಿಯಿಂದ ಆಯೋಜಿಸಿದ್ದ ದಸರಾ ಮ್ಯಾರಥಾನ್ ಕಾರ್ಯಕ್ರಮದಲ್ಲಿ ರೋವರ್ಸ್-ರೇಂಜರ್ಸ್‌ಗಳು ಸೇವೆ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳಾದ ಶ್ರೀಮತಿ ಶಿಲ್ಪಾನಾಗ್ ಹಾಗೂ ಶ್ರೀ ರಾಮಚಂದ್ರ ರಾಜೇ ಅರಸ್, ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆರವರು ಸೇವೆ ಸಲ್ಲಿಸಿರುವ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.





## ಚಿಕ್ಕಮಗಳೂರು

ಸೆಪ್ಟೆಂಬರ್ 16 ರಂದು ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಚಿಕ್ಕಮಗಳೂರು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಯಿತು. ಜಿಲ್ಲಾ ಪಂಚಾಯಿತಿ ಸಿ.ಇ.ಓ ಡಾ॥ ಬಿ. ಗೋಪಾಲಕೃಷ್ಣರವರು ಉದ್ಘಾಟಿಸಿ ಮಕ್ಕಳಿಗೆ ಶುಭ ಹಾರೈಸಿದರು ಹಾಗೂ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಶ್ರೀ ಎ.ಎನ್. ಮಹೇಶ್‌ರವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ, ಶ್ರೀ ಟಿ.ಕೆ. ಫಣಿರಾಜ್, ಜಂಟಿ ಕಾರ್ಯದರ್ಶಿ ಶ್ರೀ ನೀಲಕಂಠಾಚಾರ್ಯ, ಜಿಲ್ಲಾ ತರಬೇತಿ ಆಯುಕ್ತರು ಶ್ರೀಮತಿ ಸಂಧ್ಯಾರಾಣಿ, ಶ್ರೀ ಎಸ್.ಆರ್. ಮಂಜುನಾಥ್ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಉಪಸ್ಥಿತರಿದ್ದರು.



* ಅಕ್ಟೋಬರ್ 01 ರಂದು ಜಿಲ್ಲಾ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ಬಾಬಾಬುಡನ್ ಗಿರಿಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದರಲ್ಲಿ ಚಿಕ್ಕಮಗಳೂರಿನ ರೋವರ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಅಕ್ಟೋಬರ್ 02 ರಂದು ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿಯನ್ನು ಜಿಲ್ಲಾ ಸಂಸ್ಥೆಯಲ್ಲಿ ಆಚರಿಸಲಾಯಿತು. ಈ ಪ್ರಯುಕ್ತ ಸರ್ವಧರ್ಮ ಪ್ರಾರ್ಥನೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಇವರು ಗಾಂಧೀಜಿಯವರ ಆದರ್ಶ ಜೀವನದ ಬಗ್ಗೆ ತಿಳಿಸಿದರು, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್. ಶಿವಣ್ಣ, ಜಿಲ್ಲಾ ಆಯುಕ್ತರು(ಗೈ) ಶ್ರೀಮತಿ ಡಿ.ಎಸ್. ಮಮತಾ, ಜಿಲ್ಲಾ ಕಾರ್ಯದರ್ಶಿ ಶ್ರೀ ಟಿ.ಕೆ. ಫಣಿರಾಜ್, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ನೀಲಕಂಠಾಚಾರ್, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಂಧ್ಯಾರಾಣಿ, ಎ.ಡಿ.ಸಿ.



ಶ್ರೀಮತಿ ಭಾರತಿ, ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಬಿ.ಎನ್. ಕಿರಣ್ ಕುಮಾರ್, ಎಸ್.ಜಿ.ವಿ. ಶ್ರೀ ನಿಹಾಲ್ ಎನ್.ಎಸ್. ಉಪಸ್ಥಿತರಿದ್ದರು.

* ಅಕ್ಟೋಬರ್ 05 ರಂದು ಜಿಲ್ಲಾ ಮಟ್ಟದ ಬಿ.ಆರ್.ಪಿ.ಸಿ.ಆರ್.ಪಿ ಈ ಸಿ.ಓ.ಟಿ.ಪಿ.ಬಿ.ಇ.ಓ., ಡಿಡಿಪಿಐ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು



ಜಿಲ್ಲಾ ಸಂಸ್ಥೆ ಚಿಕ್ಕಮಗಳೂರಿನಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಉದ್ಘಾಟಿಸಿದರು. ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಾದ ಡಾ. ಗೋಪಾಲಕೃಷ್ಣ, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಹಾಗೂ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಅಕ್ಟೋಬರ್ 12 ರಂದು ವಲಯ ಮಟ್ಟದ ಪದವಿ ಕಾಲೇಜಿನ ಉಪನ್ಯಾಸಕರಗಳಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಶಿವಮೊಗ್ಗ ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ 18 ಉಪನ್ಯಾಸಕರಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 11 ರಂದು ನಡೆದ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಚಿಕ್ಕಮಗಳೂರು ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಯಿತು ಈ ಕಾರ್ಯಕ್ರಮದ ಉದ್ಘಾಟನೆಯನ್ನು ಬಿ.ಇ.ಓ. ಶ್ರೀ ರವೀಶ್‌ರವರು ಉದ್ಘಾಟಿಸಿ ಮಕ್ಕಳಿಗೆ ಶುಭ ಹಾರೈಸಿದರು ಅದೇ ಸಂದರ್ಭದಲ್ಲಿ ಶಿಕ್ಷಣಾಧಿಕಾರಿಗಳಾದ ಶ್ರೀ ಜಯರಾಮ್, ಶ್ರೀಮತಿ ಡಿ.ಎಸ್. ಮಮತಾ, ಜಿಲ್ಲಾ ಆಯುಕ್ತರು (ಗೈ), ಜಂಟಿ ಕಾರ್ಯದರ್ಶಿ ಶ್ರೀ ನೀಲಕಂಠಾಚಾರ್, ತಾಲ್ಲೂಕು ಕಾರ್ಯದರ್ಶಿ ಶ್ರೀ ನಂದಕುಮಾರ್, ಖಜಾಂಜಿ ಶ್ರೀ ರಾಘವೇಂದ್ರ, ಜಿಲ್ಲಾ ಸಂಘಟನಾ ಆಯುಕ್ತ ಶ್ರೀ ಬಿ.ಎನ್. ಕಿರಣ್ ಕುಮಾರ್, ಎಸ್.ಜಿ.ವಿ. ಶ್ರೀ ನಿಹಾಲ್ ಎನ್.ಎಸ್. ಉಪಸ್ಥಿತರಿದ್ದರು.

## ದಕ್ಷಿಣ ಕನ್ನಡ

ಸೆಪ್ಟೆಂಬರ್ 09 ರಂದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಭಾಗ್ ಮಂಗಳೂರಿನಲ್ಲಿ ಮಂಗಳೂರು ದಕ್ಷಿಣ ನಗರ ಸ್ಥಳೀಯ ಸಂಸ್ಥೆ ಹಾಗೂ ಲಯನ್ಸ್ ಇಂಟರ್ ನ್ಯಾಷನಲ್ ಡಿಸ್ಟ್ರಿಕ್ಟ್ 317ಡಿ ಇವರ ಸಹಯೋಗದಲ್ಲಿ ರಾಷ್ಟ್ರಾಭಿಮಾನ ಪುನರುದ್ದೀಪನ ಮಾಹಿತಿ ಕಾರ್ಯಾಗಾರ ನಡೆಯಿತು. ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು, ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಮಂಗಳೂರು ದಕ್ಷಿಣ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಜಿಲ್ಲಾ ಕೋಶಾಧಿಕಾರಿ ಶ್ರೀ ಅನಿಲ್‌ಕುಮಾರ್, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀನಿವಾಸ್ ಪೂಜಾರಿ, ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀಮತಿ ಸಂಧ್ಯಾ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ವಿವಿಧ ಶಾಲಾ-ಕಾಲೇಜಿನಿಂದ 175 ಕ್ಕಿಂತ ಹೆಚ್ಚು ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದರು.

* ದ.ಕ., ಜಿ.ಪಂ.ಹಿ.ಪ್ರಾ.ಶಾಲೆ ಅಡ್ಡಂಗಾಯ, ಸುಳ್ಯ ಇಲ್ಲಿ ಗೈಡ್ ಶಿಕ್ಷಕಿ ಶ್ರೀಮತಿ ಸುರೇಖಾರವರು ಗೈಡ್ ದಳವನ್ನು ಸೆಪ್ಟೆಂಬರ್ 13 ರಂದು ಆರಂಭಿಸಿರುತ್ತಾರೆ. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಸುಳ್ಯದ ಅಧ್ಯಕ್ಷರು ಶ್ರೀ ಶಶಿಧರ್ ದೀಪ ಬೆಳಗಿಸಿ ಉದ್ಘಾಟಿಸಿದರು.

ಶ್ರೀಮತಿ ಪ್ರೇಮಲತಾ ಎ.ಹೆಚ್., ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಮಾತನಾಡಿ ಶುಭ ಹಾರೈಸಿದರು. ಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ಧನಲಕ್ಷ್ಮಿ ಅಧ್ಯಕ್ಷೀಯ ನೆಲೆಯಲ್ಲಿ ಹಿತನುಡಿಗಳನ್ನಾಡಿದರು. ಖಜಾಂಚಿ ಶ್ರೀಮತಿ ರೇವತಿ ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧ್ಯಾಪಕಿಯರು ಗೈಡ್ಸ್ ದಳಕ್ಕೆ ಶುಭ ಹಾರೈಸಿದರು. ಶಿಕ್ಷಕಿ ಶ್ರೀಮತಿ ವೀಣಾ ಸಿ., ಕಾರ್ಯಕ್ರಮವನ್ನು ನಿರೂಪಿಸಿ, ಶ್ರೀಮತಿ ಸುನಂದಿ ವಂದಿಸಿದರು. ಸ್ಕಾರ್ಫ್ ಹಾಕುವುದರ ಮೂಲಕ ಮಕ್ಕಳನ್ನು ಗೈಡ್ಸ್ ಸಂಸ್ಥೆಗೆ ಸ್ವಾಗತಿಸಲಾಯಿತು.

* ಪ್ರಧಾನ ಮಂತ್ರಿಯವರ ಸ್ವಚ್ಛ ಭಾರತ ಅಭಿಯಾನ ಅಂಗವಾಗಿ ದಕ್ಷಿಣ ಕನ್ನಡ ಹಾಗೂ ಭಾರತೀಯ ಕರಾವಳಿ ಕಾವಲು ಪಡೆ ಇವರ ನೇತೃತ್ವದಲ್ಲಿ ಸೆಪ್ಟೆಂಬರ್ 16 ರಂದು ಮಂಗಳೂರಿನ ಪಣಂಬೂರು ಕಡಲ ತೀರ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯಿಂದ ಒಟ್ಟು 450ಕ್ಕಿಂತ ಹೆಚ್ಚು ಸ್ಕೌಟ್, ಗೈಡ್, ರೋವರ್, ರೇಂಜರ್‌ಹಾಗೂ ದಳನಾಯಕರುಗಳು ಭಾಗವಹಿಸಿದರು.




* ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ, ಶಾಲಾ ಶಿಕ್ಷಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವುಗಳ ಆಶ್ರಯದಲ್ಲಿ ಸೆಪ್ಟೆಂಬರ್ 22 ರಂದು ಸ್ಕೌಟ್-ಗೈಡ್ ಭವನ, ಲಾಲ್‌ಭಾಗ್, ಮಂಗಳೂರು ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಸಲಾದ ಮಾಹಿತಿ ಕಾರ್ಯಾಗಾರವನ್ನು, ಡಾ. ಆನಂದ ಕೆ., ಐಎಎಸ್, ದ.ಕ. ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಉದ್ಘಾಟಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಪ್ರತಿ ಶಾಲೆಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಕರೆ ನೀಡಿದರು. ಶ್ರೀಮತಿ ರಾಜಲಕ್ಷ್ಮಿ ಕೆ., ಉಪನಿರ್ದೇಶಕರು (ಅಭಿವೃದ್ಧಿ) ದ.ಕ. ಮುಖ್ಯ ಅತಿಥಿಯಾಗಿ ಭಾಗವಹಿಸಿ ಶುಭ ಹಾರೈಸಿದರು. ಮಂಗಳೂರು ದಕ್ಷಿಣದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಈಶ್ವರರವರು ಭಾಗವಹಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ದ.ಕ. ಉಪಯೋಜನಾ ಸಮನ್ವಯಾಧಿಕಾರಿಗಳಾದ ಡಾ. ಸುಮಂಗಲ ಎಸ್. ನಾಯಕ್, ಜಿಲ್ಲಾ

ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಭುವನೇಶ್ ಜೆ., ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ವಯಸ್ಕ ಸಂಪನ್ಮೂಲ ಆಯುಕ್ತರಾದ ಡಾ. ಸುಕುಮಾರ್ ಕೆ., ರಾಜ್ಯ ಸ್ಕೌಟ್ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ರಾಮಶೇಷ ಶೆಟ್ಟಿ, ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಸಂತರಾವ್, ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಜಿಲ್ಲಾ ಪ್ರಭಾರ ಗೈಡ್ ಆಯುಕ್ತೆ ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಕೋಶಾಧಿಕಾರಿ ಅನಿಲ್‌ಕುಮಾರ್, ತರಬೇತುದಾರರಾದ ಶ್ರೀ ಗುರುಮೂರ್ತಿ ನಾಯ್ಕಾಪು, ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಪ್ರತೀಮ್ ಕುಮಾರ್, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಂ. ತುಂಬೆ, ಶ್ರೀಮತಿ ಶುಭ ವಿಶ್ವನಾಥ್ ಉಪಸ್ಥಿತರಿದ್ದರು.

* ಸ್ಥಳೀಯ ಸಂಸ್ಥೆ ಬೆಳ್ತಂಗಡಿ ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 23 ರಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅನುದಾನಿತ ಶಾಲೆ ಉಜಿರೆ ಇಲ್ಲಿ ಸ್ಕೌಟ್, ಗೈಡ್, ಕಬ್, ಬುಲ್‌ಬುಲ್ ದಳವು ಪ್ರಾರಂಭಗೊಂಡಿರುತ್ತದೆ. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಸಹಾಯಕ ಆಯುಕ್ತರಾದ ಶ್ರೀ ಬಿ. ಸೋಮಶೇಖರ್ ಶೆಟ್ಟಿ ಹಾಗೂ ಕಾರ್ಯದರ್ಶಿರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.

* ಸೆಪ್ಟೆಂಬರ್ 24 ರಂದು ಮಾನ್ಯ ಜಿಲ್ಲಾಧಿಕಾರಿಗಳ ನಿವಾಸದಲ್ಲಿ 2022–23ನೇ ಸಾಲಿನ ತೃತೀಯ ಚರಣ ಕಬ್, ಸುವರ್ಣ ಗರಿ ಬುಲ್‌ಬುಲ್, ತೃತೀಯ ಸೋಪಾನ ಸ್ಕೌಟ್ಸ್ ಮತ್ತು ಗೈಡ್ಸ್, ನಿಪುಣ್ ರೋವರ್ಸ್ ಮತ್ತು ರೇಂಜರ್ಸ್ ಪ್ರಶಸ್ತಿ ಪತ್ರ ಪ್ರದಾನ ಸಮಾರಂಭ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಗೌರವಾನ್ವಿತ ಶ್ರೀ ಮುಲ್ಲೈ ಮುಗಿಲನ್, ಐ.ಎ.ಎಸ್.ರವರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದರು. ಮಾನ್ಯ ಜಿಲ್ಲಾಧಿಕಾರಿಗಳ ಧರ್ಮಪತ್ನಿ ಶ್ರೀಮತಿ ಅಶ್ವಿನಿ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ವಸಂತ್‌ರಾವ್, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ಶ್ರೀಮತಿ ಜಯವಂತಿ ಸೋನ್ಸ್ ಹಾಗೂ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಬ್‌ವಿಭಾಗದಲ್ಲಿ 237, ಬುಲ್‌ಬುಲ್ ವಿಭಾಗದಲ್ಲಿ 252, ಸ್ಕೌಟ್ಸ್ ವಿಭಾಗದಲ್ಲಿ 237, ಗೈಡ್ಸ್ ವಿಭಾಗದಲ್ಲಿ 302, ರೋವರ್ಸ್ ವಿಭಾಗದಲ್ಲಿ 23, ರೇಂಜರ್ಸ್ ವಿಭಾಗದಲ್ಲಿ 96 ಒಟ್ಟು 1147 ವಿದ್ಯಾರ್ಥಿಗಳು ಪ್ರಶಸ್ತಿ ಪತ್ರವನ್ನು ಸ್ವೀಕರಿಸಿದರು. ಮಾಧ್ಯಮ ಮಿತ್ರರು, ದಳ ನಾಯಕರುಗಳು, ಪೋಷಕರು, ಕಚೇರಿ ಸಿಬ್ಬಂದಿಯವರು ಹಾಗೂ ಸರ್ವೀಸ್ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



* ಅಕ್ಟೋಬರ್ 02 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮಂಗಳೂರು ಉತ್ತರ ಮತ್ತು ದಕ್ಷಿಣ ನಗರ ಸ್ಥಳೀಯ ಸಂಸ್ಥೆಯ ಸಹಭಾಗಿತ್ವದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಭಾಗ್, ಮಂಗಳೂರು ಇಲ್ಲಿ 154ನೇ ಮಹಾತ್ಮಾ ಗಾಂಧೀಜಿಯವರ ಜನ್ಮ ದಿನಾಚರಣೆ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರಿರವರ ಜನ್ಮ ದಿನಾಚರಣೆಯನ್ನು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಸಂತ್ ರಾವ್, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಕೋಶಾಧಿಕಾರಿ ಅಮೃತ ವಿದ್ಯಾಲಯ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಅಕ್ಷತಾ ಶೆಣೈ, ಮಂಗಳೂರು ಹಾಗೂ ಎಸ್‌ಡಿಎಂ ಸಿಬಿಎಸ್‌ಇ ಸ್ಕೂಲ್ ಮಂಗಳೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಮಹಾತ್ಮ ಗಾಂಧಿಯವರ 154ನೇ ಜಯಂತಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿಯವರ ಹುಟ್ಟುಹಬ್ಬದ ಪ್ರಯುಕ್ತ ಅಕ್ಟೋಬರ್ 02 ರಂದು ಸಂತ ರೇಮಂಡ್ ಪದವಿ ಪೂರ್ವ ಕಾಲೇಜು, ವಾಮಂಜೂರು, ಬೆಸೆಂಟ್ ಮಹಿಳಾ ಕಾಲೇಜ್, ಮಂಗಳೂರು, ಕೆನರಾ ಕಾಲೇಜು ಮಂಗಳೂರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಬಲ್ಮಠ, ಸರಕಾರಿ ಪ್ರಥಮ ದರ್ಜೆ ಕಾಲೇಜು ಕಾವೂರು, ಸರಕಾರಿ ಪ್ರಥಮ ದರ್ಜೆ ಕಾಲೇಜ್ ಕಾರ್‌ಸ್ಟ್ರೀಟ್ ಮಂಗಳೂರಿನ ರೋವರ್ಸ್–ರೇಂಜರ್ಸ್ ಹಾಗೂ ದಳನಾಯಕರುಗಳು ಮಂಗಳೂರಿನ ಸೆಂಟ್ರಲ್ ರೈಲ್ವೆ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.




* ಅಕ್ಟೋಬರ್ 06 ರಂದು ಮಂಗಳೂರು ವಿಶ್ವವಿದ್ಯಾನಿಲಯ, ಕಾಲೇಜು ಶಿಕ್ಷಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲಾ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಭಾಗ್ ಮಂಗಳೂರಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರಕಾರಿ, ಅನುದಾನಿತ, ಅನುದಾನರಹಿತ ಪದವಿ ಕಾಲೇಜುಗಳ ಉಪನ್ಯಾಸಕ/ ಉಪನ್ಯಾಸಕಿಯರುಗಳ ರೋವರ್ ಮತ್ತು ರೇಂಜರ್ ಮಾಹಿತಿ ಕಾರ್ಯಗಾರವು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾತನಾಡಿ ಪಠ್ಯ ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರೋವರ್ ಮತ್ತು ರೇಂಜರ್ ವಿಭಾಗವು ಅವಕಾಶವನ್ನು ಒದಗಿಸಿಕೊಡುತ್ತದೆ. ಆದುದರಿಂದ ತಾವೆಲ್ಲರೂ ತಮ್ಮ ವಿದ್ಯಾರ್ಥಿಗಳನ್ನು ಸಮಾಜಮುಖಿ

ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕೆಂದು ತಿಳಿಸಿದರು. ಕಾರ್ಯಕ್ರಮವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಶ್ರೀ ಜಯರಾಜ್ ಅಮೀನ್‌ರವರು ಉದ್ಘಾಟಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಹಲವು ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವ ಒಂದು ಸೇವಾ ಸಂಸ್ಥೆಯಾಗಿದ್ದು, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಘಟಿಸುವ ಸೇವಾ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಉಪನ್ಯಾಸಕರೆಲ್ಲರೂ ಶ್ರಮ ವಹಿಸಬೇಕೆಂದು ತಿಳಿಸಿದರು. ಡಾ. ಸಿದ್ದರಾಜ್ ರೋವರ್ ಮತ್ತು ರೇಂಜರ್ ನೋಡಲ್ ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ವಿಮಲ ರಂಗಯ್ಯ, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ), ಶ್ರೀಮತಿ ಜಯವಂತಿ ಸೋನ್ಸ್, ತರಬೇತಿದಾರರು ಶ್ರೀಮತಿ ಶುಭ ವಿಶ್ವನಾಥ್ ಉಪಸ್ಥಿತರಿದ್ದರು. ಕಾರ್ಯಗಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ 61, ಉಡುಪಿ ಜಿಲ್ಲೆಯಿಂದ 28, ಹಾಗೂ ಕೊಡಗು ಜಿಲ್ಲೆಯಿಂದ 2 ಒಟ್ಟು 91 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ಶ್ರೀಮತಿ ಜಯವಂತಿ ಸೋನ್ಸ್ ನಿರೂಪಿಸಿದರು. ಬಂಟ್ವಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಂ. ತುಂಬೆರವರು ಸರ್ವರನ್ನು ಸ್ವಾಗತಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ವಂದನಾರ್ಪಣೆ ಗೈದರು.



## Congratulations



**Kum. P.C. Deepthi,**
Guide
15th Kanteerava Open Group, Benglauru South
Won the Silver Medal in CISCE Tack Wondo National Tournament held at Ahmadabad in Gujrat from 4th to 6th October 2023.
She Played Under 19 Girls 46-49 Weight Category. She Represented Karnataka State in National Level.

- State Secretary

## ದಾವಣಗೆರೆ

ಸೆಪ್ಟೆಂಬರ್ 15 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಆಹಾರ ಸಂರಕ್ಷಣಾ ದಿನವನ್ನು ಆಚರಿಸಲಾಯಿತು. ಗೈಡ್ ಮಕ್ಕಳೇ ಪೌಷ್ಠಿಕ ಆಹಾರವನ್ನು ತಯಾರಿಸಿ ಶಾಲೆಯ ಮಕ್ಕಳಿಗೆ ಇದರ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರು, ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 21 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಧ.ರಾ.ಮ ಸ್ಕೌಟ್ ಭವನ ಮತ್ತು ರೋಟರಿ ಬಾಲಭವನದಲ್ಲಿ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಶ್ರೀ ಕೊಟ್ರೇಶ್ ಜಿ., ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಶ್ರೀಮತಿ ಶಾಂತಾ ಎಸ್. ಯಾವಗಲ್ ಉಪಾಧ್ಯಕ್ಷರು ಮತ್ತು ಸಂಪಾದಕರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು ಭಾಗವಹಿಸಿದ್ದರು.



* ಸೆಪ್ಟೆಂಬರ್ 23 ರಿಂದ 24ರ ವರೆಗೆ ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಪೆಟ್ರೋಲ್ ಲೀಡರ್ಸ್ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮತ್ತು ಶ್ರೀಮತಿ ರೇಖಾರಾಣಿ ಶಾಲಾ ಮುಖ್ಯೋಪಾಧ್ಯಾಯರು ಉದ್ಘಾಟಿಸಿದರು. ಈ ಶಿಬಿರದಲ್ಲಿ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಕಾಂತಾಕುಮಾರ್ ಸ್ಕೌಟ್ ಮಾಸ್ಟರ್ ಮೋರಾರ್ಜಿ ದೇಸಾಯಿ ಶಾಲೆ, ಹೊನ್ನಾಳಿ ಮತ್ತು ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಶಶಿಕಲಾ ಗೈಡ್ ಕ್ಯಾಪ್ಟನ್ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ 312 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ 18 ಸ್ಕೌಟ್ ಮಾಸ್ಟರ್ಸ್ ಗೈಡ್ ಕ್ಯಾಪ್ಟನ್ಸ್‌ಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 23 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆಯಲ್ಲಿ ದೀಕ್ಷಾ ಸಮಾರಂಭವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಮುಖ್ಯೋಪಾಧ್ಯಾಯರಾದ ಶ್ರೀ ಮಲ್ಲಿಕಾರ್ಜುನ ಡಿ.ಕೆ., ಸ್ಕೌಟ್ ಮಾಸ್ಟರ್ ಸೋಮ್ಲಾ ನಾಯಕ್, ಶ್ರೀ ರವೀಂದ್ರಸ್ವಾಮಿ ಟಿ.ಎಂ., ಗೈಡ್ ಕ್ಯಾಪ್ಟನ್ ಶ್ರೀಮತಿ ರಜನಿ ಮತ್ತು ಶ್ರೀಮತಿ ಭಾವನ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 26 ರಂದು ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ಅಮೃತವಿದ್ಯಾಲಯ ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಮಾತಾ ಅಮೃತಾನಂದಮಯಿಯವರ ಹುಟ್ಟುಹಬ್ಬದ ಪ್ರಯುಕ್ತ ನಗರದ ಶ್ರೀ ಪುಟ್ಟರಾಜ ಗವಾಯಿಗಳ ಅಂಧ ಮಕ್ಕಳ ಆಶ್ರಮಕ್ಕೆ ಭೇಟಿ ನೀಡಿ ಅವರಿಗೆ ಹಣ್ಣುಗಳನ್ನು ಆಶ್ರಮದ ಸಹಕಾರ್ಯದರ್ಶಿಗಳಾದ ಶ್ರೀ ಜೆ.ಎನ್. ಕರಿಬಸಪ್ಪ ಇವರ ಮೂಲಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳು ಮತ್ತು ಆಶ್ರಮದ ಮಕ್ಕಳು ಭಜನೆಯನ್ನು ಹಾಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ಶ್ರೀ ಕುಮಾರಸ್ವಾಮಿ, ಕಬ್ ಮಾಸ್ಟರ್ ವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಸೆಪ್ಟೆಂಬರ್ 30 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಫ್ಯಾನ್ಸಿ ಕುಕ್ಕಿಂಗ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಶಾಲೆಯ ಗೈಡ್ಸ್‌ಗಳು ಪದವಿ ಪೂರ್ವ ಕಾಲೇಜು ರೇಂಜರ್ಸ್‌ಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ದಿನೇಶ್ ಕೆ. ಶೆಟ್ಟಿ ಸ್ಥಳೀಯ ಸಂಸ್ಥೆ ಅಧ್ಯಕ್ಷರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀ ರವೀಂದ್ರಸ್ವಾಮಿ.ಟಿ.ಎಂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು. ಶಾಲೆಯ ಎಲ್ಲಾ ವಿಭಾಗದ ಮುಖ್ಯೋಪಾಧ್ಯಾಯರುಗಳು, ಗೈಡ್ ಕ್ಯಾಪ್ಟನ್ಸ್‌ಗಳು, ಶಾಲಾ ಶಿಕ್ಷಕರು ಭಾಗವಹಿಸಿ ಮಕ್ಕಳು ತಯಾರಿಸಿದ ವಿಶೇಷ ತಿಂಡಿ ತಿನಿಸುಗಳನ್ನು ಸವಿದು ಮಕ್ಕಳಿಗೆ ಶುಭ ಹಾರೈಸಿದರು.



* ಸೆಪ್ಟೆಂಬರ್ 30 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಬಾಪೂಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ಪರಿಹಾರ ಕಾರ್ಯಗಳನ್ನು ವಿಪತ್ತು ನಿರ್ವಹಣಾ ಬಳಸಿ ಹೇಗೆ ಕಾರ್ಯಚರಣೆ ನಡೆಸಲಾಗುವುದು ಎಂದು ಮಕ್ಕಳಿಗೆ ತಿಳಿಸಲಾಯಿತು. ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮಕ್ಕಳು ಮತ್ತು 5 ರಿಂದ 10ನೇ ತರಗತಿ ಮಕ್ಕಳು ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ್ದರು. ಶ್ರೀ ಕಿರಣ್‌ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಡಿ.ಆರ್.ಎ. ವಿಭಾಗ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ವನಿತಾ ಶಾಲಾ ಪ್ರಾಂಶುಪಾಲರು ಹಾಗೂ ಶಾಲೆಯ ಸ್ಕೌಟ್ ಮಾಸ್ಟರ್‌ಗಳು ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

* ಅಕ್ಟೋಬರ್ 01 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಿ.ಎಸ್.ಎಸ್.ಇ.ಎಂ.ಆರ್ ಶಾಲೆಯಲ್ಲಿ ಬ್ಯಾಕ್ ವುಡ್ ಮ್ಯಾನ್ ಕುಕ್ಕಿಂಗ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಡೀನ್ ಶ್ರೀ ಮಂಜನಾಥ್, ಪ್ರಾಂಶುಪಾಲರಾದ ಶ್ರೀ ರಾಜೇಶ್ ಪ್ರಸಾದ್ ಮತ್ತು ಶ್ರೀಮತಿ ಕಮಲ ಬಿ.ಎನ್., ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀಮತಿ ಶಾರದಾ ಮಾಗನಳ್ಳಿ ಜಿಲ್ಲಾ ಗೈಡ್ ಆಯುಕ್ತರು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ. ಮತ್ತು ಶ್ರೀ ಕೆ.ಟಿ. ಮಲ್ಲೇಶಪ್ಪ, ಹಾವೇರಿ ಜಿಲ್ಲಾ ಸಂಘಟಕರು ಭಾಗವಹಿಸಿ ಮಕ್ಕಳ ಅಡುಗೆಯನ್ನು ಸವಿದರು. ಶ್ರೀ ಷಡಾಕ್ಷರದೇವ ಸ್ಕೌಟ್ ಮಾಸ್ಟರ್ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು.



* ಅಕ್ಟೋಬರ್ 02 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯಲ್ಲಿ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಶ್ರೀಮತಿ ಜಸ್ಟೀನ್ ಡಿಸೋಜಾ ಶಾಲಾ ಮುಖ್ಯಸ್ಥರು ಮತ್ತು ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರ ನೇತೃತ್ವದಲ್ಲಿ ಕಾರ್ಯಕ್ರಮ ನೆರವೇರಿತು. ಶ್ರೀಮತಿ ರೇಖಾರಾಣಿ ಮುಖ್ಯೋಪಾಧ್ಯಾಯರು ಸ್ಕೌಟ್ ಮಾಸ್ಟರ್‌ಗಳು ಮತ್ತು ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

* ಅಕ್ಟೋಬರ್ 02 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನಾಚರಣೆಯನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ರೋವರ್ಸ್ ರೇಂಜರ್ಸ್‌ಗಳಿಂದ ಸರ್ವಧರ್ಮ ಪ್ರಾರ್ಥನೆಯೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು.

* ಅಕ್ಟೋಬರ್ 02 ರಂದು ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಯ ಶಾಲಾ ಕಾಲೇಜುಗಳಲ್ಲಿ ಗಾಂಧೀಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನಾಚರಣೆಯನ್ನು ಸ್ವಚ್ಛಭಾರತ್ ಅಭಿಯಾನ, ಸರ್ವಧರ್ಮ ಪ್ರಾರ್ಥನೆಯಂತಹ ಕಾರ್ಯಕ್ರಮಗಳೊಂದಿಗೆ ಕಬ್ಸ್, ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಸ್ಕೌಟರ್ಸ್

ಗೈಡರ್ಸ್ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ಸ್‌ಗಳ ಮಾರ್ಗದರ್ಶನದಲ್ಲಿ ಶಾಲಾ ಕಾಲೇಜು ಮುಖ್ಯಸ್ಥರ ಉಪಸ್ಥಿತಿಯಲ್ಲಿ ಆಚರಿಸಲಾಯಿತು.

* ಅಕ್ಟೋಬರ್ 05 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೊರಟೂರು ಹೊನ್ನಾಳಿ ತಾಲ್ಲೂಕು ಗೈಡ್ ಮಕ್ಕಳು ಸ್ವಚ್ಛತಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತ ಸ್ವಚ್ಛತಾ ಕಾರ್ಯ ಕೈಗೊಂಡರು.

## ಧಾರವಾಡ

ಸೆಪ್ಟೆಂಬರ್ 22 ರಂದು ಜಿಲ್ಲಾ ಸಂಸ್ಥೆ ಧಾರವಾಡ ಸಂಸ್ಥೆಯ ಆವರಣದಲ್ಲಿ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಮಾಡಲಾಯಿತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸ್ಕೌಟ ಆಯುಕ್ತರಾದ ಶ್ರೀ ವಿ.ವಿ. ಕಟ್ಟಿ ವಹಿಸಿಕೊಂಡಿದ್ದರು. ಜಿಲ್ಲಾ ಆಯುಕ್ತರಾದ ಶ್ರೀಮತಿ ಭಾಗಿರಥಿ ಕಲಂಕ್‌ರ ಉದ್ಘಾಟಕರಾಗಿ, ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀ ಬಸವರಾಜ ಕಡಕೋಳ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಶ್ರೀಮತಿ ಪ್ರತಿಭಾ ಹೆಗಡೆ, ಶ್ರೀಮತಿ ಸುಮಾ ಕುರಿಗಾರ ಮತ್ತು ಶ್ರೀ ಭರಮಗೌಡ ಪಾಟೀಲ ನಿರ್ಣಾಯಕರಾಗಿ ಸೇವೆ ಸಲ್ಲಿಸಿದರು. 138 ಮಕ್ಕಳು ಹಾಗೂ 45 ಶಿಕ್ಷಕರು ಭಾಗವಹಿಸಿದರು.




* ಅಕ್ಟೋಬರ್ 12 ರಂದು ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನ ಧಾರವಾಡ ಇಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಶಿಬಿರ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಮಾನ್ಯ ಶ್ರೀ ಗಜಾನನ ಮನ್ನಿಕೇರಿ, ಜಂಟಿ ನಿರ್ದೇಶಕರು, ಅಪರ ಆಯುಕ್ತರ ಕಾರ್ಯಾಲಯ ಧಾರವಾಡ ಮತ್ತು ಧಾರವಾಡ ವಿಭಾಗೀಯ ಉಪಾಧ್ಯಕ್ಷರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ತಮ್ಮ ಉದ್ಘಾಟನಾ ಪರ ಭಾಷಣದಲ್ಲಿ "ಮಗುವಿನ ಸರ್ವಾಂಗೀಣ ವಿಕಾಸದಲ್ಲಿ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳಿಗೂ ಮಹತ್ವದ





ಪಾತ್ರವಿದೆ. ಆದ್ದರಿಂದ ಮಕ್ಕಳು ಹೆಚ್ಚೆಚ್ಚು ಈ ಸಂಸ್ಥೆಗೆ ಸೇರಬೇಕು" ಎಂದರು. ಶ್ರೀ ಉಮೇಶ ಬೊಮ್ಮಕ್ಕನವರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಬ್ಬಳ್ಳಿ ಗ್ರಾಮೀಣ ಇವರು ಮಾತನಾಡಿ "ಪಾಲಕರು ಕೂಡ ಸ್ಕೌಟ್ ಮತ್ತು ಗೈಡ್ಸ್‌ನ್ನು ತಮ್ಮ ಮಕ್ಕಳು ಸೇರುವುದನ್ನು ಬಯಸುತ್ತಿದ್ದಾರೆ. ಕಾರಣ ಪ್ರತಿ ಶಾಲೆಯಲ್ಲಿ ದಳವನ್ನು ಪ್ರಾರಂಭ ಮಾಡಬೇಕು" ಎಂದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ವಿ.ವಿ. ಕಟ್ಟಿ ಜಿಲ್ಲಾ ಆಯುಕ್ತರು (ಸ್ಕೌ) ಇವರು ಮಾತನಾಡುತ್ತ "ಹೆಚ್ಚೆಚ್ಚು ಮಕ್ಕಳು ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಸೇರಬೇಕು, ಈ ಸಂಸ್ಥೆ ಬೆಳೆಯಬೇಕು" ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಜಿ.ಎನ್. ಮಠಪತಿ ಡಿ.ವೈ.ಪಿ.ಸಿ., ಡಿ.ಡಿ.ಪಿ.ಆಯ್. ಕಛೇರಿ ಧಾರವಾಡ, ಶ್ರೀ ಎಸ್.ಬಿ. ಮಲ್ಲಾಡದ ಕ್ಷೇತ್ರ ಶಿಕ್ಷಣಾಧಿಕಾರಿಗಳು ನವಲಗುಂದ, ಶ್ರೀಮತಿ ಎನ್.ಬಿ. ದಾವಲಸಾಬನವರ ಶಿಕ್ಷಣಾಧಿಕಾರಿಗಳು, ಶ್ರೀ ಬಿ.ವೈ. ಭಜಂತ್ರಿ, ಶ್ರೀಮತಿ ಶಿವಲೀಲಾ ಕಳಸಣ್ಣವರ ಎ.ಪಿ.ಸಿ.ಓ., ಶ್ರೀಮತಿ ರೇಖಾಭಜಂತ್ರಿ ವಿಷಯ ಪರಿವೀಕ್ಷಕರು, ಶ್ರೀಮತಿ ಪೂರ್ಣಿಮಾ ಮುಕ್ಕುಂದಿ ವಿಷಯ ಪರಿವೀಕ್ಷಕರು, ಶ್ರೀ ಬಿ.ಬಿ. ದುಬ್ಬನಮರಡಿ ವಿಷಯ ಪರಿವೀಕ್ಷಕರು, ಶ್ರೀ ಮಾಳಿ ವಿಷಯ ಪರಿವೀಕ್ಷಕರು, ಶ್ರೀ ಹುಬ್ಬಳ್ಳಿ ವಿಷಯ ಪರಿವೀಕ್ಷಕರು, ಶ್ರೀ ಅಡಿವೇರ ಸಮನ್ವಯಾಧಿಕಾರಿಗಳು ಧಾರವಾಡ ಶಹರ, ಶ್ರೀ ಸಂಜೀವ ಬೆಳವಟಗಿ ಸಮನ್ವಯಾಧಿಕಾರಿಗಳು ಭಾಗವಹಿಸಿದ್ದರು. ರಾಜ್ಯ ಸಂಸ್ಥೆಯಿಂದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾಗೇಶ ಶಿವಪೂರ ರಾಜ್ಯ ತರಬೇತಿ ಆಯುಕ್ತರು (ಸ್ಕೌ) ಮತ್ತು ಶ್ರೀ ಪಿ.ವೈ. ಪಾಟೀಲ ಬೆಳಗಾವಿಯಿಂದ ಆಗಮಿಸಿದ್ದರು. ಜಿಲ್ಲಾ ಪದಾಧಿಕಾರಿಗಳು ಎಲ್ಲ ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು ಖಜಾಂಚಿಗಳು ಮತ್ತು ಜಿಲ್ಲೆಯ ಎಲ್ಲ ತಾಲೂಕಿನ ಬಿ.ಆರ್.ಪಿ., ಸಿ.ಆರ್.ಪಿ., ಈ.ಸಿ.ಓ.ಗಳು ಒಟ್ಟು 140 ಜನರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಎಸ್.ಎನ್. ಸಾವಳಗಿ, ಸ್ವಾಗತವನ್ನು ಶ್ರೀ ಎಸ್.ಆಯ್. ನೇಕಾರ ವಂದನೆಯನ್ನು ಶ್ರೀ ಡಿ.ಡಿ. ಮಾಳಗಿಯವರು ನೆರವೇರಿಸಿದರು.

## ಗದಗ

ಅಕ್ಟೋಬರ್ 05 ರಿಂದ 11ರ ವರೆಗೆ ಜಿಲ್ಲಾ ಮಟ್ಟದ ಮೂಲ ತರಬೇತಿಯನ್ನು ಪಂಡಿತ ಪುಟ್ಟರಾಜ ಗವಾಯಿಗಳ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು. ಮಾನ್ಯ ಶ್ರೀ ಎಂ.ಎ. ರೆಡ್ಡೇರ ಡಿಡಿಪಿಐ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 103 ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಫ್ಲಾಕ್ ಲೀಡರ್ ತರಬೇತಿಯನ್ನು ಪಡೆದರು. ಸ್ಕೌಟ್ ವಿಭಾಗಕ್ಕೆ ಶ್ರೀಮತಿ ಹೇಮಲತ ಲೇಡಿ ಸ್ಕೌಟ್ ಮಾಸ್ಟರ್, ಶಿವಮೊಗ್ಗ ಕ್ಯಾಂಪ್ ಲೀಡರ್ ಆಗಿದ್ದರು. ಗೈಡ್ ವಿಭಾಗಕ್ಕೆ ಶ್ರೀಮತಿ ಬಿ.ಟಿ. ಹೊಸಮನಿ



ಕ್ಯಾಂಪ್ ಲೀಡರ್ ಅಗಿದ್ದರು. ಫ್ಲಾಕ್ ಲೀಡರ್ ವಿಭಾಗಕ್ಕೆ ಶ್ರೀಮತಿ ಗೀತಾ ದೇವಾಂಗ ಮಠ ಕ್ಯಾಂಪ್ ಲೀಡರ್ ಅಗಿದ್ದರು. ಸ್ವಾಗತ ಮತ್ತು ಪ್ರಾಸ್ತಾವಿಕ ಶ್ರೀ ಜಿ.ಎಚ್. ಪೂಜಾರ, ಜಿಲ್ಲಾ ಕಾರ್ಯದರ್ಶಿ ಮಾಡಿದರು.

* ಲಕ್ಷ್ಮೇಶ್ವರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿ ಮತ್ತು ವಲಯ ಅರಣ್ಯಾಧಿಕಾರಿಗಳು ಶಿರಹಟ್ಟಿ ಇವುಗಳ ಸಂಯುಕ್ತ ಆಶ್ರಯದಲ್ಲಿ 69ನೇ ವನ್ಯಜೀವಿ ಸಪ್ತಾಹ ಕಾರ್ಯಕ್ರಮ ಕಪ್ಪತ್ತಗುಡ್ಡದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸ್ವಚ್ಛಾ ಅಭಿಯಾನ ಅಂಗವಾಗಿ ಕಪ್ಪತ್ತು ಮಲ್ಲಯ್ಯನ ದೇವಸ್ಥಾನಕ್ಕೆ ತೆರಳುವ ಹಾದಿಯಲ್ಲಿ ಪ್ಲಾಸ್ಟಿಕ್ ಕಸವನ್ನು ವಿದ್ಯಾರ್ಥಿಗಳು ಸಂಗ್ರಹ ಮಾಡಿ ಚೀಲಗಳಲ್ಲಿ ತುಂಬಿ ವಿಲೇವಾರಿ ಮಾಡಿದರು. ಈ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಜೆ.ಎಂ. ಮುಂದಿನಮನಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಿರಹಟ್ಟಿ ವಲಯದ ಅರಣ್ಯಾಧಿಕಾರಿಗಳಾದ ಶ್ರೀ ರಾಮಪ್ಪ ಪೂಜಾರ ಆರ್.ಎಫ್.ಓ. ಶ್ರೀ ಎಸ್.ಬಿ. ನೀರಲಗಿ ಕಡಕೋಳ ಶಾಖೆ ಲಕ್ಷ್ಮೇಶ್ವರ ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯದರ್ಶಿಗಳಾದ ಶ್ರೀ ಕೆ.ಆರ್. ಲಮಾಣಿ ಶಿರಹಟ್ಟಿ ತಾಲ್ಲೂಕು ಕಾರ್ಯದರ್ಶಿ ಶ್ರೀ ಎಂ.ಎ. ಬುಕ್ಕಟ್ಟೇಗೇರಿ ಗಿರೀಶ್ ಸೃಜನವರ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರ – ಶಿಕ್ಷಕಿಯರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಹಾಸನ

ಹಾಸನ ಜಿಲ್ಲಾ ಸಂಸ್ಥೆಯ ವತಿಯಿಂದ ಕಬ್-ಬುಲ್‌ಬುಲ್‌ಗಳಿಗೆ ಜಿಲ್ಲಾಮಟ್ಟದ ತೃತಿಯ ಚರಣ್ ಮತ್ತು ಸುವರ್ಣ ಪಂಕ್ ಪರೀಕ್ಷಾ ಶಿಬಿರ ಹಾಗೂ ಚತುರ್ಥ ಚರಣ್ ಹಿರಕ್ ಪಂಕ್ ಪೂರ್ವಭಾವಿ ಶಿಬಿರವನ್ನು ಹಾಸನದ ಜಿಲ್ಲಾ ಸ್ಕೌಟ್ ಭವನದಲ್ಲಿ ಆ ಯೋಜನೆ ಮಾಡಲಾಯಿತು ಪರೀಕ್ಷಾ ಶಿಬಿರದಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಸೋಫಿಯಾ ಫರ್ನಾಂಡಿಸ್ ಬುಲ್‌ಬುಲ್ ವಿಭಾಗದ ಶಿಬಿರದ ನಾಯಕರಾಗಿ ಹಾಗೂ ಶ್ರೀಮತಿ ಶೋಭಾರವರು ಕಬ್ ವಿಭಾಗದ ನಾಯಕರಾಗಿ ಕಾರ್ಯನಿರ್ವಹಿಸಿದರು, ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಡಾ॥ ವೈ.ಎಸ್. ವೀರಭದ್ರಪ್ಪರವರು ನೆರವೇರಿಸಿದರು. ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಗಿರಿಜಾಂಬಿಕರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಜಿಲ್ಲಾ ಖಜಾಂಚಿಗಳಾದ ಶ್ರೀ ಜಯರಮೇಶ್‌ರವರು ಪೋಷಕ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಾ ವಿದ್ಯಾರ್ಥಿಗಳಿಗೆ ಕಿವಿಮಾತುಗಳನ್ನು ನುಡಿದರು. ಶ್ರೀ ಸುರೇಶ್ ಗುರೂಜಿ, ಕಾರ್ಯದರ್ಶಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶಿಬಿರದ ಶುಭಾಶಯಗಳು ತಿಳಿಸಿದರು. ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಎಂ.ಎಸ್. ಪ್ರಕಾಶ್ ಸರ್ವರನ್ನು ವಂದಿಸಿದರು ಶ್ರೀಮತಿ ಪ್ರಿಯಾಂಕ, ಸಹಾಯಕ ರಾಜ್ಯ ಸಂಘಟನಾ ನಾಯಕರು ಶ್ರೀಮತಿ ಪ್ರಿಯಾಂಕರವರು ಕಾರ್ಯಕ್ರಮವನ್ನು ಸಂಘಟಿಸಿದರು.



*ಹೊಳೆನರಸೀಪುರ ಪಟ್ಟಣದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಸ್ಥಳೀಯ ಸಂಸ್ಥೆ ಮತ್ತು ಒನಕೆ ಓಬವ್ವ ರೇಂಜರ್ಸ್ ಘಟಕದ ವತಿಯಿಂದ 24ನೇ ವರ್ಷದ ಕಾರ್ಗಿಲ್ ವಿಜಯ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದೇವರಾಜ್ ಅವರು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದರು. ಈ ಸಮಾರಂಭದಲ್ಲಿ ನಿವೃತ್ತ ಯೋಧರಾದ ಶ್ರೀ ಮಂಜುನಾಥ್ ಮತ್ತು ಶ್ರೀ ಮಹೇಶ್ ಅವರು ಮಾತನಾಡಿ, ಕಾರ್ಗಿಲ್ ನಲ್ಲಿ ಪಾಕಿಸ್ತಾನದ ವಿರುದ್ಧ ಭಾರತೀಯ ಯೋಧರ ಯಶೋಗಾಥೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು, ನಂತರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ಕುಮುದ ಆರ್. ನಿರೂಪಿಸಿದರು. ಉಪಾಧ್ಯಕ್ಷರಾದ ಶ್ರೀ ಮುರಳೀಧರ ಗುಪ್ತ ವೇದಿಕೆಯಲ್ಲಿದ್ದರು. ರೇಂಜರ್ಸ್ ಲೀಡರ್ ಶ್ರೀಮತಿ ನಿರ್ಮಲಾ, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಶ್ರೀಮತಿ ರಂಗಮ್ಮ, ಇದ್ದರು, ಸ್ವಾಗತ ಭಾಷಣವನ್ನು ಶ್ರೀಮತಿ ತೇಜಸ್ವಿನಿ ನಡೆಸಿಕೊಟ್ಟರು, ಶ್ರೀಮತಿ ಧನ್ಯ ಶ್ರೀಮತಿ ಎಂ.ಕೆ. ವಂದಿಸಿದರು.



* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ವೈದ್ಯರ ದಿನಾಚರಣೆಯ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಶ್ರೀಯುತ ರವಿಕಾಂತ್, ಸಿವಿಲ್ ನ್ಯಾಯಾಧೀಶರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ, ಡಾಕ್ಟರ್ ಬಶೀರ್, ನಿರ್ದೇಶಕರು ಹಾಗೂ ವೈದ್ಯರು ಜನಪ್ರಿಯ ಆಸ್ಪತ್ರೆ, ಡಾ॥ ಸಾವಿತ್ರಿ, ಮಲ್ನಾಡ್ ಆಸ್ಪತ್ರೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಆಯುಕ್ತರು ಶ್ರೀಮತಿ ಗಿರಿಜಾಂಭಿಕ, ನಗರದ ಪ್ರಮುಖ ಗಣ್ಯರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಪ್ರೌಢಶಾಲೆಯ ಗೈಡ್ಸ್‌ಗಳು ಸರ್ಕಾರಿ ವಿಜ್ಞಾನ ಕಾಲೇಜಿನ ರೋವರ್ಸ್, ಕುವೆಂಪು ಪದವಿ ಪೂರ್ವ ಕಾಲೇಜಿನ ರೋವರ್ಸ್ ಉಚಿತ ಆರೋಗ್ಯ ತಪಾಸಣಾ ಕಾರ್ಯದಲ್ಲಿ ಸ್ವಯಂಸೇವಕರಾಗಿ ಸೇವೆಯನ್ನು ಸಲ್ಲಿಸಿದರು.



* ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ, ಹನುಮಂತಪುರ, ಚನ್ನರಾಯಪಟ್ಟಣ ತಾಲ್ಲೂಕಿನ ಕಬ್ಸ್ ಬುಲ್‌ಬುಲ್‌ಗಳು ಸನ್ ರೈಸ್‌ಡೇ ಕಾರ್ಯಕ್ರಮವನ್ನು ಮಾಡಿರುತ್ತಾರೆ ಕಬ್ ಮಾಸ್ಟರ್ ಶ್ರೀ ಎಂ.ಎನ್.ಎನ್. ಮೂರ್ತಿ ಮತ್ತು ಶಾಲಾ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದು ಪ್ರತಿಜ್ಞೆಯನ್ನು ಮರುಉಚ್ಚಾರ ಮಾಡುವುದರೊಂದಿಗೆ ವಿದ್ಯಾರ್ಥಿಗಳಿಗೆ ದಿನದ ವಿಶೇಷವನ್ನು ತಿಳಿಸಿದರು.

* ಸರ್ಕಾರಿ ಪ್ರೌಢಶಾಲೆ ಮುರುಂಡಿಯ ಪ್ರೇರಣಾ ಸ್ಕೌಟ್ ಮತ್ತು ಗೈಡ್ ಘಟಕದ ವತಿಯಿಂದ ಸ್ಕೌಟ್ ಸನ್ ರೈಸ್ ಡೇ ಹಾಗೂ ಸ್ಕಾರ್ಫ್ ಡೇಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಲೋಹಿತ್‌ರವರು ವಹಿಸಿಕೊಂಡು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಹಾಗೂ ಶಾಲಾ ಶಿಕ್ಷಕರೂ ಆದ ಶ್ರೀಯುತ ಆರ್.ಎನ್. ಸುರೇಶ್‌ರವರು ಸ್ಕಾರ್ಫ್ ತೊಡಿಸುವ ಮೂಲಕ ಸ್ವಾಗತಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಕಾತ್ಯಾಯಿನಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು ಹಾಗೂ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

* ಚನ್ನರಾಯಪಟ್ಟಣ ತಾಲೂಕು ಸಂಸ್ಥೆಯ ಶ್ರೀ ಅಂಬಿಕಾ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಗೈಡ್ಸ್‌ಗಳು ನೆರೆದಿದ್ದ ಸಾರ್ವಜನಿಕರಿಗೆ ಸೇವೆಯನ್ನು ಸಲ್ಲಿಸಿರುತ್ತಾರೆ. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಪುಷ್ಪರಾಜ್, ತಾಲೂಕು ಕಾರ್ಯದರ್ಶಿ ಶ್ರೀಮತಿ ಗುಣವತಿ, ಸ್ಕೌಟ್ ಮಾಸ್ಟರ್ ಶ್ರೀಮತಿ ಪದ್ಮರಾಜ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಪೂರ್ಣಿಮಾರವರು ಉಪಸ್ಥಿತರಿದ್ದು ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ.

* ಮೌಂಟ್ ಕಾರ್ಮಲ್ ಶಾಲೆ, ಬೇಲೂರು ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಸ್ಕಾರ್ಫ್ ಡೇ ದಿನವನ್ನು ಆಚರಣೆ ಮಾಡಿದರು. ಈ ಸಂಧರ್ಭದಲ್ಲಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆಯೋಜನೆ ಮಾಡಿದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಭಾಗವಹಿಸಿ ಸೇವೆಯನ್ನು ಮಾಡಿರುತ್ತಾರೆ. ಶಾಲಾ ಪ್ರಾಂಶುಪಾಲರು ಫಾ॥ ಪ್ರಕಾಶ್, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳು ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿರುತ್ತಾರೆ.

* ಗ್ಯಾರಳ್ಳಿ ತಮ್ಮಯ್ಯ ವಾರ್ಡ್ ಆಕಾಡೆಮಿ ಹಾಸನ ಶಾಲಾ ಗೈಡ್ ವಿದ್ಯಾರ್ಥಿಗಳಿಂದ ವಿಶ್ವ ಬುಡಕಟ್ಟು ದಿನವನ್ನು ಆಚರಣೆ ಮಾಡಿರುತ್ತಾರೆ ಶಾಲಾ ಮುಖ್ಯೋಪಾಧ್ಯಾಯರು ಗೈಡ್ ಶಿಕ್ಷಕಿ ಶ್ರೀಮತಿ ಆರ್ಶಿಯ ತಾನಂ ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ತಿಮ್ಮರಾಜುರವರು ವಿದ್ಯಾರ್ಥಿಗಳಿಗೆ ಸಹಕಾರ ನೀಡಿರುತ್ತಾರೆ.

* ಸ್ಥಳೀಯ ಸಂಸ್ಥೆಯ ಹಾಸನ ತಾಲ್ಲೂಕು ವತಿಯಿಂದ ಹಾಸನ ಜಿಲ್ಲಾ ಸ್ಕೌಟ್ ಭವನದಲ್ಲಿ ದೇಶ ಭಕ್ತಿಗೀತೆ ಮತ್ತು ಜಾನಪದ ಗೀತಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ ಮಾತನಾಡಿ ಅವರಲ್ಲಿರುವ ಪ್ರತಿಭೆಯನ್ನು ಹೆಚ್ಚಿಸಿಕೊಳ್ಳುವಂತಹ ಕಾರ್ಯಕ್ರಮಗಳು ಸ್ಫೂರ್ತಿ ನೀಡಿ ದೇಶಾಭಿಮಾನ ಮೂಡಿಸುವ ನಿಟ್ಟಿನಲ್ಲಿ ಸ್ವಾತಂತ್ರೋತ್ಸವದ ಈ ಸಂಧರ್ಭದಲ್ಲಿ ಅತ್ಯಂತ ಸಮಯೋಚಿತವಾಗಿದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತ ಮಕ್ಕಳಿಗೆ ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ಹಾಸನ ತಾಲೂಕಿನ ವಿವಿಧ ಶಾಲೆಯ ಕಬ್ಸ್, ಬುಲ್ ಬುಲ್, ಸ್ಕೌಟ್ ಗೈಡ್ ರೋವರ್ ರೇಂಜರ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ತೀರ್ಪುಗಾರರಾಗಿ ಜನಪ್ರಿಯ ಗಾಯಕರಾದ ಶ್ರೀ ದೊಡ್ಡಳ್ಳಿ ರಮೇಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್, ಜಿಲ್ಲಾ ಖಜಾಂಚಿ ಶ್ರೀಮತಿ ಜಯರಮೇಶ್ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ವನಜಾಕ್ಷಿ ಬಿ.ಎಸ್.ರವರು ಕಾರ್ಯಕ್ರಮವನ್ನು ಸಂಘಟಿಸಿದರು. ಶ್ರೀಮತಿ ಕನ್ಯಾಕುಮಾರಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

* ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ಕಬ್ಸ್ ಮತ್ತು ಬುಲ್‌ಬುಲ್ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೇಟೆಯಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ತಾಲೂಕು ಪದಾಧಿಕಾರಿಗಳು ಭಾಗವಹಿಸಿದರು 180ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು.



* ಶ್ರೀ ಆದಿಚುಂಚನಗಿರಿ ಎಂ.ಜಿ.ರಸ್ತೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಬ್ ಮತ್ತು ಬುಲ್‌ಬುಲ್‌ಗಳಾಗಿ ಸಿಕ್ಸರ್ ಕ್ಯಾಂಪ್ ಆಯೋಜನೆ

ಮಾಡಲಾಗಿತ್ತು. ಈ ತರಬೇತಿಯ ಉದ್ಘಾಟನೆಯನ್ನು ಶ್ರೀ ಸುರೇಶ್ ಗುರೂಜಿ ಜಿಲ್ಲಾ ಕಾರ್ಯದರ್ಶಿ ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ.ಬಿ. ದರ್ಶನ್ ಹಾಸನ ಬಿಜಿಎಸ್ ಶಾಲಾ ಮುಖ್ಯಸ್ಥರು ವಹಿಸಿಕೊಂಡಿದ್ದರು.

## ಹಾವೇರಿ

ಅಕ್ಟೋಬರ್ 11 ರಂದು ಜಿಲ್ಲಾ ಗುರುಭವನ ಹಾವೇರಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ದೈಹಿಕ ಶಿಕ್ಷಣಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಗುಚ್ಛ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ.) ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು (ಬಿ.ಆರ್.ಪಿ.) ಒಂದು ದಿನದ ಸಾಮಾನ್ಯ ಮಾಹಿತಿ ಶಿಬಿರವನ್ನು ಜರುಗಿಸಲಾಯಿತು. ಶಿಬಿರವನ್ನು ಮಾನ್ಯ ಶ್ರೀ ಗಜಾನನ ಮನ್ನಿಕೇರಿ ಸಹ ನಿರ್ದೇಶಕರು ಅಪರ ಆಯುಕ್ತರ ಕಛೇರಿ ಧಾರವಾಡ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಸಂಸ್ಥೆ ಬೆಳಗಾವಿರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿ ಎಲ್ಲರನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಗಿರೀಶ ಪದಕಿ, ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಮುಖ್ಯ ಆಯುಕ್ತರು ಜಿಲ್ಲಾ ಸಂಸ್ಥೆ ಹಾವೇರಿರವರು ಎಲ್ಲರ ಉದ್ದೇಶಿಸಿ ಮಾತನಾಡಿದರು. ಶ್ರೀ ನಾಗೇಶ್ ಶಿವಪೂರ, ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್)ರವರು ಮಾಹಿತಿ ಶಿಬಿರದ ಉದ್ದೇಶ, ಮಹತ್ವ, ಸ್ಕೌಟ್ ಮತ್ತು ಗೈಡ್ಸ್ ನಡೆದು ಬಂದ ಇತಿಹಾಸದ ಬಗ್ಗೆ ತಿಳಿಸಿದರು. ಶಿಕ್ಷಣಾಧಿಕಾರಿಗಳಾದ ಶ್ರೀ ಅಜಗೊಂಡರ, ಶ್ರೀ ಆರ್.ಜಿ. ಮೇಟಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಶ್ರೀ ರವಿ ಗೋಣೆಪ್ಪನವರ, ಗೌರವಾಧ್ಯಕ್ಷರು ಶ್ರೀ ವಿಜಯೇಂದ್ರ ಉತ್ನಳ್ಳಿ, ಜಿಲ್ಲಾ ಪ್ರಾಥಮಿಕ ಶಿಕ್ಷಕ/ ಕಿಯರ ಸಂಘ ಘಟಕ ಹಾವೇರಿ ಶ್ರೀ ಆರ್.ಡಿ. ಹೊಂಬರಡಿ ವೇದಿಕೆಯ ಮೇಲೆ ಹಾಜರಿದ್ದರು. ಪ್ರಾಸ್ತಾವಿಕ ಮತ್ತು ಸ್ವಾಗವನ್ನು ಶ್ರೀ ಎ.ಎಲ್. ಸೂರಣಗಿ ಮಾಡಿದರು. ವಂದನಾರ್ಪಣೆಯನ್ನು ಶ್ರೀ ಕೆ.ಟಿ. ಮಲ್ಲೇಶಪ್ಪ ಮಾಡಿದರು.



* ಅಕ್ಟೋಬರ್ 12 ರಂದು ತಾಲ್ಲೂಕು ಶಿಕ್ಷಕ/ ಕಿಯರ ಪತ್ತಿನ ಸಹಕಾರಿ ಸಂಘ ರಾಣೇಬೆನ್ನೂರಿನಲ್ಲಿ ಜಿಲ್ಲಾ ಮಟ್ಟದ ಗೀತಗಾಯನ ಮತ್ತು ಜಾನಪದ ಗೀತೆಗಳ ಸ್ಪರ್ಧೆಗಳನ್ನು ನಡೆಸಲಾಯಿತು. ಶ್ರೀ ಎಂ.ಎಚ್. ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಣೆಬೆನ್ನೂರು ಅವರು ಗಿಡಕ್ಕೆ ನೀರನ್ನು ಹಾಕುವದರೊಂದಿಗೆ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಕ್ಕಳ ಪ್ರತಿಭೆಯನ್ನು ಹೊರಹಾಕಲಿಕ್ಕೆ ಇಂತಹ ವೇದಿಕೆಗಳು ಅತಿ ಅವಶ್ಯಕ ಎಂದರು. ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಜಯಂತಿ, ಜಿಲ್ಲಾ ಗೈಡ್ಸ್ ಆಯುಕ್ತರು, ಶ್ರೀ ಜಿ.ವಿ. ಹಿರೇಗೌಡ್ರ, ಜಿಲ್ಲಾ ಖಜಾಂಚಿ



ಶ್ರೀ ಆರ್.ಜಿ. ಮೇಟಿ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಸಂಘದ ಅಧ್ಯಕ್ಷ ಶ್ರೀ ಹೇಮಂತ್, ಶ್ರೀ ಎಂ.ಆರ್. ಪಾಟೀಲ್ ಉಪಸ್ಥಿತರಿದ್ದರು.

## ಕಲಬುರಗಿ

ಸೆಪ್ಟೆಂಬರ್ 19 ರಂದು ಸಿದ್ದಾರ್ಥ ಮೂಕ ಮತ್ತು ಕಿವುಡ ಶಾಲೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯರವರ 75ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ನಾಗಪ್ಪ ಕೆ. ಹೊನ್ನಳ್ಳಿ, ಅಧ್ಯಕ್ಷರು ಶ್ರೀ ಸಿ.ಬಿ. ಪಾಟೀಲ್ ಓಕಳಿ, ಮುಖ್ಯ ಅತಿಥಿ ಜಿಲ್ಲಾ ಆಯುಕ್ತರು ಶ್ರೀ ಎಸ್.ಪಿ. ಸುಳ್ಳಾದ್, ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ಸುಜಾತ ಹಾಜರಿದ್ದರು. ಅದೇ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ನಾಗಪ್ಪ ಹೊನ್ನಳ್ಳಿ ಅವರು ಮಕ್ಕಳಿಗೆ ರಾತ್ರಿ ಊಟದ ಸಲುವಾಗಿ 5000 ರೂಪಾಯಿಯನ್ನು ನೀಡಿದರು.



* ಸೆಪ್ಟೆಂಬರ್ 13 ರಂದು ನಡೆದ ಜಿಲ್ಲಾ ಮಟ್ಟದ ದೇಶಭಕ್ತಿ ಗೀತ ಗಾಯನ ಪ್ರತಿಭಾ ಪುರಸ್ಕಾರ ಹಾಗೂ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮುವನ್ನು ವಿವೇಕಾನಂದ ವಿದ್ಯಾ ನಿಕೇತನ ಶಾಲೆಯುಲ್ಲಿ ಹಮ್ಮಿಕೊಂಡಿದ್ದು ದೇಶಭಕ್ತಿ ಗೀತ ಗಾಯುನದ ಉದ್ಘಾಟಕರಾಗಿ ಶ್ರೀ ಶಶಿಲ್ ಜಿ. ನಮೋಶಿ, ವಿಧಾನ ಪರಿಷತ್ ಸದಸ್ಯರು ಬೆಂಗಳೂರು ಶ್ರೀಮತಿ ಜಗದೇವಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ದಕ್ಷಿಣ ವಲಯು ಶಾಲೆಯ ಪ್ರಾಂಶುಪಾಲರಾದ ಶ್ರೀ ಬಸಪ್ಪ ಭಗವತಿ



ಭಾಗವಹಿಸಿದ್ದರು. ಅಧ್ಯಕ್ಷರಾಗಿ ಶ್ರೀಮತಿ ಸುಜಾತಾ ಈ ಮುಲ್ಲಾ ಗೈಡ್ ಆಯುಕ್ತರು ಭಾಗವಹಿಸಿದ್ದರು. ಗೀತ ಗಾಯನದ ತೀರ್ಪುಗಾರರಾಗಿ ಶ್ರೀ ಬಾಬುರಾವ್ ಕೋಬಾಳ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಶ್ರೀ ಬಸಯ್ಯ ಬಿ. ಗುತ್ತೇದಾರ್, ಸಂಗೀತ ಕಲಾವಿದರು ಕಲಬುರ್ಗಿ ಹಾಗೂ 8 ತಾಲ್ಲೂಕಿನ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಕಬ್ಸ್-ಬುಲ್‌ಬುಲ್ಸ್, ಸ್ಕೌಟ್-ಗೈಡ್ಸ್, ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶ್ರೀ ಅಪ್ಪಾಸಾಬ್ ತೀರ್ಥರವರಿಗೆ ಜಿಲ್ಲಾ ಸಂಸ್ಥೆಯಿಂದ ಸನ್ಮಾನಿಸಲಾಯಿತು.

* ಜಿಲ್ಲಾ ಸಂಸ್ಥೆ ಕಲ್ಬುರ್ಗಿ ವತಿಯಿಂದ ಸೆಪ್ಟೆಂಬರ್ 29 ರಂದು ಕಲಬುರಗಿ ನಗರದ ಸೆಂಟ್ ಮೇರಿ ಆಂಗ್ಲ ಮಾಧ್ಯಮ ಶಾಲೆ ಕೋಟನೂರು(ಡಿ)ಯಲ್ಲಿ ಕಲ್ಬುರ್ಗಿ ಜಿಲ್ಲಾ ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಸಮನ್ವಯ ಅಧಿಕಾರಿಗಳು ಸಿ.ಆರ್.ಸಿ.ಬಿ., ಆರ್.ಸಿ.ಬಿ.ಆರ್.ಪಿ. ಹಾಗೂ ತಾಲ್ಲೂಕು ಮಟ್ಟದ ದೈಹಿಕ ಶಿಕ್ಷಣಾಧಿಕಾರಿಗಳ ಮಾಹಿತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಶ್ರೀ ಆಕಾಶ .ಎಸ್, ಅಪರ ಆಯುಕ್ತರು ಶಿಕ್ಷಣ ಇಲಾಖೆ ಕಲಬುರಗಿ ಇವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ 'ವಿದ್ಯಾರ್ಥಿಗಳಲ್ಲಿ ಶಿಸ್ತು ಸಮಯ ಪ್ರಜ್ಞೆ ಹಾಗೂ ದೇಶಪ್ರೇಮ ಬೆಳೆಸುವಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ತುಂಬಾ ಉಪಯುಕ್ತವಾಗಿದೆ' ಕಾರಣ ತಾವು ಶಾಲೆಗಳಿಗೆ ಸಂದರ್ಶನ ನೀಡಿದಾಗ ಈ ಮಾಹಿತಿ ನೀಡಬೇಕೆಂದು ಕರೆ ಕೊಟ್ಟರು ಸಮಾರಂಭದಲ್ಲಿ ಸೆಂಟ್ ಮೇರಿ ಶಾಲೆಯ ಸಂಚಾಲಕರಾದ ಶ್ರೀ ಫಾದರ್ ಪ್ರಕಾಶ್ ಮಾತನಾಡುತ್ತಾ ಮನುಷ್ಯರಲ್ಲಿ ಸಹಕಾರ ಭಾವನೆ ಬೆಳೆಯಬೇಕೆಂದರೆ ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಸಾಧ್ಯವಾಗುತ್ತಿದೆ ಎಂದು ಹೇಳಿದರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಸಕ್ರಪ್ಪಗೌಡ ಬಿರಾದಾರ್, ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಕಲ್ಬುರ್ಗಿ ಇವರು ಮಾತನಾಡುತ್ತಾ ಸ್ವಚ್ಛತೆ ಶಿಸ್ತು ಸಮಯದ ಪ್ರಜ್ಞೆ ಮಕ್ಕಳಲ್ಲಿ ಬೆಳೆಯಬೇಕಾಗಿದೆ ಶಿಕ್ಷಕರಿಗೆ ಅಧಿಕಾರ ವರ್ಗದವರಿಗೆ ಇಂತಹ ತರಬೇತಿಗಳಿಂದ ಸಾಧ್ಯವೆಂದು ನುಡಿದರು.




## ಕಾರವಾರ (ಉ.ಕ.)

ಸೆಪ್ಟೆಂಬರ್ 27ರಂದು ಜಿಲ್ಲಾ ಪಂಚಾಯತ್ ಕಾರವಾರ, ಉಪನಿರ್ದೇಶಕರು (ಆಡಳಿತ), ಕುಮಟಾ ಡಯಟ್ ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಕಾರವಾರ ಹಾಗೂ ಜಿಲ್ಲಾ ಸಂಸ್ಥೆ, ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಮತ್ತು ತಾಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಸಿ.ಆರ್.ಪಿ., ಬಿ.ಆರ್.ಪಿ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳ ಒಂದು ದಿನದ ಸ್ಕೌಟಿಂಗ್ ಮತ್ತು ಗೈಡಿಂಗ್ ಮಾಹಿತಿ ಕಾರ್ಯಾಗಾರವು ಕುಮಟಾ ಡಯಟ್‌ನಲ್ಲಿ ಆರಂಭಗೊಂಡಿತು.



ಪ್ರಾಸ್ತಾವಿಕ ಸ್ವಾಗತವನ್ನು ಶ್ರೀ ಆರ್.ಟಿ. ಹೆಬ್ಬಾರ್ ಜಿಲ್ಲಾ ಕಾರ್ಯದರ್ಶಿ ಮಾಡಿದರು. ಕಾರ್ಯಕ್ರಮವನ್ನು ಶ್ರೀ ಎನ್.ಜಿ. ನಾಯಕ್ ಸಭೆಯಲ್ಲಿ ಭಾಗವಹಿಸಿದ್ದ ಗಣ್ಯರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಎಲ್ಲರೂ ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಬನ್ನಿ, ಕಬ್-ಬುಲ್‌ಬುಲ್, ಸ್ಕೌಟ್ ಮತ್ತು ಗೈಡ್ ಘಟಕಗಳ ಪ್ರಾರಂಭಿಸಲು ಸಹಕರಿಸಬೇಕೆಂದು ನುಡಿದರು. ಶ್ರೀ ಜಿ.ಆರ್. ಮಡಿವಾಳ್ ಜಿಲ್ಲಾ ಕೋಶಾಧಿಕಾರಿ ಸರ್ವರನ್ನೂ ವಂದಿಸಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಕಾರವಾರ ಜಿಲ್ಲೆಯ ಸುಮಾರು ಐದು ದಶಕಗಳ ಪರಿಚಯ ತಿಳಿಸುತ್ತಾ ಸ್ಕೌಟಿಂಗ್ ಬೆಳವಣಿಗೆಯ ಬಗ್ಗೆ ಹಾಗೂ ಜಿಲ್ಲೆಯ ಮಹಾನ್ ನಾಯಕರುಗಳ ಬಗ್ಗೆ ಮೆಲಕು ಹಾಕಿದರು. ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಮಾನ್ಯ ಶ್ರೀ ಗಜಾನನ ಮನ್ನಿಕೆರಿ, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬೆಳಗಾವಿ ವಿಭಾಗದ ಆಯುಕ್ತರು ಸ್ಕೌಟ್ ಜಿಲ್ಲಾ ಮುಖ್ಯ ಆಯುಕ್ತರು ಬೆಳಗಾವಿ ಇವರು "ಶಾಲಾ ಹಂತದಿಂದ ರಾಷ್ಟ್ರೀಯ ಹಂತದವರೆಗೆ ಸರ್ಕಾರದ ಕೆಲಸಗಳನ್ನು ಕೂಡ ಬಹಳ ಅಚ್ಚುಕಟ್ಟಾಗಿ ಮಾಡುವ ತಾವುಗಳು ಮನಸ್ಸು ಮಾಡಿದರೆ ಸ್ಕೌಟ್ ಮತ್ತು ಗೈಡನ್ನು ಕೆಲವೇ ತಿಂಗಳುಗಳಲ್ಲಿ ಅತ್ಯಂತ ಉನ್ನತ ಮಟ್ಟಕ್ಕೆ ಒಯ್ಯಬಹುದು" ಎಂದರು. ಶ್ರೀ ಎನ್.ಜಿ. ನಾಯಕ್ ಡಯಟ್ ಪ್ರಾಂಶುಪಾಲರು, ಶ್ರೀ ನಾಗರಾಜ್ ಗೌಡ, ಜಿಲ್ಲಾ ಸಮೂಹ ಸಂಪನ್ಮೂಲ ಅಧಿಕಾರಿ, ಕಾರವಾರ ಶ್ರೀ ಜಿ.ಎಸ್. ಭಟ್, ಉಪ ಪ್ರಾಂಶುಪಾಲರು ಡಯಟ್ ಕುಮುಟಾ, ಶ್ರೀ ಪರಮೇಶ್ವರ್ ಭಂಡಾರಿ, ಜಿಲ್ಲಾ ನೋಡಲ್ ಅಧಿಕಾರಿ, ಶ್ರೀ ಎಸ್.ಎಸ್. ಭಟ್, ಉಪಾಧ್ಯಕ್ಷರು, ಶ್ರೀ ಆರ್.ಎಲ್. ಭಟ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಮಟಾ, ಶ್ರೀಮತಿ ಮಂಗಳದೇವಿ ಪಾಟೀಲ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಂಕೋಲ, ಜಿಲ್ಲಾ ಹಾಗೂ ತಾಲೂಕ್ ನೋಡಲ್ ಅಧಿಕಾರಿಗಳು, ಡಯಟ್ ಉಪನ್ಯಾಸಕರುಗಳು, ಶ್ರೀ ಎಸ್.ಪಿ. ನಾಯಕ್, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ತಾಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ.ಗಳು, ಬಿ.ಆರ್.ಪಿ.ಗಳು, ಸಿ.ಆರ್.ಪಿ.ಗಳು, ಅಧಿಕಾರಿ ವರ್ಗದವರು ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಕಾರ್ಯದಲ್ಲಿ ಪಾಲ್ಗೊಂಡಿದ್ದರು.



## ಕೊಡಗು

ಜಿಲ್ಲಾ ಸಂಸ್ಥೆ ಕೊಡಗಿನಲ್ಲಿ ಸೆಪ್ಟೆಂಬರ್ 30 ರಂದು ಕಾವೇರಿ ಕಾಲೇಜು ಗೋಣಿಕೊಪ್ಪಲು ರೋವರ್ಸ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ಫೀಲ್ಡ್‌ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಪ್ರತಿಮೆ ಆವರಣದಲ್ಲಿ ಶ್ರಮದಾನ ಕೈಗೊಳ್ಳಲಾಯಿತು.




* ಸೆಪ್ಟೆಂಬರ್ 30 ರಂದು ಮಡಿಕೇರಿಯ ಸುದರ್ಶನ ವೃತ್ತದ ಬಳಿ ಇರುವ ಗಾಂಧಿ ಭವನದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಎಚ್.ಆರ್. ಮುತ್ತಪ್ಪ, ಜಿಲ್ಲಾ ಜಂಟಿ ಕಾರ್ಯದರ್ಶಿಯಾದ ಶ್ರೀ ಬೋಳ್ಳಾಜೀರ ಅಯ್ಯಪ್ಪ, ಜಿಲ್ಲಾ ಸಹಾಯಕ ಕಾರ್ಯದರ್ಶಿ ಶ್ರೀ ಕುಟ್ಟಪ್ಪ, ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು, ಅಲ್ಲದೆ ಸರ್ವೋದಯ ಸಮಿತಿಯ ಅಧ್ಯಕ್ಷರಾದ ಶ್ರೀ ಕುಶಾಲಪ್ಪ, ಶ್ರೀ ಟಿ.ಪಿ. ರಮೇಶ್ ಉಪಸ್ಥಿತರಿದ್ದರು



* ಅಕ್ಟೋಬರ್ 18 ರಂದು ನಡೆದ ಕೊಡಗು ಜಿಲ್ಲೆಯ ಪವಿತ್ರ ಕಾವೇರಿ ಮಾತೆಯ ತೀರ್ಥೋದ್ಭವ ಸಮಯದಲ್ಲಿ ಶ್ರೀ ಕಾವೇರಿ ಪದವಿ ಪೂರ್ವ ಕಾಲೇಜು ಭಾಗಮಂಡಲ 15 ರೋವರ್ಸ್‌ಗಳು ಮತ್ತು ಉಪನ್ಯಾಸಕರಾದ ಶ್ರೀ ಶಿವಪ್ಪ, ಶ್ರೀ ಸಂಪಾ ಜೀ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಧನಂಜಯ್, ಕಾರ್ಯದರ್ಶಿಯವರಾದ ಶ್ರೀಮತಿ ಉಷಾರಾಣಿ, ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಅಲ್ಲದೆ ರೋವರ್ ಲೀಡರ್ ಶ್ರೀ ಜನಾರ್ಧನ್ ಇವರುಗಳು ಉತ್ತಮ ಸೇವೆ ಸಲ್ಲಿಸಿದರು.




## ಕೋಲಾರ

ಸೆಪ್ಟೆಂಬರ್ 21 ರಂದು ಕೋಲಾರ ನಗರದ ಸುಭಾಶ್ ಮತ್ತು ಎ.ಇ.ಎಸ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಅಂತಾರಾಷ್ಟ್ರೀಯ ಶಾಂತಿ ದಿನಾಚರಣೆ" ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತ ಶ್ರೀ ಕೆ.ಆರ್. ಸುರೇಶ್, ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಪಾಲ್ಗುಣ, ಶ್ರೀ ಚೇತನ್ ಮತ್ತು ಪ್ರಮುಖ ರಸ್ತೆಗಳಲ್ಲಿ ಜಾಥ ಮಾಡಿ ಅರಿವು ಮೂಡಿಸಲಾಯಿತು.

* ಸೆಪ್ಟೆಂಬರ್ 22 ರಂದು ಸ್ಥಳೀಯ ಸಂಸ್ಥೆ ಮುಳಬಾಗಿಲು, ಕೋಲಾರ ಜಿಲ್ಲೆ ಬಿ.ಆರ್.ಸಿ ಕಛೇರಿ ಆವರಣ ಮುಳಬಾಗಿಲು ಇಲ್ಲಿ ತಾಲ್ಲೂಕು ಮಟ್ಟದ ದೇಶಭಕ್ತಿ ಮತ್ತು ಜಾನಪದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಗಂಗರಾಮಯ್ಯರವರು ವಹಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಸೋಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟಗಿರಿಯಪ್ಪ, ಸ್ಥಳೀಯ ಸಂಸ್ಥೆ ನಿ.ಪೂ. ಕಾರ್ಯದರ್ಶಿ ಶ್ರೀ ಭಾಸ್ಕರ್ ರೆಡ್ಡಿ, ಮುಂತಾದವರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಶ್ರೀಮತಿ ಮಂಜುಳ ಮತ್ತು ಶ್ರೀ ಸುಧಾಕರ್‌ರವರು ಕಾರ್ಯನಿರ್ವಹಿಸಿದರು.

* ಸೆಪ್ಟೆಂಬರ್ 23 ರಂದು ಬಾಲಕರ ಪದವಿ ಪೂರ್ವ ಕಾಲೇಜು ಬಂಗಾರಪೇಟೆಯಲ್ಲಿ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಎನ್.ಎಂ. ಶಂಕರಪ್ಪ, ಉಪಪ್ರಾಂಶುಪಾಲರು ಮತ್ತು ಸ್ಥಳೀಯ ಸಂಸ್ಥೆ ನೂತನ ಅಧ್ಯಕ್ಷರು ಡ್ರಮ್ಸ್ ನುಡಿಸುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು "ಮಕ್ಕಳಲ್ಲಿ ಶಿಸ್ತು ಮೂಡಿಸಲು ಸ್ಕೌಟ್–ಗೈಡ್ ಸಂಸ್ಥೆ ಸಹಕಾರಿಯಾಗಿದೆ. ನಾನೂ ಸಹ ವಿದ್ಯಾರ್ಥಿ ದೆಸೆಯಲ್ಲಿ ಎನ್.ಸಿ.ಸಿ.ಯಲ್ಲಿ ಇದ್ದು ಉತ್ತಮ ಸೇವೆ ಸಲ್ಲಿಸಿದ್ದೇನೆ. ಇಂದಿನ ಮಕ್ಕಳಿಗೆ ಶಿಸ್ತು ತಾಯಿ ಬೇರು ಇದ್ದ ಹಾಗೆ ಮಕ್ಕಳು ಮೂಲದಿಂದಲೂ ಶಿಸ್ತನ್ನು ರೂಡಿಸಿಕೊಂಡಾಗ ಉತ್ತಮ ಪ್ರಜೆಗಳಾಗಲು ಸಾಧ್ಯ" ಎಂದು ತಿಳಿಸಿದರು. ಸಂಸ್ಥೆಯ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀಮತಿ ಸುಜಾತರವರು ಮಾತನಾಡಿ ಮಕ್ಕಳು ಈ ಸಂಸ್ಥೆಯಲ್ಲಿ ಸೇರಿ ಶಿಸ್ತನ್ನು ಕಲಿಯುವುದರೊಂದಿಗೆ ಉತ್ತಮ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಸೃಜನಶೀಲತೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ತಿಳಿಸಿದರು.

* ಸೆಪ್ಟೆಂಬರ್ 28 ರಂದು ಕೋಲಾರ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ದಳ ನಾಯಕರ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

* ಸೆಪ್ಟೆಂಬರ್ 25 ರಿಂದ 30ರ ವರೆಗೆ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಮಾನ್ಯ ಮುಖ್ಯ ಕಾರ್ಯನಿರ್ವಾಹಕರ ಸೂಚನೆಯಂತೆ "ನನ್ನ ದೇಶ ನನ್ನ ಮಣ್ಣು" ಕಾರ್ಯಕ್ರಮವನ್ನು ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಆಯೋಜಿಸಲಾಗಿತ್ತು ಮತ್ತು ಮಣ್ಣು ಸಂಗ್ರಹ ಮಾಡಲಾಯಿತು.

* ಅಕ್ಟೋಬರ್ 01 ರಂದು ಕೋಲಾರ ಜಿಲ್ಲಾ ಸಂಸ್ಥೆ ಮತ್ತು ಲೀಡ್ ಬ್ಯಾಂಕ್ ಕೋಲಾರ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಪ್ಲಾಗ್ ಶಿಪ್ ಕಾರ್ಯಕ್ರಮವಾದ ಎಕ್ ತಾರೀಖ್ ಎಕ್ ಗಂಟ ಸ್ವಚ್ಚತಾ ಕಾರ್ಯಕ್ರಮ ಮತ್ತು ಜಾಥ ಕಾರ್ಯಕ್ರಮವನ್ನು ಕೋಲಾರ ನಗರದ ಡಾ. ಬಿ.ಆರ್. ಅಂಬೇಡ್ಕರ್

ಪಾರ್ಕ್ ಬಳಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದರು. ಇದೇ ದಿನ ಈ ಕಾರ್ಯಕ್ರಮವನ್ನು ಜಿಲ್ಲೆಯ ವಿವಿಧ ದಳ ಮತ್ತು ಸ್ಥಳೀಯ ಸಂಸ್ಥೆ ಹಂತದಲ್ಲಿ ಆಯೋಜಿಸಲಾಗಿತ್ತು.

* ಅಕ್ಟೋಬರ್ 02 ರಂದು ಕೋಲಾರ ಜಿಲ್ಲಾ ಮಟ್ಟದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿರವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಹಾಗೂ ಗೀತಗಾಯನ ಸ್ಪರ್ಧೆಯನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸರ್ವ ಧರ್ಮ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು ಕಾರ್ಯಕ್ರಮದ ಅಧ್ಯಕ್ಷತೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕರಾದ ಶ್ರೀ ಸಿ.ಎಂ.ಆರ್. ಶ್ರೀನಾಥ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀ ಸಿದ್ದಗಂಗಯ್ಯ ಭಾಗವಹಿಸಿ ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ವಿವಿಧ ಪದಾಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಶಾಲೆಗಳ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದರು. ಇದೇ ದಿನ ಕೋಲಾರ ಜಿಲ್ಲಾ ಸಂಸ್ಥೆ ವ್ಯಾಪ್ತಿಯ ವಿವಿಧ ಶಾಲೆ, ದಳ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಕಾರ್ಯಕ್ರಮ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಮಾಡುವ ಮೂಲಕ ಆಚರಿಸಲಾಯಿತು. ಇದೇ ದಿನ ಗೀತಗಾಯನ ಸ್ಪರ್ಧೆಯನ್ನು ಸಹ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸಮಾಜ ಸೇವಕರಾದ ಶ್ರೀ ಸಿ.ಎಂ.ಆರ್. ಶ್ರೀನಾಥ್‌ರವರು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಸಿದ್ದಗಂಗಯ್ಯರವರು ಉದ್ಘಾಟಿಸಿ ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಮುಖ್ಯ ಆಯುಕ್ತರು ಅವರು ವಹಿಸಿದ್ದರು. ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಅಕ್ಟೋಬರ್ 08 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಕುರುಮಾಕಲಹಳ್ಳಿ ಮತ್ತು ಅಕ್ಟೋಬರ್ 14 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೂವಳ್ಳಿ, ಶ್ರೀನಿವಾಸಪುರ ತಾ॥, ಕೋಲಾರ ಜಿ॥, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್ ರೇಂಜರ್ಸ್ ತಂಡ, ರೋಟರಿ ಕೋಲಾರ ನಂದಿನಿ, ರೋಟರಿ ಸೆಂಟ್ರಲ್ ಶ್ರೀನಿವಾಸಪುರ ವತಿಯಿಂದ 2 ಶಾಲೆಗಳ ಬಣ್ಣ ಬಳಿಯುವ ಮೂಲಕ ಸೇವಾ ಶಿಬಿರ ಆಯೋಜಿಸಿದರು. ಸ್ಕೌಟ್ಸ್, ರೋಟರಿ ಪದಾಧಿಕಾರಿಗಳು ಮತ್ತು ಶ್ರೀನಿವಾಸಪುರ ಕಾಲೇಜಿನ ರೋವರ್ಸ್ ರೇಂಜರ್ಸ್ ಸೇವಾ ಶಿಬಿರದಲ್ಲಿ ಭಾಗವಹಿಸಿದರು.








## ಕೊಪ್ಪಳ

ಸೆಪ್ಟೆಂಬರ್ 05 ರಂದು ಜಿಲ್ಲಾ ಆಡಳಿತ ಕೊಪ್ಪಳದಿಂದ ಜಿಲ್ಲಾ ಸಾಹಿತ್ಯ ಭವನ ಕೊಪ್ಪಳದಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು. ತಾಲ್ಲೂಕು ಕ್ರೀಡಾಂಗಣದಿಂದ, ಸಾಹಿತ್ಯ ಭವನದ ವರೆಗೆ ಜರುಗಿದ ಜಾಥಾ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಪದಾಧಿಕಾರಿಗಳು, ಶಿಕ್ಷಕರು ಪಾಲ್ಗೊಂಡಿದ್ದರು. ನಂತರ ಸಾಹಿತ್ಯ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರು, ಶ್ರೀ ನಟರಾಜ್ ಸೂನಾರ್, ಹೆಚ್.ಪಿ.ಎಸ್. ಬಸಾಪೂರ ಬಿಜಕಲ್ ತಾ॥ ಕುಷ್ಟಗಿ ಶ್ರೀಮತಿ ಜಯಶ್ರೀ ಕೊಡಬಾಳ್ ಎಂ.ಹೆಚ್.ಪಿ.ಎಸ್. ಸ್ಕೋಲ್ ಬಂಡಿ ತಾ॥ ಯಲಬುರ್ಗಾ ಗೈಡ್ಸ್ ಕ್ಯಾಪ್ಟನ್‌ರವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ಮತ್ತು ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ್, ಶ್ರೀ ಸಂಗಣ್ಣ ಕರಡಿ, ಸಂಸದರು ಕೊಪ್ಪಳ ಮತ್ತು ಜಿಲ್ಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸನ್ಮಾನಿಸಿ ಶಿಕ್ಷಕರಿಗೆ ಗೌರವಿಸಿದರು.

* ಸೆಪ್ಟೆಂಬರ್ 07 ರಂದು ಯಲಬುರ್ಗಾ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ವಿದ್ಯಾಸಾಗರ ಪ್ರಾಥಮಿಕ ಶಾಲೆ ಯಲಬುರ್ಗಾದಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಚ್.ಎಂ. ಶ್ರೀ ಬಸವರಾಜ್ ಚಾರಗಸಿವಾಕ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಫ್.ಎಂ. ಕಳ್ಳಿ ಅಕ್ಷರ ದಾಸೋಹ ಸಹನಿರ್ದೇಶಕರು ಆಗಮಿಸಿದ್ದರು. ಅತಿಥಿಗಳಾಗಿ ಶ್ರೀ ಶ್ರೀಕಾಂತ ಮಾಸಗಟ್ಟಿ, ಡಿ.ಟಿ.ಸಿ.(ಎಸ್)ರವರು ಶ್ರೀ ವೀರನಗೌಡ, ಪೊಲೀಸ್ ಪಾಟೀಲ, ರಾಜ್ಯ ಸ್ಕೌಟ್ಸ್ ಪ್ರತಿನಿಧಿಗಳು, ಶ್ರೀ ವೀರಪ್ಪ ಗಾಣಿಗೇರ ಎಲ್.ಎ. ಕಾರ್ಯದರ್ಶಿ, ಯಲಬುರ್ಗಾ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 13 ರಂದು ಕೊಪ್ಪಳ ಜಿಲ್ಲೆಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ ಒಂದು ದಿನದ ಸಾಮಾನ್ಯ ಮಾಹಿತಿ



ಶಿಬಿರವನ್ನು ಸರಕಾರಿ ಪ್ರಥಮದರ್ಜೆ ಕಾಲೇಜು ಕೊಪ್ಪಳದಲ್ಲಿ ಜರುಗಿಸಲಾಯಿತು. ಜಿಲ್ಲೆಯ ಎಲ್ಲಾ ಕಾಲೇಜುಗಳಿಂದ 34 ಜನ ಉಪನ್ಯಾಸಕರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಶ್ರೀ ತಿಮ್ಮಾರೆಡ್ಡಿ ಮೇಟಿ ವಹಿಸಿದರು. ಶ್ರೀ ಜಗದೀಶ್, ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಕಡ್ಡಾಯವಾಗಿ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಘಟಕಗಳು ಪ್ರಾರಂಭಿಸಬೇಕು, ಮತ್ತು ಉಪನ್ಯಾಸಕರು ಕೂಡ ತರಬೇತಿ ಪಡೆಯಬೇಕು ಎಂದು ಹೇಳಿ ಚಟುವಟಿಕೆಗಳು ಹೆಚ್ಚುಗೊಳಿಸಬೇಕೆಂದು ಸೂಚಿಸಿದರು. ಅಧ್ಯಕ್ಷತೆ ವಹಿಸಿದ ಶ್ರೀ ತಿಮ್ಮಾರೆಡ್ಡಿರವರು, ನಮ್ಮ ಮಹಾವಿದ್ಯಾಲಯದಲ್ಲಿ ಘಟಕ ಪ್ರಾರಂಭವಿದ್ದು ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸೇವಾ ಮನೋಭಾವ ಬೆಳೆಸಿಕೊಂಡು, ಹೋಗುವ ಈ ಒಂದು ಸಂಸ್ಥೆಗೆ, ನಾವುಗಳು, ಸಮಯಕೊಟ್ಟು ಸೇವಾ ಮನೋಭಾವನೆಯಿಂದ ಕಾರ್ಯಮಾಡಬೇಕು ಎಂದು ತಿಳಿಸಿ ಮಾತನಾಡಿದರು.

* ಸೆಪ್ಟೆಂಬರ್ 15 ರಿಂದ 17ರ ವರೆಗೆ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಗೊನ್ನಳ್ಳಿ ತಾ॥ ಕೊಪ್ಪಳ ಇಲ್ಲಿ ಜಿಲ್ಲಾ ಮಟ್ಟದ, ರೋವರ್ಸ್ ಮತ್ತು ರೇಂಜರ್ಸ್ "ನಿಪುಣ ಪರೀಕ್ಷಾ" ಶಿಬಿರವನ್ನು ಜರುಗಿಸಲಾಯಿತು. ಶಿಬಿರಕ್ಕೆ ಶ್ರೀ ಎಚ್.ಎಂ. ಸಿದ್ಧರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಮತ್ತು ಜಿಲ್ಲಾ ಮುಖ್ಯ ಆಯುಕ್ತರು ಆಗಮಿಸಿ, ಶಿಬಿರ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಮಲ್ಲಿಕಾರ್ಜುನ್ ಚೌಕಿಮಠ ಡಿ.ಸಿ.(ಎಸ್)ರವರು ಮಾತನಾಡಿ ಶುಭ ಕೋರಿದರು. ಶಿಬಿರಕ್ಕೆ ನಾಯಕರಾಗಿ ಶ್ರೀ ಮಂಜುನಾಥ್ ಆರ್.ಎಸ್.ಎಲ್., ಜಿ.ಎಫ್.ಜಿ.ಸಿ. ಕೊಪ್ಪಳ ಮತ್ತು ಶ್ರೀಮತಿ ಕೆ. ಆಶೀಕಾ, ಆರ್.ಎಲ್., ಜಿ.ಎಫ್.ಜಿ.ಸಿ. ಕನಕಗಿರಿ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ ಒಟ್ಟು 101 ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಮಲ್ಲೇಶ್ವರಿ, ಜುಜಾರಿ ಉಸ್ತುವಾರಿಗಳೂ ಶಿಬಿರಕ್ಕೆ ಮಾರ್ಗದರ್ಶನ ನೀಡಿದರು.

* ಸೆಪ್ಟೆಂಬರ್ 08 ರಂದು "ಅಂತರಾಷ್ಟ್ರೀಯ ಸಾಕ್ಷರತಾ" ದಿನಾಚರಣೆಯನ್ನು ಗ್ರಾಮ ಪಂಚಾಯತ್ ಕಿನ್ನಾಳ ಮತ್ತು ಕೆ.ಎಸ್.ಎಂ.ಎಸ್. ಕಿನ್ನಾಳ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿಸಲಾಯಿತು. ಗ್ರಾಮ ಪಂಚಾಯತ್ ಕಿನ್ನಾಳದಿಂದ 'ಸಾಕ್ಷರತಾ ಜಾಥಾ' ಕಾರ್ಯಕ್ರಮದಲ್ಲಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀ ಮಾರುತಿ ಆರೇರ್, ಜಿಲ್ಲಾ ಕಾರ್ಯದರ್ಶಿಗಳು ಶ್ರೀಮತಿ ಬಸಮ್ಮ ಜಟ್ಟಲ್ ಹೆಚ್.ಡಬ್ಲ್ಯೂ.ಬಿ. ಗೈಡ್ಸ್ ಶ್ರೀ ಎಸ್.ಎಂ. ಹತ್ತಿಮತ್ತೂರ ಎ.ಎಸ್.ಓ.ಸಿ. ಕೊಪ್ಪಳ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 21 ರಂದು ಕೊಪ್ಪಳ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಸಿ.ಪಿ.ಎಸ್. ಕೇಂದ್ರಿಯ ಶಾಲೆ, ಕೊಪ್ಪಳದಲ್ಲಿ ಜರುಗಿಸಲಾಯಿತು. ಕಾರ್ಯಕ್ರಮಕ್ಕೆ ಶ್ರೀ ಬೀರಪ್ಪ ಅಂಡಗಿ, ರಾಜ್ಯ ಸರಕಾರಿ ನೌಕರರ ವಿಕಲಚೇತನ ರಾಜ್ಯಾಧ್ಯಕ್ಷರು ಆಗಮಿಸಿ, ಕಾರ್ಯಕ್ರಮಕ್ಕೆ ಶುಭಕೋರಿ ಮಾತನಾಡಿದರು, ಶ್ರೀ ಶ್ರೀಕಾಂತ ಮಾಸಗಟ್ಟಿ ಡಿ.ಟಿ.ಸಿ.(ಎಸ್), ಶ್ರೀ ಎಸ್.ಎಚ್. ಹತ್ತಿಮತ್ತೂರ, ಎ.ಎಸ್.ಓ.ಸಿ.(ಎಸ್) ಹಾಗೂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮಲ್ಲಪ್ಪ ಗುಡದಣ್ಣವರ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು. ನಿರ್ಣಾಯಕರಾಗಿ ಶ್ರೀ ಶೈಲಾನಿ ಭಾಷಾ, ಶ್ರೀ ಗವಿಸಿದ್ದಪ್ಪ ರವರು ಕಾರ್ಯನಿರ್ವಹಿಸಿದರು.



ಗೀತಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ಧರಾಮಸ್ವಾಮಿ ಹಾಗೂ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಮಲ್ಲಿಕಾರ್ಜುನ ಚೌಕಿಮಠ ಅವರು ಪ್ರಶಸ್ತಿ ನೀಡಿ ಶುಭಕೋರಿದರು.



* ಕಲಬುರಗಿ ವಿಭಾಗದ ಶಿಕ್ಷಣ ಇಲಾಖೆ ಆಯುಕ್ತರಾದ ಶ್ರೀ ವಿಜಯಕುಮಾರ್ ಅವರು ಜಿಲ್ಲಾ ಸಂಸ್ಥೆ ಕೊಪ್ಪಳಕ್ಕೆ ಮತ್ತು ಜಿಲ್ಲಾ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದ ಕ್ಷಣ.

## ಮೈಸೂರು

ಸೆಪ್ಟೆಂಬರ್ 17 ರಂದು ಇಂಡಿಯನ್ ಸ್ವಚ್ಛತಾ ಲೀಗ್ ಕಾರ್ಯಕ್ರಮದ ಅಂಗವಾಗಿ ಮೈಸೂರು ಮಹಾ ನಗರ ಪಾಲಿಕೆ ವತಿಯಿಂದ ನಡೆದ ಸ್ವಚ್ಛತಾ ದಿನಾಚರಣೆ ಕಾರ್ಯಕ್ರಮದಲ್ಲಿ ಮೈಸೂರು ನಗರವನ್ನು ತ್ಯಾಜ್ಯ ಮುಕ್ತ ಮಾಡುವಲ್ಲಿ ಶ್ರಮದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂಬಂಧ ಸ್ವಚ್ಛತಾ ರ್‍ಯಾಲಿ, ಶ್ರಮದಾನ, ಸ್ವಚ್ಛತಾ ಪ್ರತಿಜ್ಞೆ, ಮಾನವ ಸರಪಳಿ ಮುಂತಾದ ಕಾರ್ಯಕ್ರಮಗಳನ್ನು ನಗರ ಪಾಲಿಕೆ ವತಿಯಿಂದ



ಹಮ್ಮಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ 80 ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ಸ್  ಮತ್ತು ರೇಂಜರ್‌ಗಳು ಭಾಗವಹಿಸಿರುತ್ತಾರೆ.

* ಮೈಸೂರು ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ದಿನಾಂಕ 21 ಸೆಪ್ಟೆಂಬರ್ 2023 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 236 ಮಂದಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಈ ಮಾಹಿತಿ ಶಿಬಿರವನ್ನು ಉದ್ಘಾಟಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಮಾಹಿತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ಕೆ. ಬಸವರಾಜು, ಜಂಟಿ ರಾಜ್ಯ ಕಾರ್ಯದರ್ಶಿಗಳು, ಶ್ರೀಮತಿ ಗೀತಾ ನಟರಾಜ್, ರಾಜ್ಯ ಗೈಡ್ ಆಯುಕ್ತರು ಶ್ರೀ ಸುಕುಮಾರ್, ಶ್ರೀನಾಗೇಶ್ ಶಿವಪುರ್, ರಾಜ್ಯ ಸ್ಕೌಟ್ ತರಬೇತಿ ಆಯುಕ್ತರು, ಶ್ರೀ ಅರವಿಂದರವರು ಕಾರ್ಯನಿರ್ವಹಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.






* ಅಕ್ಟೋಬರ್ 01 ರಂದು 'ಏಕ್ ತಾರಿಕ್, ಏಕ್ ಘಂಟಾ ಸ್ವಚ್ಛತ ಹೈ ಸೇವಾ' ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 01 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಶ್ರಮದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದರು. ಜಿಲ್ಲಾ ಖಜಾಂಚಿಗಳಾದ ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಬೇಡನ್ ಪೊವೆಲ್ ಶಾಲೆ, ಶ್ರೀಮತಿ ರಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಗುಂಪು,  ಪ್ರೀಮಿಯರ್ ಸ್ಕೌಟ್ಸ್ ಮತ್ತು ಗೈಡ್ಸ್ ಗುಂಪು, ಪ್ರಗತಿ ಗೈಡ್ಸ್ ಗುಂಪು ಹಾಗೂ ಪ್ಯಾರಡೈಸ್ ಸ್ಕೌಟ್ ಗುಂಪಿನ 105 ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್, ಕಬ್ ಮತ್ತು ಬುಲ್‌ಬುಲ್‌ಗಳು ಭಾಗವಹಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



* ಅಕ್ಟೋಬರ್ 02 ರಂದು ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 85 ಕಬ್–ಬುಲ್‌ಬುಲ್, ಸ್ಕೌಟ್–ಗೈಡ್, ರೋವರ್–ರೇಂಜರ್, ಸ್ಕೌಟರ್ಸ್–ಗೈಡರ್ಸ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಬ್ಬಾಳು ಬಡಾವಣೆ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಮೋಹನ್ ಕುಮಾರ್ ಟಿ.ಏಸ್. ಹಾಗೂ ಮುಖ್ಯ ಶಿಕ್ಷಕರಾದ ಶ್ರೀಮತಿ ಎಂ.ಎಸ್. ನವೀನ ಹಾಗೂ ಸಹ ಶಿಕ್ಷಕರಾದ ಶ್ರೀ ಎಂ.ಎಸ್. ಮಂಜು, ಶ್ರೀ ಎಂ.ಎಸ್. ಪ್ರಸಾದ್, ಶ್ರೀ ಐ.ವಿ. ಯೋಗ ಹಾಗೂ ಶಾಲೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರೊಂದಿಗೆ ಶಾಲೆ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಮತ್ತು ಗಾಂಧಿ ಜಯಂತಿಯ ದಿನದಂದು ಸ್ವಚ್ಛತೆ ಮಾಡಲಾಯಿತು.



* ಅಕ್ಟೋಬರ್ 5. 6 ಮತ್ತು 7 ರಂದು ಜಿಲ್ಲಾ ಸಂಸ್ಥೆಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ನಿಪುಣ್ ಶಿಬಿರವನ್ನು ಆಯೋಜಿಸಲಾಗಿತ್ತು. 205 ರೋವರ್ಸ್ ಮತ್ತು ರೇಂಜರ್ಸ್ ಈ ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀ ರಾಘವೇಂದ್ರ ರೋವರ್ ವಿಭಾಗಕ್ಕೆ, ಶ್ರೀಮತಿ ಶಶಿರೇಖಾ, ರೇಂಜರ್ ವಿಭಾಗಕ್ಕೆ ನಾಯಕರುಗಳಾಗಿ ಕಾರ್ಯನಿರ್ವಹಿಸಿದರು.

* ಅಕ್ಟೋಬರ್ 10 ರಂದು ಮೈಸೂರಿನ Holy faith International schoolನಲ್ಲಿ ಕಬ್ ಮತ್ತು ಬುಲ್‌ಬುಲ್ ದಳಗಳ ಉದ್ಘಾಟನೆ ನೆರವೇರಿತು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ದಳಗಳ ಉದ್ಘಾಟನೆಯನ್ನು ಮಾಡಿದರು. ಶ್ರೀ ಅಜಯ್ ಕುಮಾರ್ ಜೈನ್ ಮತ್ತು ಶ್ರೀ ಕೆ. ರಾಮಪ್ರಸಾದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಅಕ್ಟೋಬರ್ 11 ರಂದು ಪದವಿಪೂರ್ವ ಕಾಲೇಜು ಭೇರ್ಯ, ಕೆ.ಆರ್. ನಗರದಲ್ಲಿ ರೋವರ್ ಮತ್ತು ರೇಂಜರ್ ಘಟಕಗಳ ಉದ್ಘಾಟನಾ ಕಾರ್ಯಕ್ರಮ ನೆರವೇರಿತು. ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಗಳು ಉದ್ಘಾಟನೆಯನ್ನು ನೆರವೇರಿಸಿದರು.

## ಅಭಿನಂದನೆಗಳು



77ನೇ ಸ್ವಾತಂತ್ರ್ಯ ಮಹೋತ್ಸವದ ಪ್ರಯುಕ್ತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ. ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ, ಹೊಳೆನರಸೀಪುರದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀಮತಿ ಕುಮುದ ಆರ್. ಅವರು ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ ಅವರೂ ಸೇರಿದಂತೆ ವಿವಿಧ ಗಣ್ಯಾತಿಗಣ್ಯರು ಉಪಸ್ಥಿತರಿದ್ದರು.

–ರಾಜ್ಯ ಕಾರ್ಯದರ್ಶಿ

## ರಾಮನಗರ

ಅಕ್ಟೋಬರ್ 04 ರಂದು ರಾಮನಗರ ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು ಜಿಲ್ಲಾ ಮತ್ತು ತಾಲ್ಲೂಕು ದೈಹಿಕ ಶಿಕ್ಷಣಧಿಕಾರಿಗಳು, ಗುಚ್ಚ ಸಂಪನ್ಮೂಲ ವ್ಯಕಿ (ಸಿ.ಆರ್.ಪಿ) ಮತ್ತುಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿ.ಆರ್.ಸಿ)ಗಳಿಗೆ ನೋಡಲ್ ಅಧಿಕಾರಿಗಳಿಗೆ ಜಿಲ್ಲಾ ಮಟ್ಟದ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತರಬೇತಿ ಸಂಸ್ಥೆ ರಾಮನಗರ (ಡಯಟ್)ನಲ್ಲಿ ಹಮ್ಮಿಕೊಳ್ಳಲಾಗಿತ್ತು. ರಾಮನಗರ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ, ಮಾಹಿತಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲಾ ಪದಾಧಿಕಾರಿಗಳಿಗೆ ಸ್ವಾಗತ ಕೋರಿದರು. ಎಲ್ಲಾ ಗಣ್ಯರುಗಳ ಸಮ್ಮುಖದಲ್ಲಿ ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಾಗಾರಕ್ಕೆ ಚಾಲನೆ ನೀಡಲಾಗಿತು. ನಂತರ ರಾಜ್ಯ ಕಾರ್ಯದರ್ಶಿಗಳು ಪ್ರಾಸ್ತಾವಿಕ ನುಡಿ ನುಡಿದರು. ನಂತರ ಶ್ರೀಮತಿ ಮಂಜುಳ ಕೆ.ಎಲ್.ರವರು ಮಾತನಾಡಿದರು. ನಂತರ ಶ್ರೀ ಸೋಮಲಿಂಗಯ್ಯ ರವರು ಮಾತನಾಡಿದರು, ನಂತರ ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡಿ ಎಲ್ಲಾ ಶಿಬಿರಾರ್ಥಿಗಳಿಗೆ ಶುಭಾಶಯ ತಿಳಿಸಿದರು. ನಂತರ ಶ್ರೀ ಕೃಷ್ಣಯ್ಯರವರು ವಂದನೆ ಸಲ್ಲಿಸಿದರು. ಶ್ರೀ ಗಂಗಪ್ಪಗೌಡ ಕೆ., ರಾಜ್ಯ ಕಾರ್ಯದರ್ಶಿಗಳು, ಶ್ರೀ ಕೃಷ್ಣಯ್ಯ, ಶ್ರೀ ನಾಗೇಶ್ ಆರ್. ಶಿವಪುರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ) ಉಪಸ್ಥಿತಿ ನೀಡಿದರು. ಜಿಲ್ಲಾ ಕಾರ್ಯದರ್ಶಿರವರು ಸರ್ವರಿಗೂ ಧನ್ಯವಾದಗಳನ್ನು ಸಲ್ಲಿಸಿದರು.



* ಜಿಲ್ಲಾ ಸಂಸ್ಥೆಯ ವತಿಯಿಂದ ಸೆಪ್ಟೆಂಬರ್ 23 ರಂದು ಜಿಲ್ಲಾ ಮಟ್ಟದ ದೇಶ ಭಕ್ತಿ ಗೀತಗಾಯನ ಕಾರ್ಯಕ್ರಮ ಹಾಗೂ ಜಾನಪದ ಗೀತಗಾಯನ ಸ್ಪರ್ಧೆಯನ್ನು ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆ, ಬಿಡದಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಗಣ್ಯರು ಆಗಮಿಸಿ ವೇದಿಕೆ



ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ವಾಗತ ವೇದಿಕೆಯಲ್ಲಿ ಜಿಲ್ಲಾ ಗೌರವ ಅಧ್ಯಕ್ಷರು ಶ್ರೀ ಸಿ.ಎಂ. ಲಿಂಗಪ್ಪ ಹಾಗೂ ಜ್ಞಾನ ವಿಕಾಸ ವಿದ್ಯಾ ಸಂಸ್ಥೆ ಸಂಸ್ಥಾಪಕ ರಾಮನಗರ ಎಂ.ಎಲ್.ಸಿ., ಶ್ರೀ ಗಿರೀಶ್. ಆರ್.ಎಸ್., ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ, ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ಭಾರತಿ ಜೆ., ತೀಪುಗಾರರು, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ರೋವರ್ ಲೀಡರ್ ಮತ್ತು ರೇಂಜರ್ ಲೀಡರ್ ಮತ್ತು ಕಬ್ ಮತ್ತು ಬುಲ್‌ಬುಲ್ ಸ್ಕೌಟ್ಸ್ ಮತ್ತು ಗೈಡ್ಸ್ ಸದರಿ ಶಾಲೆಯ ಇತರೆ ಶಿಕ್ಷಕರು ಮತ್ತು ಎಸ್.ಜಿ.ವಿ.ರವರು ಭಾಗವಹಿಸಿದ್ದರು.

## ಶಿವಮೊಗ್ಗ

ಆಗಸ್ಟ್ 20 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಸದ್ಭಾವನಾ ದಿನವನ್ನು ಆಚರಿಸಲಾಯಿತು. "ಭಾರತ ದೇಶ ಕಂಡ ಮಹಾನ್ ವ್ಯಕ್ತಿಗಳಲ್ಲಿ ಶ್ರೀ ರಾಜೀವ್ ಗಾಂಧಿಯವರು ಕೂಡ ಒಬ್ಬರು, ಅವರ ಹುಟ್ಟುಹಬ್ಬವನ್ನು ರಾಷ್ಟ್ರೀಯ ಸದ್ಭಾವನ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಅವರು ಅತಿ ಚಿಕ್ಕ ವಯಸ್ಸಿನಲ್ಲಿ ಸಾಕಷ್ಟು ಸಾಧನೆ ಮಾಡಿ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ. ಅದೇ ರೀತಿ ಮಾಜಿ ಮುಖ್ಯಮಂತ್ರಿ ದಿ. ಶ್ರೀ ದೇವರಾಜ್ ಅರಸ್, ಹಿಂದುಳಿದ ವರ್ಗದವರಿಗೆ ಸಮಾನತೆಯನ್ನು ಕಲ್ಪಿಸಿಕೊಟ್ಟ ಮಹಾನ್ ವ್ಯಕ್ತಿ ಅವರ 108ನೇ ಜನ್ಮ ದಿನಾಚರಣೆಯನ್ನು ಸಹ ಆಚರಿಸುತ್ತಿದ್ದೇವೆ" ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ ಮಾತನಾಡಿದರು. ಶ್ರೀ ರಾಜೀವ್ ಗಾಂಧೀ ಹಾಗೂ ಶ್ರೀ ದೇವರಾಜ್ ಅರಸ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸದ್ಭಾವನಾ ದಿನದ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು. ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆಯ ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸರವರ ನೇತೃತ್ವದಲ್ಲಿ ಸರ್ವಧರ್ಮ ಪ್ರಾರ್ಥನೆ ನಡೆಯಿತು. ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ರಾಜೇಶ ಅವಲಕ್ಕಿ ನೆರವೇರಿಸಿದರು. ನಗರದ ವಿವಿಧ ಶಾಲೆಯ ಸುಮಾರು 70 ಸ್ಕೌಟ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾ ಖಜಾಂಚಿ ಶ್ರೀಮತಿ ಚೂಡಾಮಣಿ ಇ. ಪವಾರ, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ಉಪಸ್ಥಿತರಿದ್ದರು.



* ಸೆಪ್ಟೆಂಬರ್ 01 ಮತ್ತು 02ರಂದು ಜಿಲ್ಲಾ ಸ್ಕೌಟ್ ಭವನ, ಶಿವಮೊಗ್ಗದಲ್ಲಿ ಶ್ರೀಮತಿ ಭಾರತಿ ಡಾಯಸ್, ಎಲ್.ಟಿ.(ಜಿ) ರವರ ನಾಯಕತ್ವದಲ್ಲಿ :ಬನ್ನಿ ಆಂಟಿ ತರಬೇತಿ" ಶಿಬಿರವು ನಡೆಯಿತು. ಈ




ತರಬೇತಿಗೆ ಶಿವಮೊಗ್ಗ, ಭದ್ರಾವತಿ, ಸಾಗರ ತಾಲ್ಲೂಕಿನ ಖಾಸಗಿ ಶಾಲೆಯ ಒಟ್ಟು 34 ಶಿಕ್ಷಕಿಯರು ಪಾಲ್ಗೊಂಡಿದ್ದರು. ಮಕ್ಕಳ ಆರೋಗ್ಯ ವೈಯಕ್ತಿಕ ಸ್ವಚ್ಛತೆ, ಪೌಷ್ಟಿಕತೆ, ನರಮಂಡಲ ಬಗ್ಗೆ ತಿಳಿಸಿಕೊಡಲು ಖ್ಯಾತ ವೈದ್ಯರಾದ ಡಾ॥ ಧನಂಜಯ ಸರ್ಜಿರವರನ್ನು ಕರೆಸಿ ಮಾರ್ಗದರ್ಶನ ನೀಡಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ ಶುಭಕೋರಿದರು. ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.

* ಸೆಪ್ಟೆಂಬರ್ 09 ರಂದು ಡಿಡಿಪಿಯು ಕಚೇರಿಯಲ್ಲಿ ಪದವಿ ಪೂರ್ವ ಉಪನ್ಯಾಸಕ/ಕಿಯರ ರೋವರಿಂಗ್-ರೇಂಜರಿಂಗ್ ಮಾಹಿತಿ ಶಿಬಿರವು ನಡೆಯಿತು. "ಪ್ರತಿನಿತ್ಯದ ಬದುಕಿನಲ್ಲಿ ನಾವು ಎಷ್ಟೇ ಸಾಧನೆ ಮಾಡಿದರೂ. ಆದ್ದರಿಂದ ಮಾಹಿತಿ ಕಾರ್ಯಗಾರದಲ್ಲಿ ಭಾಗವಹಿಸಿ ತರಬೇತಿ ಪಡೆಯುವುದು ಅತ್ಯಂತ ಅವಶ್ಯಕವೆಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾಹಿತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಪದವಿಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮಾನ್ಯ ಶ್ರೀ ಬಿ. ಕೃಷ್ಣಪ್ಪ ಮಾತನಾಡಿ ಇಷ್ಟೊಂದು ಸಂಖ್ಯೆಯಲ್ಲಿ ತಾವೆಲ್ಲ ಬಂದಿರುವುದು ತುಂಬಾ ಖುಷಿಯಾಗುತ್ತಿದೆ. ಈ ಶಿಬಿರದ ಲಾಭ ಪಡೆದುಕೊಂಡು ತಮ್ಮ ಕಾಲೇಜಿನ ಮಕ್ಕಳಿಗೆ ಈ ಶಿವಮೊಗ್ಗದ ಪ್ರತಿಯೊಂದು ಕಾಲೇಜಿನಲ್ಲಿ ಘಟಕವನ್ನು ಕಡ್ಡಾಯವಾಗಿ ಪ್ರಾರಂಭಿಸಬೇಕೆಂದು ತಿಳಿಸಿದರು. ಇನ್ನೊಬ್ಬ ಅತಿಥಿಯಾಗಿ ಬಂದಂತಹ ಎನ್.ಇ.ಎಸ್. ಸಂಸ್ಥೆಯ ಅಕಾಡೆಮಿಕ್ ಆಡ್ವೆಸರ್ ಆದ ಶ್ರೀ ಎ.ಎನ್. ರಾಮಚಂದ್ರ ಸಹ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ ಮಾತನಾಡುತ್ತಾ "ಮಕ್ಕಳಿಗೆ ಅನೇಕ ಲಾಭಗಳು ಸ್ಕೌಟಿಂಗ್-ಗೈಡಿಂಗಿನಿಂದ ಸಿಗುತ್ತದೆ. ಅಲ್ಲದೆ ಅವರುಗಳು ಶಾರೀರಿಕವಾಗಿ ಮಾನಸಿಕವಾಗಿ ಪಾರಮಾರ್ಥಿಕವಾಗಿ



ಬೆಳೆಯುವಲ್ಲಿ ನಾಯಕತ್ವವನ್ನು ತೆಗೆದುಕೊಳ್ಳುವಲ್ಲಿ ಅನುಕೂಲವಾಗುತ್ತದೆ" ಎಂದು ತಿಳಿಸಿದರು. ಈ ಶಿಬಿರದ ನಾಯಕತ್ವವನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ ನಿರ್ವಹಿಸಿದರು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಂ. ಗಣಪತಿ, ಶ್ರೀ ಹೆಚ್. ಶಿವಶಂಕರ, ಶ್ರೀ ಎಂ. ಹೇಮಲತಾ ಕಾರ್ಯನಿರ್ವಹಿಸಿದರು. ಜಿಲ್ಲೆಯ 88 ಉಪನ್ಯಾಸಕ ಉಪನ್ಯಾಸಕಿಯರು ಭಾಗವಹಿಸಿದ್ದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್, ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಭಾರತಿ ಚಂದ್ರಶೇಖರ್, ಸೇವಾ ರೋವರ್ಸ್-ರೇಂಜರ್ಸ್‌ಗಳು ಹಾಗೂ ಉಳಿದ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 14 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್ಸ್, ರೋವರ್-ರೇಂಜರ್, ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಿದ್ದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ ಉದ್ಘಾಟಿಸಿ, ಶುಭಕೋರಿ ಚಾಲನೆ ನೀಡಿದರು. ನಿರ್ಣಾಯಕರಾಗಿ ಶ್ರೀಮತಿ ರೂಪಾಹೊಳ್ಳ, ಶ್ರೀಮತಿ ಸಂಧ್ಯಾರಾಣಿ, ಶ್ರೀಮತಿ ಅನಿತಾ ಗೋಪಾಲಕೃಷ್ಣರವರಿದ್ದು 6 ತಾಲ್ಲೂಕಿನ ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.




* ಸೆಪ್ಟೆಂಬರ್ 19 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ದಳ ನಾಯಕ ನಾಯಕಿಯರಿಗೆ ಗೀತಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ.ಪಿ. ಬಿಂದುಕುಮಾರ ವಹಿಸಿಕೊಂಡಿದ್ದರು ಈ ಕಾರ್ಯಕ್ರಮದ ಸಂಘಟನೆಯನ್ನು ಎ.ಎಸ್.ಒ.ಸಿ. ಶ್ರೀಮತಿ ಭಾರತಿ ಡಾಯಸ್ ನಿರ್ವಹಿಸಿದರು.



## ತುಮಕೂರು

ಸೆಪ್ಟೆಂಬರ್ 22 ರಂದು ತುರುವೇಕೆರೆ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಶಿಕ್ಷಕರ ಸಮಾವೇಶ ಹಾಗೂ ಕೌನ್ಸಿಲ್ ಸಭೆ ಜರುಗಿತು. ಕಾರ್ಯಕ್ರಮವನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಧನಪಾಲ್‌ರವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸೋಮಶೇಖರ್‌ರವರು ಮತ್ತು ಜಿಲ್ಲಾ ತಾಲ್ಲೂಕು ದೈಹಿಕ ಪರಿವೀಕ್ಷಕರು ಶ್ರೀ ಮೋಹನ್ ತಾಲ್ಲೂಕು ನೋಡಲ್ ಅಧಿಕಾರಿಗಳು ಮತ್ತು ಜಿಲ್ಲಾ ತಾಲ್ಲೂಕು ದೈಹಿಕ ಪರಿವೀಕ್ಷಕರು ಶ್ರೀ ಮೋಹನ್ ತಾಲ್ಲೂಕು ನೋಡಲ್ ಅಧಿಕಾರಿಗಳು ಮತ್ತು ಜಿಲ್ಲಾ ಸಹಾಯಕ ಆಯುಕ್ತರು ಶ್ರೀ ಹುಚ್ಚಯ್ಯ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಗಂಗಾಧರ್ ಉಪಸ್ಥಿತರಿದ್ದರು.




* ಜಿಲ್ಲಾ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 23 ರಿಂದ 24ರ ವರೆಗೆ ಅಂಗನವಾಡಿ ಕಾರ್ಯಕರ್ತರಿಗೆ ಬನ್ನಿಸ್ ತರಬೇತಿ ಶಿಬಿರವನ್ನು ಆಯೋಜಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಂದ್ರ ಷಾರವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಹುಚ್ಚಯ್ಯ ಜಿಲ್ಲಾ ಸಹಾಯಕ ಆಯುಕ್ತರು ಸೆಂಟ್ ಮೇರಿ ಶಾಲೆಯ ಪ್ರಾಂಶುಪಾಲರು ಆಗಮಿಸಿದ್ದರು. ಬನ್ನಿಸ್ ತರಬೇತಿಯ ಶಿಬಿರದ ನಾಯಕರಾಗಿ ಶ್ರೀಮತಿ ಕೃಪಾ ವಿಜಯ್‌ರವರು ರಾಜ್ಯ ಸಂಸ್ಥೆಯಿಂದ ಆಗಮಿಸಿದ್ದರು. ತುಮಕೂರು ತಾಲ್ಲೂಕಿನ 164 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.



* ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಆಶಾ ಪ್ರಸನ್‌ಕುಮಾರ್ ಮತ್ತು ಜಿಲ್ಲಾ ಪದಾಧಿಕಾರಿಗಳ ತಂಡ ತುಮಕೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಮತ್ತು ಕುಲ ಸಚಿವರನ್ನು ಭೇಟಿ ಮಾಡಿ ಬೆಂಗಳೂರು ವಿಭಾಗದ ರೋವರ್ ಸ್ಕೌಟ್



ಲೀಡರ್ ಮತ್ತು ರೇಂಜರ್ ಲೀಡರ್‍ಗಳ ಮಾಹಿತಿ ಶಿಬಿರಕ್ಕೆ ಹೆಚ್ಚು ಉಪನ್ಯಾಸಕರನ್ನು ನಿಯೋಜಿಸುವಂತೆ ಮನವಿ ಸಲ್ಲಿಸಲಾಯಿತು.

* ಸೆಪ್ಟೆಂಬರ್ 28 ರಂದು ಜಿಲ್ಲಾ ಮಟ್ಟದ ಕಬ್ಸ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಜನಪದ ಗೀತೆ, ದಳನಾಯಕಗಳಿಗೆ ದೇಶಭಕ್ತಿ ಗೀತೆಗಳು ಸ್ಪರ್ಧೆಯನ್ನು ಜಿಲ್ಲಾ ಸಂಸ್ಥೆ ವತಿಯಿಂದ ನಡೆಸಲಾಯಿತು, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಆಶಾ ಪ್ರಸನ್ನಕುಮಾರ್ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ವಿದ್ಯಾರ್ಥೀಗಳು ಹಾಜರಿದ್ದರು.



* ಸೆಪ್ಟೆಂಬರ್ 16 ರಂದು ಸೈಂಟ್ ಮೇರಿಸ್ ಶಾಲೆಯಲ್ಲಿ ದೀಕ್ಷಾ ಸಮಾರಂಭ ನಡೆಯಿತು. ಕಾರ್ಯಕ್ರಮದಲ್ಲಿ ತಾಲ್ಲೂಕು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕುಮಾರ್, ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ ಶೆಟ್ಟರು, ಹಾಗೂ ಕಬ್ಸ್‌ನ ತರಬೇತುದಾರರಾದ ಮತ್ತು ರಾಜ್ಯ ಪ್ರತಿನಿಧಿ ಶ್ರೀ ಬಸವಾಚಾರ್ (ಎ.ಎಲ್.ಟಿ.) ಶ್ರೀ ನವೀನ್ ಕುಮಾರ್, ಜಿಲ್ಲಾ ಸಂಘಟಕರು, ಶಾಲಾ ಆಡಳಿತ ಮಂಡಳಿಯ ದಳ ನಾಯಕರು ಭಾಗವಹಿಸಿದ್ದರು. ಇದೇ ಸಂರ್ಭದಲ್ಲಿ ಸ್ಕೌಟ್–ಗೈಡ್ ಕಬ್–ಬಲ್‌ಬುಲ್ ವಿದ್ಯಾರ್ಥಿಗಳು ಪರಿಸರ ಸ್ನೇಹಿ ಗಣೇಶನ ಮೂರ್ತಿ ತಯಾರಿಸಿದರು.

* ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಬ್ಬಿ ತಾಲ್ಲೂಕಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಶ್ರೀ ರಾಘವೇಂದ್ರ ಸ್ವಾಮಿಯ ಪುಣ್ಯಸ್ಮರಣೆಯ ಕಾರ್ಯದಲ್ಲಿ ಸತತವಾಗಿ ಮೂರು ದಿನಗಳ ಕಾಲ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

* ಸೆಪ್ಟೆಂಬರ್ 06 ರಂದು ಸ್ಥಳೀಯ ಸಂಸ್ಥೆ ತಿಪಟೂರು ತಾಲ್ಲೂಕಿನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ಹಾಗೂ ನೂತನ ಕಬ್ಸ್–ಬುಲ್ಬುಲ್, ಸ್ಕೌಟ್ಸ್–ಗೈಡ್ಸ್ ಘಟಕಗಳ ಉದ್ಘಾಟನೆ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಸ್ಥರಾದ ಶ್ರೀ ಹನುಮ ರಂಗಯ್ಯನವರು ವಹಿಸಿದ್ದರು. ಶ್ರೀ ನಂದಕುಮಾರ್, ಶಾಲೆಯ ಪ್ರಾಂಶುಪಾಲರು, ಸ್ಥಳೀಯ ಸಂಸ್ಥೆ ಕಾರ್ಯರ್ಶಿ ಶ್ರೀ ನಾಗರಾಜು, ತಾಲ್ಲೂಕು ದೈಹಿಕ ಪರಿಕ್ಷಕರಾದ ಶ್ರೀಮತಿ ಶಮಂತ, ಶ್ರೀ ಮಹೇಶ್ ಗಣೇಶ್ ಗುಡಿ ಜಿಲ್ಲಾ ತರಬೇತುದಾರರು, ಶ್ರೀ ನವೀನ್ ಕುಮಾರ್, ಜಿಲ್ಲಾ ಸಂಘಟಕರು, ದಳನಾಯಕರುಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜಿಲ್ಲೆಯ ಕಬ್ಸ್ ಮತ್ತು ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ತೃತೀಯ ಚರಣ್ ಮತ್ತು ಸ್ವರ್ಣ ಪಂಕ್, ಪರೀಕ್ಷೆ ಹಾಗೂ ಚತುರ್ಥ ಚರಣ್ ಮತ್ತು ಹೀರಕ್ ಪಂಕ್ ಪರೀಕ್ಷಾ ತಯಾರಿ ಶಿಬಿರವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು. ಶಿಬಿರದ ನಾಯಕರಾಗಿ ಶ್ರೀ ಬಸವಚಾರ್ ಫ್ರೀ ಎ.ಎಲ್.ಟಿ. (ಕಬ್) ಹಾಗೂ ರಾಜ್ಯ ಪ್ರತಿನಿಧಿ, ಶ್ರೀ ಲಕ್ಷ್ಮಿದೇವಮ್ಮ, ಶ್ರೀ ರಾಮಚಂದ್ರ ಸಹ ನಾಯಕರಾಗಿ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ಕಬ್ ವಿಭಾಗದಿಂದ 84 ಬುಲ್‌ಬುಲ್ ವಿಭಾಗದಿಂದ 81 ಒಟ್ಟು 165 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 09 ರಂದು ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲ್ಲೂಕಿನ ಆದಿಚುಂಚನಗಿರಿ ಆಸ್ಪತ್ರೆ ಬಿ.ಜಿ.ನಗರ, ಕುಮಾರ್ ಆಸ್ಪತ್ರೆ ಮತ್ತು ಶ್ರೀರಂಗ ಆಸ್ಪತ್ರೆ ತಿಪಟೂರು ಇವರ ಸಹಯೋಗದಲ್ಲಿ ನೊಣವಿನಕೆರೆ BGS ಸಮುದಾಯ ಭವನದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾಯಸಂದ್ರದ SBG ವಿದ್ಯಾಲಯ. NVSJC. NVSGHS ಮತ್ತು ಮಣೆಚಂಡುರು ಶಾಲೆಯ ಒಟ್ಟು 30 ಸ್ಕೌಟ್ ಮತ್ತು 20 ಗೈಡ್ಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

## ವಿಜಯಪುರ

ಜಿಲ್ಲಾ ಸಂಸ್ಥೆ ವಿಜಯಪುರ. ಚಿನ್ಮಯಿ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆ ಲೋಟಸ್ ಜಿಲ್ಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಪ್ರತಿಭಾ ಪಾಟೀಲರವರ ನೇತೃತ್ವದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಅಕ್ಟೋಬರ್ 14 ಮತ್ತು 15 ರಂದು ಎರಡು ದಿನಗಳ ಕಾಲ ಶ್ರೀಮತಿ ವಾಸಂತಿಬಾಯಿ ಜಿಗಜಿನಿ, ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ ತಾ.ಜಿ. ವಿಜಯಪುರ ಇಲ್ಲಿ ಶಿಬಿರವಾಸ (ಸ್ವಾವಲಂಬಿ) ತರಬೇತಿಯನ್ನು ಹಮ್ಮಿಕೊಂಡಿದ್ದರು. ಶಿಬಿರದಲ್ಲಿ 16 ಸ್ಕೌಟ್ಸ್ 24 ಗೈಡ್ಸ್ ಮಕ್ಕಳು ಹಾಗೂ ಶಿಕ್ಷಕವೃಂದ ಭಾಗವಹಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪಿ.ಎಸ್. ಕುಂಬಾರರವರು ಭೇಟಿ ನೀಡಿ ಮಕ್ಕಳ ಪ್ರಗತಿಯನ್ನು ಹಾಗೂ ಕ್ರಿಯಾಶೀಲತೆಯನ್ನು ಮೆಚ್ಚಿ ಶಾಲೆಯ ಆಡಳಿತ ಮಂಡಳಿಗೆ ಅಭಿನಂದನೆಗಳು ತಿಳಿಸಿದರು. ಸ್ಕೌಟರ್ ರಾಜ್ಯ ಪ್ರತಿನಿಧಿಗಳಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಭೇಟಿ ನೀಡಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ತಮ್ಮ ಅನುಭವವನ್ನು ಹಂಚಿಕೊಂಡರು.



## ವಿಜಯನಗರ

ಜಿಲ್ಲಾ ಸಂಸ್ಥೆ ವತಿಯಿಂದ ಅಕ್ಟೋಬರ್ 12 ರಂದು ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ ಗುರುಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಬಿ.ಆರ್.ಪಿ.ಗಳು, ಸಿ.ಆರ್.ಪಿ.ಗಳಿಗೆ ಒಂದು ದಿನದ ಜಿಲ್ಲಾ ಮಟ್ಟದ ಮಾಹಿತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಯುವರಾಜ್ ಮಾನ್ಯ ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ವಿಜಯನಗರ ಜಿಲ್ಲೆ ಇವರು ಉದ್ಘಾಟಿಸಿದರು. ಮಾನ್ಯ ಉಪನಿರ್ದೇಶಕರು ತಮ್ಮ ಉದ್ಘಾಟನಾ ನುಡಿಯಲ್ಲಿ 'ಸ್ಕೌಟ್ಸ್ ಮತ್ತು ಗೈಡ್ಸ್ ಒಂದು ಉತ್ತಮ ಸಂಸ್ಥೆಯಾಗಿದ್ದು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ದಳಗಳನ್ನು ತೆರೆಯುವಂತೆ ನೋಡಿಕೊಳ್ಳಲು ಸೂಚಿಸಿದರು'. ಶಿಬಿರದ ಅಧ್ಯಕ್ಷ ಸ್ಥಾನ ವಹಿಸಿದ ಹಗರಿಬೊಮ್ಮನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮೈಲೇಶ್ ಬೇವೂರ್‌ರವರು ಮಾತನಾಡಿ ಅಂತರಾಷ್ಟ್ರೀಯ ಜಾಂಬೂರಿಯ ಅವರ ಅನುಭವಗಳನ್ನು ಹಂಚಿಕೊಂಡರು ಎಲ್ಲಾ ಶಾಲೆಗಳಲ್ಲಿ ಘಟಕಗಳನ್ನು ತೆರೆಯುವಂತೆ ಕ್ರಮವಹಿಸುವುದಾಗಿ ಭರವಸೆ ನೀಡಿದರು. ಈ ಶಿಬಿರಕ್ಕೆ ರಾಜ್ಯ ಸಂಸ್ಥೆಯಿಂದ ಆಗಮಿಸಿದ್ದ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎನ್. ಶ್ರೀನಿವಾಸನ್, ರಾಜ್ಯ ಸಹಾಯಕ ಆಯುಕ್ತರು ಪ್ರಕಟಣೆ ವಿಭಾಗ ಇವರು ಶಿಬಿರಾರ್ಥಿಗಳಿಗೆ ಹೊಸತನ ಪ್ರಯೋಗವನ್ನು ಮಾಡಿ



ಕಬ್-ಬುಲ್‌ಬುಲ್, ಸ್ಕೌಟ್-ಗೈಡ್ಸ್, ರೋವರ್-ರೇಂಜರ್‌ಗಳನ್ನು ಕರೆಯಿಸಿ ಅವರುಗಳ ಮುಖಾಂತರ ನಮ್ಮಲ್ಲಿರುವ ವಿಭಾಗಗಳನ್ನು ಮಕ್ಕಳಿಂದಲೇ ಪರಿಚಯಿಸಿದರು. ಇದು ಎಲ್ಲರ ಮನಮುಟ್ಟುವಂತಿತ್ತು. ನಂತರ ಮೂಲಭೂತ ತತ್ತ್ವಗಳನ್ನು ಶಿಬಿರಾರ್ಥಿಗಳಿಂದ ಹೇಳಿಸಿ ಹೊಸತನವನ್ನು ತೋರಿಸಿದರು. ನಂತರ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ. ಮಂಜುನಾಥಪ್ಪ ಇವರು ಮಾತನಾಡಿ ಸ್ಕೌಟಿನ ಇತಿಹಾಸ. ಹುಟ್ಟು ಬೆಳವಣಿಗೆ ಇತರೆ ವಿಷಯಗಳಾದ ಮಕ್ಕಳ ಪ್ರಗತಿಪರ ಶಿಕ್ಷಣ. ವಯಸ್ಕರ ನಾಯಕರ ಪ್ರಗತಿಪರ ಶಿಕ್ಷಣದ ಬಗ್ಗೆ ತಿಳಿಸಿದರು. ನಂತರ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಎ. ರೇಣುಕಾರವರು ಶಿಬಿರಾರ್ಥಿಗಳಿಂದ ನಾವು ಏನನ್ನು ಅಪೇಕ್ಷಿಸುತ್ತೇವೆ ಎಂಬುದರ ಬಗ್ಗೆ ಅವರ ಸಲಹೆಗಳನ್ನು ಪಡೆದರು. ಈ ಸಮಾವೇಶದಲ್ಲಿ ಸ್ಥಳೀಯ ಕಾರ್ಯದರ್ಶಿಗಳಾದ ಶ್ರೀ ಎಂ.ಎಂ. ಬನ್ನಿಗೌಡ, ಖಜಾಂಚಿ ಶ್ರೀ ಎಸ್.ಕೆ.ಎಂ. ಕೊಟ್ರೇಶ್, ಗೌರಮ್ಮ, ಕೂಡ್ಲಿಗಿ ತಾಲ್ಲೂಕಿನ ಕಾರ್ಯದರ್ಶಿಗಳಾದ ಶ್ರೀ ತಿಂದಪ್ಪರವರು ಭಾಗವಹಿಸಿದ್ದರು. ಈ ಶಿಬಿರದಲ್ಲಿ 82 ಜನ ಅಧಿಕಾರಿ ವರ್ಗದವರು ಭಾಗವಹಿಸಿದ್ದರು. ಶ್ರೀ ಮಂಜುನಾಥ್ ಇವರು ಸ್ವಾಗತ ಕೋರಿದರು. ಶ್ರೀ ಎ.ಎನ್. ಬನ್ನಿಗೌಡ ಇವರು ವಂದನಾರ್ಪಣೆಯನ್ನು ನೆರವೇರಿಸಿದರು.

* ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ಪಟಾಲಂ ನಾಯಕ, ಸಹಾಯಕರ ತರಬೇತಿ ಶಿಬಿರವನ್ನು ಆನೆಗೊಂದಿಯ ವಿರೂಪಾಪುರ-ಗಡ್ಡೆಯಲ್ಲಿರುವ ಶ್ರೀ ಅಚ್ಯುತ ಆಶ್ರಮದಲ್ಲಿ ಅಕ್ಟೋಬರ್ 08 ರಿಂದ 10ರ ವರೆಗೆ ಹಮ್ಮಿಕೊಳ್ಳಲಾಗಿದ್ದು. ಈ ತರಬೇತಿ ಶಿಬಿರದಲ್ಲಿ ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲ್ಲೂಕುಗಳಿಂದ ಒಟ್ಟು 360 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ 30 ಜನ ಶಿಕ್ಷಕ ಶಿಕ್ಷಕಿಯರ ಪಾಲ್ಗೊಂಡಿದ್ದಾರೆ. ಪಟಾಲಂ ತರಬೇತಿ ಶಿಬಿರವನ್ನು ಉದ್ಘಾಟಿಸಿ ತಮ್ಮ ಉದ್ಘಾಟನಾ ನುಡಿಗಳನ್ನಾಡಿದ ಶ್ರೀ ಅಚ್ಯುತ ಆಶ್ರಮದ ಹಿರಿಯ ಸಾಧಕರಾದ ಶ್ರೀ ಸಿ.ಕೆ. ರಾವ್‌ರವರು ಇಂದಿನ ಮಕ್ಕಳಲ್ಲಿ ಶಿಸ್ತು ಮತ್ತು ಸಮಯ ಪಾಲನೆ ಬಹಳ ಮುಖ್ಯ ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಂಡರೆ ಬೇಕಾದ್ದನ್ನು ಸಾಧಿಸಬಹುದೆಂದರು. ಅಲ್ಲದೇ ಶ್ರೀ ಸ್ವಾಮಿ ಅಚ್ಯುತರ ಸಂಕ್ಷಿಪ್ತ ಜೀವನ ವೃತ್ತಾಂತವನ್ನು ಬಹಳ ಅಚ್ಚುಕಟ್ಟಾಗಿ ಮಕ್ಕಳಿಗೆ ತಿಳಿಸಿಕೊಟ್ಟರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪಿ. ಮಂಜುನಾಥಪ್ಪನವರು ಮಾತನಾಡಿ ಈ ತರಬೇತಿ ಶಿಬಿರದಲ್ಲಿ ಪಟಾಲಂ ಎಂದರೇನು? ಪಟಾಲಂ ನಾಯಕರ ನಾಯಕತ್ವ, ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಗೌರವಾನ್ವಿತ ನ್ಯಾಯ ಸಭೆ, ಪ್ರಥಮ ಚಿಕಿತ್ಸೆ ಹಾಗೂ ಗಂಟುಗಳ ಬಗ್ಗೆ ತಿಳಿಸಿಕೊಡಲಾಗುತ್ತದೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶ್ರೀ ಅಚ್ಯುತಾಶ್ರಮದ



ಮಂಜುನಾಥ್ ಎನ್.ಜೆ.ರವರು ಸ್ಕೌಟ್ ಮತ್ತು ಗೈಡ್ಸ್ ಮಕ್ಕಳಾದ ತಮ್ಮಿಂದ ಮುಂದೆ ಸಮಾಜಕ್ಕೆ ಒಳಿತಾಗಲಿ. ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿರಿ ಎಂದು ಹೇಳಿದರು. ಶ್ರೀ ಅಚ್ಯುತಾಶ್ರಮದ ಕಾರ್ಯದರ್ಶಿಗಳು ಹಾಗೂ ಹೊಸಪೇಟೆಯ ಡಾ. ರಾಧಾಕೃಷ್ಣ ಶಾಲೆಯ ಪ್ರಾಚಾರ್ಯರಾದ ಶ್ರೀ ಸಿ. ಶ್ರೀನಿವಾಸರಾವ್ ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್ ಶಿಕ್ಷಕ ಶಿಕ್ಷಕಿಯರು ಹಾಗೂ ಮಕ್ಕಳು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ. ಮಂಜುನಾಥಪ್ಪ ಅವರು ಸ್ವಾಗತಿಸಿದರು. ಹೊಸಪೇಟೆ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ತಿಪ್ಪೇಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು. ಶಿಬಿರದ ಸ್ಕೌಟ್ಸ್ ನಾಯಕರಾದ ಶ್ರೀ ಜಿ.ಎಂ. ರಾಜಶೇಖರ್ ವಂದಿಸಿದರು.



## ಯಾದಗಿರಿ

ಅಕ್ಟೋಬರ್ 16 ರಂದು ಯಾದಗಿರಿ ತಾಲ್ಲೂಕಿನ ದೋಖಾ ಜೈನ್ ಶಾಲೆಯ ನೂತನ ಸ್ಕೌಟ್ ಘಟಕ ಹಾಗೂ ಗೈಡ್ ಘಟಕವನ್ನು ಸಸಿಗೆ ನೀರು ನೀಡುವುದರ ಮೂಲಕ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸಿ.ಎಂ. ಪಟ್ಟೇದಾರ್‌ರವರು ಉದ್ಘಾಟಿಸಿದರು. ನಂತರ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ದೀಪಿಕಾ ರೆಡ್ಡಿರವರು ಶಾಲೆಯ ವಿದ್ಯಾರ್ಥಿಗಳಿಗೆ ಕಲ್ಯಾಣ ಕರ್ನಾಟಕ ವಿಭಾಗದಿಂದ ನೀಡಿರುವಂತಹ ಸಮವಸ್ತ್ರಗಳನ್ನು ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು.



ಸೆಪ್ಟೆಂಬರ್ 21 ರಂದು ಜಿಲ್ಲಾ ಮಟ್ಟದ ದೇಶ ಭಕ್ತಿ ಗೀತೆಗಾಯನ ಸ್ಪರ್ಧೆಯನ್ನು ಡಿ.ಡಿ.ಪಿ.ಐ.ರವರ ಕಚೇರಿ ಯಾದಗಿರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಚಂದ್ರಕಾಂತ್ ಕಣ್ಣೂರ್, ಎಪಿಸಿ, ಡಿಡಿಪಿಐ ಕಚೇರಿ ಯಾದಗಿರಿ ಅವರು ನೆರವೇರಿಸಿದರು. ಅತಿಥಿಗಳಾಗಿ ಹಾಗೂ ನಿರ್ಣಾಯಕರಾಗಿ ಶ್ರೀಮತಿ ಅಮೃತಬಾಯಿ, ಡಿವೈಸಿಸಿ, ಆರ್.ಎಂ.ಎಸ್.ಎ, ಯಾದಗಿರಿ, ಶ್ರೀ ಸೋಮಪ್ಪ, ಜಿಲ್ಲಾ ದೈಹಿಕ ಪರೀಕ್ಷಕರು ಯಾದಗಿರಿ, ಶ್ರೀಮತಿ ಅನುಸೂಯ ಪಾಟೀಲ್, ಉಪನ್ಯಾಸಕರು, ಸರ್ಕಾರಿ ಮಹಿಳಾ ಪದವಿ ಕಾಲೇಜು ಯಾದಗಿರಿ, ಶ್ರೀ ಚಂದ್ರಶೇಖರ ಗೋಗಿ ಸಂಗೀತ ಶಿಕ್ಷಕರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಸಿ.ಎಂ. ಪಟ್ಟೇದಾರ್, ಜಿಲ್ಲಾ ಸ್ಕೌಟ್ ಆಯುಕ್ತರು ಹಾಗೂ ಶ್ರೀ ರಾಘವೇಂದ್ರ ಅಳ್ಳಳ್ಳಿ, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಜಿಲ್ಲೆಯ ಫ್ಲಾಕ್ ಲೀಡರ್ಸ್, ಕಬ್ ಮಾಸ್ಟರ್, ಸ್ಕೌಟ್ಸ್ ಮಾಸ್ಟರ್ ಗೈಡ್ಸ್ ಕ್ಯಾಪ್ಟನ್ಸ್, ರೋವರ್ ಲೀಡರ್ಸ್‌ರವರು ಉಪಸ್ಥಿತರಿದ್ದರು. ಹಾಗೂ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸುವರ್ಣ, ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ರವರು ನೆರವೇರಿಸಿದರು. ಈ ಕಾರ್ಯಕ್ರಮವನ್ನು ಕು. ಮಹಮ್ಮದ್ ಶರ್ಫುದ್ದಿನ್, ಸ್ಕೌಟ್–ಗೈಡ್ ಸಹಾಯಕರವರು ಸಂಘಟಿಸಿದ್ದರು.



# ಯುವಕರಲ್ಲಿ ಹೃದಯಾಘಾತ

**ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ**
ಮಕ್ಕಳ ಹೃದಯ ತಜ್ಞರು, ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಹೃದಯಾಘಾತದಿಂದ ಧಿಡೀರ್ ಸಾವು ಸಂಭವಿಸುವ ಸಂಖ್ಯೆ ಹೆಚ್ಚುತ್ತಿದೆ. ಇದರಲ್ಲಿ ಯುವಕ–ಯುವತಿಯರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ವಿಚಾರ. ಸಾಮಾನ್ಯವಾಗಿ ಹೃದಯಾಘಾತಕ್ಕೆ ಪ್ರಮುಖ ಕಾರಣಗಳು ವಯಸ್ಸಾದವರಲ್ಲಿ ಮಧುಮೇಹ (Diabetes), ಅತೀ ಹೆಚ್ಚು ರಕ್ತದ ಒತ್ತಡ (B.P.) ಮತ್ತು ಜಿಡ್ಡು (Bad Cholestrol) ಆದರೆ ಇಂದು ಯುವಕರಲ್ಲಿ ಸಂಭವಿಸುತ್ತಿರುವ ಹೃದಯಾಘಾತಕ್ಕೆ ಮುಖ್ಯ ಕಾರಣಗಳು ಅವರ ಬದಲಾದ ಜೀವನ ಶೈಲಿ, ದುರಭ್ಯಾಸಗಳು. ಅವಶ್ಯಕವಾಗಿ ಮಕ್ಕಳು ಮತ್ತು ಯುವಕರು ಇವುಗಳನ್ನು ಅರಿತು ಅವುಗಳಿಂದ ದೂರವಿದ್ದು, ತಮ್ಮ ಹೃದಯವನ್ನು ರಕ್ಷಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ.

ದುರಭ್ಯಾಸಗಳಲ್ಲಿ ತಂಬಾಕು ಸೇವನೆ, ಆಲ್ಕೋಹಾಲ್, ಡ್ರಗ್ಸ್‌ಸೇವನೆ ಹೃದಯಾಘಾತಕ್ಕೆ ಪ್ರಮುಖ ಕಾರಣವಾಗಿವೆ. ಶಾಲೆಗೆ ಹೋಗುವ ಮಕ್ಕಳನ್ನು ಹುಕ್ಕಾ ಬಾರಿಗೆ ಆಕರ್ಷಿಸಿ ಅವರಿಗೆ ಸಿಗರೇಟು ಸೇದುವಂತೆ ಮಾಡುತ್ತಿದ್ದಾರೆ ದುಷ್ಟರು. ಅದೇ ರೀತಿ ಚಾಕಲೇಟಿನಲ್ಲಿ ಡ್ರಗ್ಸ್ ಸೇರಿಸಿ ಅವರನ್ನು ಅಡಿಕ್ಟ್ ಮಾಡುತ್ತಿದ್ದಾರೆ ಸಮಾಜ ಘಾತುಕರು. ಆದ್ದರಿಂದ ಶಾಲೆಗೆ ಹೋಗುವ ಮಕ್ಕಳಲ್ಲಿ ಅರಿವು ಮೂಡಿಸಿ, ಅವರನ್ನು ದುಷ್ಟರಿಂದ, ದುರಭ್ಯಾಸಗಳಿಂದ ದೂರವಿಡುವುದು ನಮ್ಮೆಲ್ಲರ ಕರ್ತವ್ಯ. ಪಾಲಕರು, ಶಿಕ್ಷಕರು, ಸಮಾಜದ ಪ್ರತಿಯೊಬ್ಬರೂ ಮಕ್ಕಳ ಆರೋಗ್ಯದ ಕಡೆಗೆ ಗಮನ ಕೊಡಬೇಕು. ಇಂದು ಜಂಕ್‌ಫುಡ್ ತಿನ್ನುವುದು ಫ್ಯಾಶನ್ ಆಗಿದೆ. ಇದರಿಂದ ಮಕ್ಕಳಲ್ಲಿ ಸ್ಥೂಲಕಾಯ (obesity) 30% ಹೆಚ್ಚಿದೆ. ಇದಕ್ಕೆ Cardio Diabetic Syndrome ಅಂತ ಕರೆಯುತ್ತೇವೆ. ಇದಲ್ಲದೆ ಯುವಕರು 6 Pack ಬೆಳೆಸಿಕೊಳ್ಳಲು gymಗೆ ಹೋಗಿ ಅಲ್ಲಿ ಕೊಡುವ Phormula ಸೇವಿಸಿ ಹೃದಯಾಘಾತಕ್ಕೆ ತುತ್ತಾಗುತ್ತಿದ್ದಾರೆ. ಇದಲ್ಲದೇ ಯುವಕರು ಆಲಸಿಗಳಾಗಿ ಕುಳಿತಲ್ಲೇ ಕುಳಿತು ಮೊಬೈಲ್, ಟಿ.ವಿ., ಕಂಪ್ಯೂಟರ್ ಗೇಮ್ಸ್ ಆಡಿ ನಿದ್ರೆಯಿಲ್ಲದೇ ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಮಕ್ಕಳು ಮತ್ತು ಯುವಜನತೆ ಆಟ–ಪಾಠದ ಜೊತೆಗೆ ಆರೋಗ್ಯಕರ ಜೀವನ ಶೈಲಿ ರೂಡಿಸಿಕೊಳ್ಳುವುದು ಬಹಳ ಮುಖ್ಯ.

# ಶ್ರದ್ಧಾಂಜಲಿ



**ಶ್ರೀ ವಾಸುದೇವ ಬೋಳಸೂರು,** ಮಾಜಿ ಕೋಶಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು 26 ಸೆಪ್ಟೆಂಬರ್ 2023 ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರಿಗೆ 85 ವರ್ಷ ವಯಸ್ಸಾಗಿತ್ತು. ಶ್ರೀಯುತರು ಹಲವು ವರ್ಷಗಳ ಕಾಲ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯಲ್ಲಿ ಕೋಶಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು ಹಾಗೂ ಜಿಲ್ಲೆಯಲ್ಲಿ ನಡೆಯುವ ಸ್ಕೌಟ್ಸ್-ಗೈಡ್ಸ್ ಶಿಬಿರಗಳು, ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.



**ಶ್ರೀ ಪ್ರಹ್ಲಾದರಾವ್,** ಮಾಜಿ ಕೋಶಾಧಿಕಾರಿಗಳು ಮತ್ತು ಸ್ಥಾನಿಕ ಆಯುಕ್ತರು (ಸ್ಕೌ), ಕೋಲಾರ ಇವರು 09.10.2023 ರಂದು ದೈವಾಧೀನರಾಗಿರುತ್ತಾರೆ. ಇವರಿಗೆ 80 ವರ್ಷ ವಯಸ್ಸಾಗಿತ್ತು. ಇವರು ಹಲವು ವರ್ಷಗಳು ಕೋಲಾರ ಜಿಲ್ಲಾ ಸಂಸ್ಥೆಯಲ್ಲಿ ಕೋಶಾಧಿಕಾರಿಯಾಗಿ ಹಾಗೂ ಸ್ಥಾನಿಕ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮಗಳು ಹಾಗೂ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರು ಕೋಲಾರ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು.



**ಶ್ರೀಮತಿ ವನಿತಾ,** ಎ.ಡಿ.ಸಿ.(ಜಿ), ಭಾರತ್ ಸ್ಕೌಟ್ಸ್-ಗೈಡ್ಸ್, ತುಮಕೂರು ಇವರು ಅಕ್ಟೋಬರ್ 16, 2023 ರಂದು ತುಮಕೂರಿನಲ್ಲಿ ನಿಧನ ಹೊಂದಿದರು. ಇವರು ಕಳೆದ ಐದು ವರ್ಷಗಳಿಂದ ತುಮಕೂರು ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಸಹಾಯಕ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದು ಜಿಲ್ಲಾ ಸಂಸ್ಥೆಯಿಂದ ನಡೆಯುವ ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಸಮವಸ್ತ್ರದೊಂದಿಗೆ ಭಾಗವಹಿಸುತ್ತಿದ್ದರು.



**ಶ್ರೀ ಮಹಾಂತೇಶ್,** ಕಬ್ ಮಾಸ್ಟರ್, ಡಿ.ವಿ.ವಿ. ಶಾಲೆ, ಕನಕಪುರ, ರಾಮನಗರ ಜಿಲ್ಲೆ ಇವರು 15 ಅಕ್ಟೋಬರ್ 2023 ರಂದು ನಿಧನ ಹೊಂದಿದರು. ಶ್ರೀಯುತರು ಕಬ್ ವಿಭಾಗದಲ್ಲಿ ಮುಂದುವರೆದ ತರಬೇತಿ ಪಡೆದಿದ್ದು, 02 ವರ್ಷಗಳಿಂದ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು. ಇವರು ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಕಬ್ಸ್ ಮಕ್ಕಳೊಂದಿಗೆ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.



**ಶ್ರೀ ಟಿ.ಎಸ್ ಮುನಿಯಪ್ಪ** (ಮೆಂಬರ್) ತೆರ್ನಹಳ್ಳಿ ಗಾಮ, ಕೋಲಾರ ಜಿಲ್ಲೆ. ಇವರು ಶ್ರೀ ವಿಶ್ವನಾಥ ವಿ., ಕೋಲಾರ ಜಿಲ್ಲಾ ಸಂಘಟಕರು ಇವರ ತಾತ. ದಿನಾಂಕ 10 ಅಕ್ಟೋಬರ್ 2023 ರಂದು ಸ್ವಗ್ರಾಮದಲ್ಲಿ ದೈವಾದೀನರಾಗಿರುತ್ತಾರೆ. ಶ್ರೀ ವಿಶ್ವನಾಥ .ವಿ, ಇವರನ್ನು 01ನೇ ತರಗತಿಯಿಂದ ಕಬ್ಸ್ ವಿಭಾಗಕ್ಕೆ ಸೇರಿಸಿ ಅಂದಿನಿಂದ ಇಂದಿನವರೆಗೂ ಪ್ರತಿ ಹಂತದಲ್ಲೂ ಇವರು ಬೆಳಸಿದರು. ಶ್ರೀಯುತರು ಮಂಡಲ್ ಪಂಚಾಯಿತ್ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.



ರಾಮನಗರ ಜಿಲ್ಲೆಯ ಹಿರಿಯ ಸ್ಕೌಟರ್, ರಾಷ್ಟ್ರಪ್ರಶಸ್ತಿ ಪುರಸ್ಕೃತರು ಸಮಾಜ ಸೇವಕರೂ ಆಗಿದ್ದ **ಶ್ರೀ ಶೇಷಗಿರಿರಾವ್ ಅವರು** 10 ಅಕ್ಟೋಬರ್ 2023 ರಂದು ರಾಮನಗರದಲ್ಲಿ ನಿಧನರಾದರು. ಇವರಿಗೆ 75 ವರ್ಷ ವಯಸ್ಸಾಗಿತ್ತು. ಶ್ರೀಯುತರು ರಾಮನಗರ ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಬೆಳೆಸಲು ಹಾಗೂ ಸ್ಕೌಟ್ ಭವನ ನಿರ್ಮಾಣಕ್ಕೆ ಬಹಳ ಶ್ರಮಪಟ್ಟಿದ್ದರು.



**ಶ್ರೀ ರವಿರಾಜಶೆಟ್ಟಿ,** ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಲ್ಕಿ ಸ್ಥಳೀಯ ಸಂಸ್ಥೆಯ ಗೌರವಾಧ್ಯಕ್ಷರಾಗಿದ್ದ ಇವರು 10 ಅಕ್ಟೋಬರ್ 2023 ರಂದು ಉಡುಪಿ ಜಿಲ್ಲೆ, ಮುಲ್ಕಿಯಲ್ಲಿ ನಿಧನರಾದರು. ಇವರ ಸರಳ ಸಜ್ಜನಿಕೆಯ ನುಡಿ, ಶಿಸ್ತು, ದಕ್ಷ ಪ್ರಾಮಾಣಿಕ ಮುಖ್ಯೋಪಾಧ್ಯಾಯರಾಗಿ, ಉತ್ತಮ ಭಾಷಣಕಾರರಾಗಿ ದಾನಿಗಳಾಗಿ, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುತ್ತಾರೆ. ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ನಡೆಯುತ್ತಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಡುತ್ತಿದ್ದರು.



**ಶ್ರೀ ಎನ್.ಎಸ್. ಅಡಿಗ,** ಸಹಾಯಕ ಜಿಲ್ಲಾ ಆಯುಕ್ತರು, ಭಾರತ್ ಸ್ಕೌಟ್ಸ್-ಗೈಡ್ಸ್, ಉಡುಪಿ ಜಿಲ್ಲೆ ಇವರು 2 ಸೆಪ್ಟೆಂಬರ್ 2023 ರಂದು ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿ ನಿಧನರಾದರು. ಇವರಿಗೆ 82 ವರ್ಷ ವಯಸ್ಸಾಗಿತ್ತು. ಶ್ರೀಯುತರು ಪ್ರೌಢಶಾಲಾ ಅಧ್ಯಾಪಕರಾಗಿ ಪದವಿಪೂರ್ವ ಕಾಲೇಜಿಗೆ ಪದೋನ್ನತಿ ಪಡೆದು ಉಪಾನ್ಯಾಸಕರಾಗಿ, ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು. ಸ್ಕೌಟ್ ಅಧ್ಯಾಪಕರಾಗಿದ್ದ ಇವರು ಬ್ರಹ್ಮಾವರ ಸ್ಥಳೀಯ ಸಂಸ್ಥೆ ಹುಟ್ಟು ಹಾಕುವಲ್ಲಿ ಮತ್ತು ಸಂಸ್ಥೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ತಮ್ಮ ನೇತೃತ್ವದಲ್ಲಿ ಅನೇಕ ಜಿಲ್ಲಾ ರ್‍ಯಾಲಿ ಮತ್ತು ತಾಲ್ಲೂಕು ಮಟ್ಟದ ಸ್ಕೌಟ್-ಗೈಡ್ ರ್‍ಯಾಲಿಗಳನ್ನು ನಡೆಸಿದ್ದರು. ತಮ್ಮ ಕೊನೆಯ ದಿನದವರೆಗೂ ಬ್ರಹ್ಮಾವರ ಸ್ಥಳೀಯ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಹಾಗೂ ಎ.ಡಿ.ಸಿ.ಯಾಗಿ ಸೇವೆ ಸಲ್ಲಿಸಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ



**ರಕ್ತವಿಲ್ಲದೆ ದೇಹವು ಹೇಗೆ ಬದುಕಲು ಸಾಧ್ಯವಿಲ್ಲವೋ,**
**ಹಾಗೆಯೇ ಶ್ರದ್ಧೆ ಮತ್ತು ಪ್ರಾರ್ಥನೆಗಳಿಲ್ಲದೆ**
**ಆತ್ಮವೂ ಕೂಡ ಬದುಕಲು ಸಾಧ್ಯವಿಲ್ಲ.**

– ಮಹಾತ್ಮ ಗಾಂಧಿ

ಕೆಎಂಎಫ್

ನಂದಿನಿ-ಕೇವಲ ಒಂದು ಬ್ರಾಂಡ್ ಮಾತ್ರ ಅಲ್ಲ !
ಅದು ಲಕ್ಷ್ಯಾಂತರ ಕುಟುಂಬಗಳ ಮನೆ ಮಾತಾಗಿದೆ

ನಂದಿನಿ ®




and many more

Milk that millions love

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
Toll Free No.: 1800 425 8030 | www.kmfnandini.coop

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)

Talent needs
a helping hand

SHAHEEN
GROUP OF INSTITUTIONS

# STSE Shaheen Talent Search Exam - 2023

Join the Ranks of Excellence with Shaheen Group of Institutions

Seeking an exclusive opportunity to fuel your educational journey at Shaheen Institution? Look no further! The Shaheen Talent Search Exam (STSE) is your definitive gateway to academic brilliance.

## Two Prestigious Exam Categories

**For Class 8th Students**

**4-Year Program (Class 9-12 NEET/JEE):** Open to aspiring students currently in the 8th standard (2023-24) looking to embark on a transformative educational journey from Class IX to XII at Shaheen Institution.

**For Class 10th Students**

**2-Year Program (Class 11- 12 NEET/JEE):** Tailored for students currently in Class 10 with plans to conquer the board examination in the year 2023-24. A stepping stone to the realm of Science education and an assured path to securing admissions in Class XI/PUC.

**Scholarship Categories Await:**

RANKERS
**Rs. 1,40,000** (Tuition, Hostel & Food Fees)

TOPPERS
**Rs. 70,000** (Tuition Fee)

For Registration
SCAN HERE

WINNERS
**Rs. 35,000** (Tuition Fee)

ACHIEVERS
**Rs. 7,000** (Tuition Fee)

For further details, visit our website
**www.shaheengroup.org**

Mark your Calendar: Exam Date
**24 December 2023**



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26